
ರಂಗಸಂಪನ್ನರು ಮಾಲಿಕೆ

# ಪಿ. ಗಂಗಾಧರಸ್ವಾಮಿ

ಮಂಜುನಾಥ ಬೆಳಕೆರೆ

ಪಿ. ಗಂಗಾಧರಸ್ವಾಮಿ



ಕರ್ನಾಟಕ ನಾಟಕ ಅಕಾಡೆಮಿ

ರಂಗ ಸಂಪನ್ನರು ಮಾಲಿಕೆ

# ಗಂಗಾಧರಸ್ವಾಮಿ .ಪಿ

ಮಂಜುನಾಥ ಬೆಳಕೆರೆ

ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು – ೫೬೦ ೦೦೨

**GANGADHARA SWAMY P.** (**Rangasampannaru Malike**) by **Manjunatha Belakere**, Published by **Mr. B. Manjunatha Aradhya**, Registrar, Karnataka Nataka Academy, Kannada Bhavana, J.C. Road, Bengaluru - 560 002. Phone: 080-22237484

ಹಕ್ಕುಗಳು : ಕರ್ನಾಟಕ ನಾಟಕ ಅಕಾಡೆಮಿ
ಮೊದಲ ಮುದ್ರಣ : ೨೦೧೭
ಪ್ರತಿಗಳು : ೧೦೦೦
ಪುಟಗಳು : x + ೯೦= ೧೦೦
ಬೆಲೆ : ರೂ. ೭೦/–

ಪ್ರಕಾಶಕರು
**ಬಿ. ಮಂಜುನಾಥ ಆರಾಧ್ಯ,** ರಿಜಿಸ್ಟ್ರಾರ್
ಕರ್ನಾಟಕ ನಾಟಕ ಅಕಾಡೆಮಿ
ಕನ್ನಡಭವನ, ಜೆ.ಸಿ.ರಸ್ತೆ
ಬೆಂಗಳೂರು – ೫೬೦ ೦೦೨
ದೂರವಾಣಿ: ೦೮೦–೨೨೨೩೭೪೮೪

**ಮುದ್ದಣ್ಣ ರಟ್ಟೇಹಳ್ಳಿ**
**ಎಸ್.ಕೆ. ಕೊನೆಸಾಗರ**
**ಎಂ.ಎಸ್. ಗುಣಶೀಲನ್**
ಪ್ರಕಟಣಾ ಸಮಿತಿ ಸದಸ್ಯರು

ರಕ್ಷಾಪುಟ ವಿನ್ಯಾಸ:
**ಕೃಷ್ಣ ರಾಯಚೂರು**

ಮುದ್ರಕರು:
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೦೭೫೮೧

# ಅಧ್ಯಕ್ಷರ ನುಡಿ

ಕರ್ನಾಟಕ ನಾಟಕಅಕಾಡೆಮಿ ಮೂರು ವರ್ಷದ ನಮ್ಮ ಅವಧಿಯ ಮುಕ್ತಾಯದ ಹಂತಕ್ಕೆ ಬಂದಿದ್ದೇವೆ. ಜಿಲ್ಲೆಗಳಲ್ಲಿ ನಾಟಕೋತ್ಸವ, ಹವ್ಯಾಸಿ ರಂಗ ತಂಡಗಳಿಗೆ ಶಿಬಿರ, ರಸಗ್ರಹಣ, ನಾಟಕ ಕಂಪನಿಗಳಿಗೆ ಹೊಸ ನಾಟಕ ಬರೆಸುವ ಯೋಜನೆ, ಪೌರಾಣಿಕ ರಂಗೋತ್ಸವ, ತಿಂಗಳ ನಾಟಕ, ರಂಗಗೀತೆ ಪ್ರಾತ್ಯಕ್ಷಿಕೆ, ಬಾಗಲಕೋಟೆ ಜಿಲ್ಲೆ ಇಳಕಲ್‌ನಲ್ಲಿ ೩೦ ದಿನಗಳ ವೃತ್ತಿ ರಂಗಭೂಮಿ ತರಬೇತಿ ಶಿಬಿರ, ಮುಂಬಯಿ, ದೆಹಲಿ ಹಾಗೂ ಕೇರಳದ ತ್ರಿಶೂರಿನಲ್ಲಿ ಹೊರರಾಜ್ಯ ನಾಟಕೋತ್ಸವ, ಕಾಸರಗೋಡಿನಲ್ಲಿ ಗಡಿನಾಡು ಬಹುಭಾಷಾ ನಾಟಕೋತ್ಸವ, ಬನಹಟ್ಟಿಯಲ್ಲಿ ಮಹಿಳಾ ನಾಟಕೋತ್ಸವ ಮತ್ತು ಮೈಂದರ್ಗಿಯಲ್ಲಿ ಗಡಿನಾಡ ನಾಟಕೋತ್ಸವ ಮುಂತಾದ ಹತ್ತು ಹಲವು ವಿನೂತನ ಕಾರ್ಯಕ್ರಮಗಳನ್ನು ಕಳೆದ ಮೂರು ವರ್ಷಕಾಲ ಹಮ್ಮಿಕೊಂಡಿದ್ದೆವು.

ವಿಜಯಪುರದಲ್ಲಿ ೨೦೧೫ ಅಕ್ಟೋಬರ್ ೨೪ ರಿಂದ ೩೦ ರ ವರೆಗೆ ನಡೆದ ರಾಜ್ಯ ವೃತ್ತಿರಂಗ ಸಮ್ಮೇಳನದಲ್ಲಿ ಎಲ್ಲ ಕಂಪನಿಗಳ ಕಲಾವಿದರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಐದು ದಿನಗಳ ಕಾಲ ಹತ್ತು ನಾಟಕ ಕಂಪನಿಗಳಿಗೆ ಏರ್ಪಡಿಸಿದ್ದ ನಾಟಕ ಸ್ಪರ್ಧೆರಂಗ ಇತಿಹಾಸದಲ್ಲಿ ಅಪರೂಪದ್ದಾಗಿತ್ತು. ಹಿರಿಯ ಕವಿಗಳಾದ ಬಿ.ಆರ್. ಅರಿಷಿಣಗೋಡಿ ಅವರಿಗೆ ಇಳಕಲ್‌ನಲ್ಲಿ, ಎಲ್.ಬಿ.ಕೆ. ಆಲ್ದಾಳ ಅವರಿಗೆ ಕಲಬುರಗಿಯಲ್ಲಿ, ಹಿರಿಯ ನಟ ಕಂಚಿಕೇರಿ ಶಿವಣ್ಣ ಅವರಿಗೆ ದಾವಣಗೆರೆಯಲ್ಲಿ ಏರ್ಪಡಿಸಿದ್ದ ಅಭಿನಂದನೆ, ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ ವಿಶೇಷವಾಗಿತ್ತು.

ಹಾವೇರಿ ಜಿಲ್ಲೆಯ ಶೇಷಗಿರಿಯಲ್ಲಿ ೨೧ ದಿನಗಳ ಕಾಲ ರಂಗ ನೇಪಥ್ಯ ಶಿಬಿರ, ರಾಮನಗರದ ಜಾನಪದ ಲೋಕದಲ್ಲಿ ನಡೆದ ಐದು ದಿನಗಳ ನಾಟಕ ರಚನಾ ಶಿಬಿರ, ಶಿರಸಿಯಲ್ಲಿ ನಡೆದ ರಂಗ ವಿಮರ್ಶಾ ಕಮ್ಮಟ, ದೆಹಲಿಯಲ್ಲಿ ನಡೆದ ವೃತ್ತಿ ಕಂಪನಿ ನಾಟಕೋತ್ಸವ ಹಾಗೂ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಏಳು ದಿನಗಳ ಕಾಲ ನಡೆದ ವೃತ್ತಿರಂಗಭೂಮಿ ಕಂಪನಿ ನಾಟಕೋತ್ಸವ ಕೆಲವು ಮೈಲುಗಲ್ಲುಗಳು. ವಿಶೇಷ ಘಟಕ ಯೋಜನೆಯಡಿ ೩೦ ಜಿಲ್ಲೆಗಳಲ್ಲಿ ರಂಗಶಿಬಿರ, ನಾಟಕ ಪ್ರದರ್ಶನ ಏರ್ಪಡಿಸಿದ್ದೇವೆ. ವಿಶೇಷ ಘಟಕ ಯೋಜನೆಯಡಿ ಐದು

ಕಲಾವಿದರ ಮತ್ತು ಗಿರಿಜನ ಉಪಯೋಜನೆಯಲ್ಲಿ ಇಬ್ಬರು ಕಲಾವಿದರ ಸಾಕ್ಷ್ಯಚಿತ್ರ ನಿರ್ಮಾಣ ಮಾಡಲಾಗಿದೆ. ೧೨ ವೃತ್ತಿ ನಾಟಕ ಕಂಪನಿಗಳ ಸಾಕ್ಷ್ಯಚಿತ್ರ ನಿರ್ಮಿಸಲಾಗಿದೆ. ಫೆಲೋಶಿಪ್ ಯೋಜನೆ ಮುಂದುವರಿದಿದೆ. ಸರಿಸುಮಾರು ೨೦ ವರ್ಷಗಳಿಂದ ಸ್ಥಗಿತಗೊಂಡಿದ್ದ ಕರ್ನಾಟಕ ನಾಟಕ ಅಕಾಡೆಮಿಯ ಮುಖವಾಣಿ 'ಸಂವಾದ' ಪತ್ರಿಕೆಯನ್ನು ಪುನರಾರಂಭಿಸಿದ್ದೇವೆ. ನಾಟಕರಚನಾ ಶಿಬಿರದಲ್ಲಿ ಆಯ್ಕೆಯಾದ 'ಏಳು ನಾಟಕಗಳು' ಸಂಕಲನವನ್ನು ಹೊರತರಲಾಗಿದೆ. ಧಾರವಾಡದಲ್ಲಿ ಫೆಬ್ರುವರಿ ೧೯ ರಿಂದ ೨೩ ರ ವರೆಗೆ ಐದು ದಿನಗಳ ಕಾಲ ಕರ್ನಾಟಕ ನಾಟಕ ಅಕಾಡೆಮಿಯು ರಾಜ್ಯಮಟ್ಟದ ಪ್ರಥಮ ಹವ್ಯಾಸಿ ರಂಗಭೂಮಿ ಸಮಾವೇಶ ಏರ್ಪಡಿಸಿದೆ.

ಪುಸ್ತಕಗಳ ಪ್ರಕಟನೆ ನಾಟಕ ಅಕಾಡೆಮಿಯ ಮಹಾತ್ವಾಕಾಂಕ್ಷೆಯ ಯೋಜನೆ. ಮೊದಲ ಸರ್ವ ಸದಸ್ಯರ ಸಭೆಯಲ್ಲಿ ಪ್ರಕಟಣಾ ಸಮಿತಿ ರಚಿಸಿ ಕಾರ್ಯಪ್ರವೃತ್ತರಾಗಿದ್ದೆವು. ಪ್ರಥಮ ಹಂತದಲ್ಲಿ ಜಿಲ್ಲಾ ರಂಗಮಾಹಿತಿ ಮಾಲಿಕೆ ಮತ್ತು ರಂಗಸಂಪನ್ನರು ಮಾಲಿಕೆಯ ೧೮ ಪುಸ್ತಕಗಳು ಬಿಡುಗಡೆಯಾಗಿವೆ. ಎರಡನೇ ಹಂತದಲ್ಲಿ ೧೫ ಪುಸ್ತಕಗಳು ಬಿಡುಗಡೆಯಾಗುತ್ತಿವೆ. ಶತಮಾನದ ಶಕಪುರುಷ ಏಣಗಿ ಬಾಳಪ್ಪ, ರಂಗಭೂಮಿ ಮತ್ತು ಮಹಿಳೆ ಪುಸ್ತಕಗಳನ್ನು ಹೊರತರಲಾಗಿದೆ. ೧೯೫೯ ರಿಂದ ೨೦೧೬ ರ ವರೆಗಿನ ನಾಟಕ ಅಕಾಡೆಮಿಯ ಎಲ್ಲಾ ಪ್ರಶಸ್ತಿ ಪುರಸ್ಕೃತರ ಪರಿಚಯದ ಪುಸ್ತಕವನ್ನು ಹೊರತರಲು ಕ್ರಮ ವಹಿಸಲಾಗುತ್ತಿದೆ. ಈ ಎಲ್ಲಾ ಕನಸು ಸಾಕಾರಗೊಳ್ಳಲು ಶ್ರಮಿಸಿದ ಪ್ರಕಟಣಾ ಸಮಿತಿ ಸದಸ್ಯರು/ನಾಟಕ ಅಕಾಡೆಮಿ ಸದಸ್ಯರು ಹಾಗೂ ಜಿಲ್ಲಾ ರಂಗ ಮಾಹಿತಿ ಮಾಲಿಕೆಯಡಿ ಸರಿಸುಮಾರು ೨೫ ಮತ್ತು ರಂಗಸಂಪನ್ನರು ಮಾಲಿಕೆಯಡಿ ೧೫ ಕಲಾವಿದರ ಪುಸ್ತಕಗಳನ್ನು ಬರೆದುಕೊಟ್ಟ ಎಲ್ಲಾ ಲೇಖಕರಿಗೆ, ಪುಸ್ತಕವನ್ನು ಸಕಾಲಕ್ಕೆ ಮುದ್ರಿಸಿಕೊಟ್ಟ ರಶ್ಮಿ ಪ್ರಿಂಟರ್ಸ್ ಅವರಿಗೂ, ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ. ಮಂಜುನಾಥ ಆರಾಧ್ಯ ಹಾಗೂ ಅಕಾಡೆಮಿಯ ಎಲ್ಲ ಸಿಬ್ಬಂದಿ ವರ್ಗದವರಿಗೂ ಕೃತಜ್ಞತೆಗಳು.

**ಎಲ್.ಬಿ.ಶೇಖ (ಮಾಸ್ತರ)**
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

# ಅಕಾಲಿಕ ನಿಧನಕ್ಕೆ ಮುಂಚೆ ಆಕರ್ಷಕ ಚಿತ್ರಣ

ಗಂಗಾಧರಸ್ವಾಮಿ ಹಿರಿಯ ರಂಗಕರ್ಮಿ. ೧೯೭೫ ರಲ್ಲಿ ಆರಂಭವಾದ ಸಮುದಾಯ ರಂಗತಂಡದ ರೂವಾರಿಗಳಲ್ಲೊಬ್ಬರಾದ ಅವರು, ಹಲವು ತಂಡಗಳನ್ನು ಕಟ್ಟಿ ಬೆಳೆಸಿದ್ದಾರೆ. ರಾಜ್ಯದ ಮೂಲೆ ಮೂಲೆಗಳಲ್ಲಿ ರಂಗಶಿಬಿರಗಳನ್ನು ಸಂಘಟಿಸಿ, ಶಿಬಿರ ಚಕ್ರವರ್ತಿಎಂದೇ ಹೆಸರಾಗಿದ್ದಾರೆ. ವೃತ್ತಿರಂಗಭೂಮಿಯ ನಟನಾಗಿ ರಂಗಪ್ರವೇಶ ಮಾಡಿದ ಗಂಗಾಧರಸ್ವಾಮಿ–ಬೀದಿ ನಾಟಕಗಳವರೆಗೆ ಎಲ್ಲ ಬಗೆಯ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಹತ್ತಾರು ನಟ, ನಿರ್ದೇಶಕ, ಸಂಘಟಕರನ್ನು ರೂಪಿಸಿರುವ ಅವರು, ಆಧುನಿಕ ರಂಗಭೂಮಿಯ ಅವಿಭಾಜ್ಯ ಅಂಗವಾಗಿದ್ದಾರೆ.

ಬಹು ವಿಸ್ತಾರವಾದ ಗಂಗಾಧರಸ್ವಾಮಿಯವರ ರಂಗಕ್ರಿಯಾಶೀಲತೆಯನ್ನು ನಾಟಕಕಾರ ಮಂಜುನಾಥ ಬೆಳಕೆರೆಯವರು ಸಾರರೂಪದಲ್ಲಿ ಆಪ್ತವಾಗಿ ಇಲ್ಲಿ ಕಟ್ಟಿಕೊಟ್ಟಿದ್ದಾರೆ. ದೀರ್ಘ ಕಾಲದಿಂದ ಸ್ವಾಮಿಯನ್ನು ಅವರು ಬಲ್ಲವರಾಗಿದ್ದರು. ಮೈಸೂರು ರಂಗಾಯಣದಲ್ಲಿ ಇಬ್ಬರೂ ಒಟ್ಟಿಗೇ ಇದ್ದರು. ಅದಕ್ಕು ಮುಂಚಿನಿಂದ ಅವರ ಸ್ನೇಹ ಇತ್ತು. ಅಷ್ಟೇ ಅಲ್ಲ, ತನ್ನ ಹಿರಿಯ ಮಿತ್ರನ ರಂಗಚಟುವಟಿಕೆ ಬಗ್ಗೆ ಅಪಾರ ಗೌರವ ಇತ್ತು. ಆಪ್ತತೆಯಿಂದ ಅದನ್ನವರು ಚಿತ್ರಿಸಿದ್ದಾರೆ. ಕತೆಗಾರನ ನಿರೂಪಣಾ ಶೈಲಿ ಆಕರ್ಷಣೆ ಹುಟ್ಟಿಸುತ್ತದೆ. ಸಲೀಸಾಗಿ ಓದಿಸಿಕೊಂಡು ಹೋಗುತ್ತದೆ.

ತನ್ನ ಪ್ರೀತಿಯ ಹಿರಿಯ ಮಿತ್ರನನ್ನು ಇಡಿಯಾಗಿ ಕಟ್ಟಿಕೊಡಬೇಕು ಎಂಬ ಸದಾಶಯದಿಂದ ಗಂಗಾಧರಸ್ವಾಮಿಯವರ ರಂಗಯಾನದ ಎಲ್ಲ ಮಾಹಿತಿಯನ್ನು ಲೇಖಕ ಮಂಜುನಾಥ ಬೆಳಕೆರೆ ಇಲ್ಲಿ ಕಲೆ ಹಾಕಿದ್ದಾರೆ. ಅವರ ಅಕಾಲಿಕ ನಿಧನದಿಂದ ಸಾಧ್ಯವಾಗಿಲ್ಲ. ವಿಸ್ಮಯದ ಸಂಗತಿ ಎಂದರೆ ಸಮಗ್ರ ಚಿತ್ರಣಕ್ಕೆ ಬೇಕಾದ ಬಹುತೇಕ ಅಂಶಗಳನ್ನು ಪಟ್ಟಿ ಮಾಡಿದ್ದಾರೆ. ಆರಂಭದಲ್ಲಿ ಕತೆಗಾರನ ನಿರೂಪಣೆಯಲ್ಲಿ ಅದನ್ನೆಲ್ಲ ಸೊಗಸಾಗಿ ಹೇಳಿದ್ದಾರೆ. ಕೊನೆಕೊನೆ ಅಧ್ಯಾಯದಲ್ಲಿ ಸ್ವಾಮಿ ಅವರ ಸಾಧನೆಯ ಪಟ್ಟಿ ಕೊಟ್ಟುಬಿಟ್ಟಿದ್ದಾರೆ. ಬೇಗ ಮುಗಿಸಿಬಿಡಬೇಕು ಎಂಬ ದಾವಂತದಲ್ಲಿ ಹಾಗೆ ಮಾಡಿದರೆ? ಅಂದರೆ ಬೆಳಕೆರೆಯವರಿಗೆ ತಮ್ಮ ಸಾವಿನ ಮುನ್ಸೂಚನೆ ಸಿಕ್ಕಿತ್ತೆ? ಅದೊಂದು ಸೋಜಿಗದ ಸಂಗತಿ. ಇದೇ ಅವರ ಕೊನೆಯ ಪುಸ್ತಕವಾಯಿತು.



ಮಂಜುನಾಥ ಬೆಳಕೆರೆ

ಆರಂಭದಲ್ಲೇ ಓದುಗರನ್ನು ಆವಾಹಿಸಿಕೊಳ್ಳುವ ವ್ಯಕ್ತಿಚಿತ್ರಣ ಹಠಾತ್ತಾಗಿ ಮುಕ್ತಾಯಗೊಂಡಂತೆ ಅನಿಸುವುದರಿಂದ ಗಂಗಾಧರಸ್ವಾಮಿಯವರ ಜೀವನದ ಮತ್ತಷ್ಟು ಮಹತ್ವದ, ಸ್ವಾರಸ್ಯಕರ ಸಂಗತಿಗಳು ಬಿಟ್ಟುಹೋಗಿವೆ. ಅವರನ್ನು ಚೆನ್ನಾಗಿ ಬಲ್ಲ ಮತ್ತೊಬ್ಬರು ಈ ಕೆಲಸ ಮುಂದುವರಿಸಿ ಮತ್ತೊಂದು ಪುಸ್ತಕ ರಚಿಸಬಹುದಾಗಿದೆ.

ಬೆಳಕೆರೆ ಕಲೆಹಾಕಿದ್ದ ಮಾಹಿತಿ ಕ್ರೋಢೀಕರಿಸುವ, ಅಪೂರ್ಣ ವಾಕ್ಯಗಳನ್ನು ಪೂರ್ಣಗೊಳಿಸುವ; ಅಧ್ಯಾಯಗಳಾಗಿ ವಿಂಗಡಿಸುವ; ಮತ್ತಷ್ಟು ಉಪಶೀರ್ಷಿಕೆ ನೀಡುವ; ಅನುಬಂಧ ಎಂದು ಪ್ರತ್ಯೇಕವಾಗಿ ವಿಂಗಡಿಸುವ ಚಿಕ್ಕಪುಟ್ಟ ಕೆಲಸ ಮಾತ್ರ ಬಾಕಿ ಇತ್ತು. ಅದನ್ನು ಪೂರ್ಣಗೊಳಿಸಿದ್ದೇವೆ. ಗಂಗಾಧರಸ್ವಾಮಿಯವರು ಈ ವಿಷಯದಲ್ಲಿ ಸಹಕರಿಸಿದ್ದಾರೆ. ನಾಟಕ ಅಕಾಡೆಮಿ ಸದಸ್ಯರಾದ ಮುದ್ದಣ್ಣರಟ್ಟೀಹಳ್ಳಿ, ಬಿ.ಎಂ. ರಾಮಚಂದ್ರ ಅವರು ಅತೀವ ಆಸಕ್ತಿ ತಾಳಿ ಈ ಕೆಲಸ ಪೂರ್ಣಗೊಳ್ಳುವಂತೆ ನೋಡಿಕೊಂಡಿದ್ದಾರೆ. ಅವರೆಲ್ಲರಿಗೆ ನೆನಕೆಗಳು.

– ಎಚ್.ಎಸ್. ಉಮೇಶ್
– ಬಿ.ಆರ್. ರವೀಶ್
– ಗುಡಿಹಳ್ಳಿ ನಾಗರಾಜ

# ಕರ್ನಾಟಕ ನಾಟಕ ಅಕಾಡೆಮಿ

## ಅಕಾಡೆಮಿ ಅಧ್ಯಕ್ಷರು ಮತ್ತು ಸದಸ್ಯರ ಪಟ್ಟಿ

**ಎಲ್.ಬಿ. ಶೇಖ (ಮಾಸ್ತರ)**
ಅಧ್ಯಕ್ಷರು, ಕರ್ನಾಟಕ ನಾಟಕ ಅಕಾಡೆಮಿ, ವಿಜಯಪುರ

ಸದಸ್ಯರು, ಕರ್ನಾಟಕ ನಾಟಕ ಅಕಾಡೆಮಿ

ಶ್ರೀ ಪಿ. ತಿಪ್ಪೇಸ್ವಾಮಿ, ಚಳ್ಳಕೆರೆ
ಶ್ರೀ ರಾಜಪ್ಪ ಕಿರಗಸೂರು, ಮೈಸೂರುಜಿಲ್ಲೆ
ಶ್ರೀ ಎಸ್.ಕೆ. ಕೊನೆಸಾಗರ, ಹುನಗುಂದ
ಶ್ರೀ ಎಂ.ಎಸ್. ಗುಣಶೀಲನ್, ಬೆಂಗಳೂರು
ಶ್ರೀಮತಿ ಕಲ್ಪನಾ ನಾಗನಾಥ್, ಬೆಂಗಳೂರು
ಶ್ರೀ ಮುದ್ದಣ್ಣ ರಟ್ಟೆಹಳ್ಳಿ, ಹಾವೇರಿ
ಶ್ರೀಮತಿ ಅನ್ನಪೂರ್ಣ ಸಾಗರ, ಶಿವಮೊಗ್ಗ ಜಿಲ್ಲೆ
ಶ್ರೀ ಎಚ್. ಷಡಾಕ್ಷರಪ್ಪ ಹೊಸಮನಿ, ಹರಪನಹಳ್ಳಿ
ಶ್ರೀ ಕೆ. ಜಗುಚಂದ್ರ, ಧಾರವಾಡ
ಶ್ರೀ ಉಮೇಶ ಸಾಲಿಯಾನ, ಕಾಸರಗೋಡು
ಶ್ರೀ ಹಾಲ್ಕುರಿಕೆ ಶಿವಶಂಕರ್, ಕೊಪ್ಪಳ
ಶ್ರೀ ವಿ.ಎನ್. ಅಕ್ಕಿ, ರಾಯಚೂರು
ಶ್ರೀ ಬಿ.ಎಂ. ರಾಮಚಂದ್ರ, ಮೈಸೂರು
ಶ್ರೀ ಎನ್.ಕೆ. ರಾಮಕೃಷ್ಣ, ಬೆಂಗಳೂರು
ಶ್ರೀಮತಿ ಎ. ವರಲಕ್ಷ್ಮಿ, ಬಳ್ಳಾರಿ

ಕೋಪ್ಟ್ ಆದ ಸಹಸದಸ್ಯರು
ಶ್ರೀ ಗುಡಿಹಳ್ಳಿ ನಾಗರಾಜ, ಬೆಂಗಳೂರು
ಡಾ. ಶ್ರೀಪಾದ ಭಟ್, ಶಿರಸಿ
ಶ್ರೀ ಎಲ್.ಎಚ್. ರಂಗನಾಥಪ್ಪ, ಶಿರಾ

ರಿಜಿಸ್ಟ್ರಾರ್:
**ಬಿ. ಮಂಜುನಾಥ ಆರಾಧ್ಯ**

ಯೋಜನಾ ಸಹಾಯಕರು:
**ಕೆ. ರೇವಣ್ಣ**

ಕಚೇರಿ ಸಿಬ್ಬಂದಿ:
**ಸೌಭಾಗ್ಯಲಕ್ಷ್ಮೀ, ಎಂ. ಭೋಜಣ್ಣ, ಸುಶೀಲಮ್ಮ**

## ಪರಿವಿಡಿ

1. 'ಶಿಬಿರ ಚಕ್ರವರ್ತಿ' ಪಿ. ಗಂಗಾಧರಸ್ವಾಮಿ .. 1

2. ಆಗಬೇಕಾಗಿದ್ದು ಮಠದ ವಟು....
ಆಗಿದ್ದು ರಂಗಭೂಮಿಯ ನಿಷ್ಠಾವಂತ ರಂಗಪಟು .. 5

3. ಬೆಂಗಳೂರಿಗೆ ಬಂದವರು ತಿರುಗಿ ಹೋಗಲಿಲ್ಲ .. 13

4. ಡ್ರಾಮದಲ್ಲಿ ಡಿಗ್ರಿ .. 18

5. ಸಮುದಾಯ–ಸಮುದಾಯದತ್ತ .. 23

6. ನಾನು ಬಡವಿ ಆತ ಬಡವ ಒನವೇ ನಮ್ಮ ಬದುಕು .. 29

7. ಉತ್ತರ ಕರ್ನಾಟಕ ರಂಗಕಾರ್ಯಕ್ಷೇತ್ರ .. 35

8. ರಂಗಶಿಬಿರಗಳ ಹಲವು ಮೊದಲುಗಳ ಮೊದಲಿಗರು .. 45

9. ರಂಗತಂಡಗಳ ಉಗಮಕ್ಕೆ ಅಡಿಪಾಯ .. 48

10. ರಂಗಾಯಣ ರೆಪರ್ಟರಿ ಕಂಪನಿಯಲ್ಲಿ ರಂಗಸೇವೆ .. 57

ಅನುಬಂಧ–1

ಸಂದರ್ಶನಗಳ ಆಯ್ದ ಭಾಗಗಳು .. 64

ಅನುಬಂಧ–2

ಪಿ. ಗಂಗಾಧರಸ್ವಾಮಿ ಅವರ ಕೆಲವು ವಿವರಗಳು .. 73

ಛಾಯಾಂಕಣ .. 79

# 'ಶಿಬಿರ ಚಕ್ರವರ್ತಿ' ಪಿ. ಗಂಗಾಧರಸ್ವಾಮಿ

## ಪ್ರವೇಶಿಕೆ

ನಾಟಕದ ಮೂಲ ಉದ್ದೇಶವೇ 'ಮಾನವೀಯತೆಯ ಹುಡುಕಾಟ'. ಆಧುನಿಕ ನಾಟಕ ಯಾವಾಗಲೂ ಮನೋರಂಜನೆಯೊಂದಿಗೆ 'ಮನೋದೀಪ್ತಿ' ಯನ್ನು ನೀಡುತ್ತದೆ. ನಾಟಕದ ಮನೋರಂಜನೆ ಬೌದ್ಧಿಕತೆಯ ಆನಂದವನ್ನು ನೀಡುವಂತದ್ದು. ಸಮಾಜವನ್ನು ಚಿಕಿತ್ಸಕ ದೃಷ್ಟಿಯಿಂದ ನೋಡುವಂತಹ ಗುಣ ಆಧುನಿಕ ರಂಗಭೂಮಿಯ ಸ್ಥಾಯೀಭಾವ. ನಮ್ಮ ಹೊಸಗನ್ನಡದ ಸಾಹಿತ್ಯದ ಚಿಂತನೆಗೆ ನಾಂದಿಯನ್ನು ಹಾಡಿದ ಬಿಎಂಶ್ರೀಯವರು ಆಧುನಿಕ ಕನ್ನಡ ನಾಟಕ ಲೋಕಕ್ಕೂ ಹೊಸ ಮಾದರಿಯ ಶಿಲ್ಪವನ್ನು ತಂದು ಸೃಷ್ಟಿಸಿಕೊಟ್ಟರು. ನವೋದಯ ಸಾಹಿತ್ಯ ಪರಂಪರೆಯಲ್ಲಿ ಕಂಡು ಬಂದ ನಾಟಕಗಳು ಸಾಹಿತ್ಯದ ಪ್ರಮುಖ ಭಾಗವಾಗಿಯೇ ಬಂದಂತವು. ನಾಟಕ ರಂಗ ಪ್ರದರ್ಶನವಾಗುವುದಕ್ಕಿಂತ ಅದು ಓದುಗ 'ಮನೋರಂಗ'ದಲ್ಲಿ ಆದರ ಚಿತ್ರಣ ಮೂಡಿದರೆ ಸಾಕು ಎಂಬ ಮನೋಭಾವ ಗಟ್ಟಿಯಾಗಿದ್ದ ಕಾಲವದು. ಅದಕ್ಕೆ ಆ ಕಾಲದಲ್ಲಿ ಬಂದ ನಾಟಕಗಳಲ್ಲಿ 'ಚಿತ್ರಕ ಶಕ್ತಿ' ಪ್ರಧಾನ ಸ್ಥಾನವನ್ನು ಪಡೆದುಕೊಂಡಿತ್ತು. ರಂಗಪ್ರಯೋಗದ ಅನಿವಾರ್ಯತೆ ಇರಲಿಲ್ಲ. ಸಾಹಿತ್ಯ ಕೃತಿಯಾಗಿ ಹೆಚ್ಚಿನ ಸ್ಥಾನವನ್ನು 'ನಾಟಕ' ಪಡೆದುಕೊಂಡಿತ್ತು.

ಮುಂದೆ ಕೈಲಾಸಂರು ಅನೇಕ ರಂಗಕೃತಿಗಳನ್ನು ರಚಿಸಿದರು. ಸಾಮಾನ್ಯ ದೈನಂದಿನ ಬದುಕು ಅವರ ನಾಟಕದ ವಸ್ತುವಾಯಿತು. ದೈನಂದಿನ ಆಗಿನ ಬೆಂಗಳೂರಿನ ಭಾಷೆ ಅವರ ನಾಟಕದ 'ಸಂವಹನ ವಾಹಕ'ವಾಯಿತು. ಆವರೆಗೆ ಗ್ರಂಥಿಕವಾದ ಶಿಷ್ಟ ಭಾಷೆಯ ಪೌರಾಣಿಕ ನಾಟಕಗಳನ್ನು ನೋಡಿದ್ದವರಿಗೆ ಸಹಜವಾಗಿ ಕೈಲಾಸಂರವರ ನಾಟಕಗಳು ಹೆಚ್ಚು ಹತ್ತಿರವಾಗತೊಡಗಿತ್ತು. ಈ ಕಲ್ಪನೆಯ ರಂಗಭೂಮಿಯನ್ನು ಕೈಲಾಸಂರವರು ಕಟ್ಟಲು ಪ್ರೇರಣೆ, ಇಂಗ್ಲೆಂಡಿನಲ್ಲಿ ಅವರು ಕಂಡಂತಹ 'ಚೌಕಟ್ಟು' ರಂಗಭೂಮಿಯ (ಪಡಸಾಲೆ ನಾಟಕ) ವಿನ್ಯಾಸಗಳು. ಈ ಪರಿಕಲ್ಪನೆಗಳನ್ನು ಅವರು ಕನ್ನಡಕ್ಕೆ ತಂದರು. ಆಧುನಿಕ

ರಂಗಭೂಮಿಯ ಪ್ರಥಮ ಬೀಜಗಳನ್ನು ನೆಟ್ಟವರು ಕೈಲಾಸಂ ಮತ್ತು ಶ್ರೀರಂಗರು. ಇವರಲ್ಲಿ ಶ್ರೀರಂಗರ ಕೊಡುಗೆ ಹೆಚ್ಚಿನದ್ದು ಎಂದು ಹೇಳಬಹುದು. ಅವರ ನಾಟಕಗಳಲ್ಲಿ ಕಂಡುಬರುವ ವೈಚಾರಿಕತೆ ಮತ್ತು ಅವರ ರಂಗಪ್ರಯೋಗಗಳಲ್ಲಿ ಕಂಡುಬರುವ ಪ್ರಯೋಗಶೀಲತೆ. ಇವು ಕನ್ನಡ ರಂಗಭೂಮಿ ನಡೆಯಬೇಕಾದ ದಾರಿಯಲ್ಲಿ ಸ್ಪಷ್ಟವಾದ ಹೆಜ್ಜೆಗಳನ್ನು ಮೂಡಿಸುತ್ತಾ ಹೋದವು. ಶ್ರೀರಂಗರು ರಂಗಶಿಕ್ಷಣಕ್ಕೂ ಹೆಚ್ಚಿನ ಮಹತ್ವವನ್ನು ನೀಡಿದರು.

ಕನ್ನಡ ಸಾಹಿತ್ಯ ನವ್ಯದ ಪರಿವೇಷವನ್ನು ತೊಟ್ಟುಕೊಂಡಾಗ 'ನಾಟಕ ಸಾಹಿತ್ಯದಲ್ಲಿ ನವ್ಯದ ಪರಿಕಲ್ಪನೆ ಮತ್ತು ಆಶಯಗಳು ಪ್ರಧಾನ ಸ್ಥಾನವನ್ನು ಪಡೆದುಕೊಂಡವು. ಈ ಹೊತ್ತಿಗೆ ಜಾಗತಿಕ ಮಟ್ಟದಲ್ಲಿ ಮಾರ್ಕ್ಸವಾದ ಹೆಚ್ಚು ಪ್ರಬುದ್ಧಮಾನಕ್ಕೆ ಬಂದು ಮನುಷ್ಯನ ಅಲೋಚನಾ ಕ್ರಮದಲ್ಲಿ ಹೊಸ ದೀವಟಿಗೆಯನ್ನು ಹೊತ್ತಿಸಿತ್ತು. ಭಾರತದಲ್ಲಿ ಸ್ವಾತಂತ್ರ್ಯ ಚಳುವಳಿಯೊಂದಿಗೆ ಗಾಂಧೀವಾದ ಮತ್ತು ಸಮಾಜವಾದ ಜನಪ್ರಿಯವಾದ ಸಿದ್ಧಾಂತಗಳಾದವು. ಮಾರ್ಕ್ಸವಾದವು ತನ್ನ ಪ್ರಭಾವವನ್ನು ಬೀರಿತೊಡಗಿತು. ಕನ್ನಡ ಆಧುನಿಕ ಸಾಹಿತ್ಯ ಮಾರ್ಕ್ಸ್‌ವಾದಕ್ಕಿಂತ ಸಮಾಜವಾದವನ್ನು ಅಂತರ್‌ಸ್ಥಾಯಿಯಾಗಿ ಸ್ವೀಕಾರ ಮಾಡಿಕೊಂಡಿತ್ತು. ನಾಟಕ ಸಾಹಿತ್ಯವು ಇದಕ್ಕೆ ಹೊರತಾಗಿರಲಿಲ್ಲ. ಹೀಗಾಗಿ ಕನ್ನಡ ರಂಗಭೂಮಿ ಮೇಲೆ 'ಸಮಾಜವಾದ'ದ ಪ್ರಭಾವ ಸಾಕಷ್ಟು ಆಗಿದೆ.

60ರ ದಶಕದಲ್ಲಿ ಪ್ರಾರಂಭವಾದ ನ್ಯಾಷನಲ್ ಡ್ರಾಮಾ ಸ್ಕೂಲ್ ಭಾರತೀಯ ರಂಗಭೂಮಿಯನ್ನು ಪುನರ್ ಕಟ್ಟುವ ಕೈಂಕರ್ಯವನ್ನು ಕೈಕೊಂಡಿತ್ತು. ವಾಸ್ತವದಲ್ಲಿ ಸಂಸ್ಕೃತ ರಂಗಭೂಮಿ ಮತ್ತು ಜಾನಪದ ರಂಗಭೂಮಿಯನ್ನು ಮರೆತು ಆಧುನಿಕ ಹೆಸರಿನಲ್ಲಿ ಪಾಶ್ಚಿಮಾತ್ಯ ರಂಗಭೂಮಿಯಲ್ಲಿ ಭಾರತದಲ್ಲಿ ಎರವಲು ತಂದಂತಾಯಿತು. ಈ ಅನುಷ್ಠಾನದಲ್ಲಿ ಭಾರತೀಯ ರಂಗಭೂಮಿಯನ್ನು ಕಂಡುಕೊಳ್ಳುವ ಮತ್ತು ಕಟ್ಟಿಕೊಳ್ಳುವ ಜವಾಬ್ದಾರಿ ಎದುರಾಯಿತು. ಈ ಸಂದರ್ಭ ಇದೊಂದು ಸವಾಲೆನಿಸಿದ್ದು ನಿಜ. ಭಾರತೀಯತನವನ್ನು ರಂಗಭೂಮಿಯಲ್ಲಿ ಕಟ್ಟಿಕೊಡಲು ಭಾರತದ ಅನೇಕ ನಿರ್ದೇಶಕರು ಮುಂದಾದರು. ಅವರಲ್ಲಿ ಶ್ರೀ. ಬಿ.ವಿ.ಕಾರಂತರು ಮುಂಚೂಣಿಯಲ್ಲಿ ನಿಂತರು. ಬಿ.ವಿ.ಕಾರಂತರು ಪ್ರಾದೇಶಿಕತನವನ್ನು ರಂಗಭೂಮಿಯಲ್ಲಿ ಕಂಡುಕೊಳ್ಳುವಲ್ಲಿ ಯಾವ ಪ್ರದೇಶದಲ್ಲಿ ನಾಟಕವನ್ನು ಅವರು ನಿರ್ದೇಶನವನ್ನು ಮಾಡುತ್ತಿದ್ದರೋ ಆ ಪ್ರದೇಶದ ಭಾಷೆಯ ಸೊಗಡು ಅಲ್ಲಿಯ ಜಾನಪದೀಯ ಸಂಗೀತ, ವಸ್ತ್ರಗಳು, ಪರಿಕರಗಳು, ಆಶಯಗಳ ಮೂಲಕ ನಾಟಕವನ್ನು ಕಟ್ಟುತ್ತಿದ್ದರು. ಇದು ಭಾರತದಲ್ಲಿ ಒಂದು

ಮಾದರಿಯಾಯಿತು. ಇನ್ನೂ ಮುಂದುವರೆದು ಕಾರಂತರು ಪ್ರಾದೇಶಿಕ ಸಮೀಕರಣವನ್ನು ಮುಂದುವರೆಸಿದರು. ಕರ್ನಾಟಕದ ಕರಾವಳಿಯ ಜಾನಪದೀಯ ಸೊಗಡನ್ನು ಪಂಜಾಬ್‌ನ ನಾಟಕದಲ್ಲಿ, ಪಂಜಾಬ್‌ನ ಜಾನಪದೀಯ ಸೊಗಡನ್ನು ಅಸ್ಸಾಂನ ನಾಟಕದಲ್ಲಿ ಹಾಸುಹೊಕ್ಕಾಗಿಸಿ ನಾಟಕದ ಮೂಲಕ ಭಾರತವನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡಿದರು. ಕನ್ನಡ ರಂಗಭೂಮಿಯಲ್ಲಿ ಒಂದು ಸ್ಪಷ್ಟ ದಿಕ್ಸೂಚಿಯನ್ನು ತೋರಿಸಿದವರು ಶ್ರೀ.ಬಿ.ವಿ.ಕಾರಂತರು. ಅವರು 70ರ ದಶಕದಲ್ಲಿ ನಿರ್ದೇಶನ ಮಾಡಿ ಪ್ರದರ್ಶನ ಮಾಡಿದ ತ್ರಿವಳಿ ನಾಟಕಗಳ ಪ್ರದರ್ಶನಗಳು ರಂಗಭೂಮಿಯಲ್ಲಿ ಸಂಚಲನವನ್ನುಂಟು ಮಾಡಿತ್ತು. ಮುಂದೆ ನಾಟಕ ರಚನೆ, ಶಿಲ್ಪ, ವಸ್ತು ವಿನ್ಯಾಸ, ಮತ್ತು ಪ್ರದರ್ಶನದ ಶೈಲಿಗಳಲ್ಲಿ ಆಧುನಿಕತೆಯ ನಾವೀನ್ಯತೆಯ ರೂಪಗಳ ಪ್ರಯೋಗಶೀಲತೆ ಹೆಚ್ಚಾಯಿತು. ಹೀಗಾಗಿ ಕನ್ನಡ ರಂಗಭೂಮಿಯ ಕ್ಷೇತ್ರ ಶ್ರೀಮಂತವಾಗತೊಡಗಿತ್ತು. ಇದಕ್ಕೂ ಮುಂದುವರೆದು ಕನ್ನಡ ರಂಗಭೂಮಿ ಒಂದು ಸಾಮಾಜಿಕ ಬದ್ಧತೆಗೆ ತಾತ್ತ್ವಿಕ ಸಿದ್ಧಾಂತಕ್ಕೆ ತೆರೆದುಕೊಂಡಿದ್ದು 80ರ ದಶಕದಲ್ಲಿ "ಸಮುದಾಯ" ಸಂಘಟನೆ ಈ ರಾಜ್ಯದಲ್ಲಿ ಪ್ರಾರಂಭಗೊಂಡಿದ್ದರಿಂದ. "ಕಲೆ ಕಲೆಗಾಗಿ ಅಲ್ಲ ಕಲೆ ಸಮಾಜಕ್ಕಾಗಿ" ಎಂಬ ತಾತ್ತ್ವಿಕ ಸಿದ್ಧಾಂತವನ್ನು ಪ್ರಧಾನವಾಗಿಟ್ಟುಕೊಂಡು ಸಮುದಾಯ ತನ್ನ ರಂಗಕಾರ್ಯಕವನ್ನು ಸಮಾಜಮುಖಿಯಾಗಿಸಿಕೊಂಡು ರಂಗಭೂಮಿಯನ್ನು ಕಟ್ಟತೊಡಗಿತ್ತು. ಅಲ್ಲದೇ ರಾಜ್ಯದಾದ್ಯಂತ 25ಕ್ಕೂ ಹೆಚ್ಚು 'ಸಮುದಾಯ ಘಟಕ'ಗಳನ್ನು ಸ್ಥಾಪನೆಯನ್ನು ಮಾಡಿ 'ರಂಗ ಚಳುವಳಿ'ಯನ್ನು ರೂಪಿಸಿತ್ತು. ತಾತ್ವಿಕ ಸಿದ್ಧಾಂತದ ಅಡಿಯಲ್ಲಿ ರಂಗಭೂಮಿಯನ್ನು ಕಟ್ಟಲಾಯಿತು. ಈ ಹೊಸ ಸಿದ್ಧಾಂತದ ಆಕರ್ಷಣೆಗೆ ಸಾವಿರಾರು ರಂಗಕರ್ಮಿಗಳು 'ಸಮುದಾಯ' ಸಂಘಟನೆಯಲ್ಲಿ ಕೆಲಸ ಮಾಡತೊಡಗಿದರು. ಇದರಿಂದಾಗಿ ಕನ್ನಡ ರಂಗಭೂಮಿಯಲ್ಲಿ ಒಂದು ಹೊಸ ಶಕೆ ಪ್ರಾರಂಭವಾಯಿತು. ಈ ರೀತಿಯ ತತ್ತ್ವಸಿದ್ಧಾಂತದ ಅಡಿಯಲ್ಲಿ ರಂಗಭೂಮಿ ಕಟ್ಟಿದ ಉದಾಹರಣೆ ಭಾರತದ ಯಾವ ಭಾಗದಲ್ಲೂ ನಡೆದಿಲ್ಲ ಎಂಬುದು ಕನ್ನಡದ ಹೆಗ್ಗಳಿಕೆ. ಇಂದು ಕನ್ನಡ ರಂಗಭೂಮಿಯ ಪ್ರಮುಖ ರಂಗಕರ್ಮಿಗಳ ಹೆಸರುಗಳನ್ನು ಹೇಳಲು ಹೊರಟರೆ ಅವರೆಲ್ಲ ಸಮುದಾಯ ಸಂಘಟನೆಯ ಮೂಲಕ ರಂಗಭೂಮಿಗೆ ಬಂದವರೇ ಆಗಿರುತ್ತಾರೆ, ಆಗಿದ್ದಾರೆ. ಅವರಲ್ಲಿ ಕೆಲವರನ್ನು ಇಲ್ಲಿ ನೆನೆಯಬಹುದು. ಶ್ರೀಯುತರಾದ ಪ್ರಸನ್ನ, ಸಿಜಿಕೆ, ಡಿ.ಆರ್.ನಾಗರಾಜ್, ಕೀರಂ ನಾಗರಾಜ್, ಎಸ್. ಮಾಲತಿ, ಗುಂಡಣ್ಣ, ಮುದ್ದಣ್ಣ

(ಬೆಳಕು), ಸಿ.ಬಸವಲಿಂಗಯ್ಯ, ಹೆಚ್ ಜನಾರ್ಧನ್(ಜನ್ನಿ), ಗುಡಿಹಳ್ಳಿ ನಾಗರಾಜ, ಶೀಲಾಸ್ವಾಮಿ, ಮಂಜುನಾಥ್ ಬೆಳಕೆರೆ, ಸುರೇಶ್ ಆನಗಳ್ಳಿ ಮುಂತಾದವರು (ಇಲ್ಲಿ ನೆನೆಯದೇ ಇರುವ ಎಲ್ಲರು ನಮ್ಮ ಮನಸ್ಸಿನಲ್ಲಿದ್ದೀರಿ). ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಅದರಲ್ಲಿ ಪ್ರಮುಖವಾದ ಹೆಸರು ಶ್ರೀ ಪಿ. ಗಂಗಾಧರಸ್ವಾಮಿರವರದು. ಸಮುದಾಯ ಮತ್ತು ಕನ್ನಡ ರಂಗಭೂಮಿಗೆ ಶ್ರೀ ಪಿ.ಗಂಗಾಧರಸ್ವಾಮಿ ನೀಡಿರುವ ಕೊಡುಗೆ ಅಪಾರ. ಅವರು ಗ್ರಾಮಾಂತರ ಪ್ರದೇಶಗಳಲ್ಲಿ ಯಾವುದೇ ಸರಕಾರದ ಸಹಕಾರ ಅಥವ ಸಹಾಯಧನದ ನೆರವಿಲ್ಲದೆ, ಸ್ಥಳೀಯ ಸಂಪನ್ಮೂಲಗಳನ್ನು ಒಟ್ಟಾಕಿ ರಂಗಭೂಮಿಯನ್ನು ಕಟ್ಟಿದ ಪರಿ ಅಪಾರ. ಈ ಮೂಲಕ ರಂಗಭೂಮಿಯನ್ನು 'ಜನತೆಯ ರಂಗಭೂಮಿ'ಯನ್ನು ಮಾಡಿದ ಸಾಹಸ ಅವರದು. ಅವರ ಕೊಡುಗೆಯನ್ನು ನೆನೆಯುವ ಕಿರು ಪ್ರಯತ್ನವನ್ನು ಈ ಕಿರು ಹೊತ್ತಿಗೆಯಲ್ಲಿ ಮಾಡುತ್ತೇನೆ.

## ಆಗಬೇಕಾಗಿದ್ದು ಮಠದ ವಟು....
## ಆಗಿದ್ದು ರಂಗಭೂಮಿಯ ನಿಷ್ಠಾವಂತ ರಂಗಪಟು...

ಏನಿದು ಅಂತ ನಿಮಗೆ ಆಶ್ಚರ್ಯವಾಗುತ್ತಿದೆಯೇ. ಇರಿ ಸ್ವಲ್ಪ ವಿವರಿಸುತ್ತೇನೆ. ಗಂಗಾಧರಸ್ವಾಮಿಯವರ ಹುಟ್ಟು ಬಾಲ್ಯ, ವಿದ್ಯಾಭ್ಯಾಸದ ಸಂಗತಿಗಳನ್ನು ಮೊದಲು ತಿಳಿದುಕೊಳ್ಳೋಣ. ಸ್ವಾತಂತ್ರ್ಯ ಚಳುವಳಿ ಬಹಳ ಜೋರಾಗಿದ್ದ ಕಾಲ. ಮೈಸೂರು ಪ್ರಾಂತದವರಿಗೆ ಮಹಾರಾಜರ ಕೃಪಾಕಟಾಕ್ಷದಿಂದಾಗಿ ಬ್ರಿಟಿಷರ ದಬ್ಬಾಳಿಕೆಯ ಅನುಭವ ದಕ್ಕಿರಲಿಲ್ಲ. ಆದರೆ ಕರ್ನಾಟಕದ ಉಳಿದ ಪ್ರಾಂತಗಳಾದ ಹೈದ್ರಾಬಾದ್ ಕರ್ನಾಟಕ, ಮುಂಬಯಿ ಕರ್ನಾಟಕದವರಿಗೆ ಬ್ರಿಟಿಷರ ದಬ್ಬಾಳಿಕೆಯ ಶೋಷಣೆಯ ಅನುಭವ ಈ ಪ್ರಾಂತದವರ ಎದೆಯಲ್ಲಿ ಶೂಲ ನೆಟ್ಟ ಅನುಭವದಂತಾಗಿತ್ತು. ಹೀಗಾಗಿ ಈ ಪ್ರಾಂತಗಳಲ್ಲಿ ಸ್ವಾತಂತ್ರ್ಯ ಹಂಬಲಿಸಿದ ಹೋರಾಟಗಳು ನಿರಂತರವಾಗಿ ನಡೆಯುತ್ತಿದ್ದವು. ಬ್ರಿಟಿಷರನ್ನು ಮುಖಾಮುಖಿಯಾಗಿ ಗಾಂಧೀವಾದ ಅಹಿಂಸೆ ಮಾರ್ಗದಿಂದ ಎದುರಿಸುವ ಒಂದು ಪರಿಯಾದರೆ, ಇನ್ನೊಂದು ಬಗೆ ಗೆರಿಲ್ಲಾ ಮಾದರಿಯ ಹೋರಾಟಗಳು ನಿರಂತರವಾಗಿದ್ದುವು. ಸುಭಾಸಚಂದ್ರ ಬೋಸ್ ಪ್ರತಿಪಾದಿಸುತ್ತಿದ್ದ ಶಸ್ತ್ರಾಸ್ತ್ರಗಳ ಮೂಲಕ ಬ್ರಿಟಿಷರನ್ನು ಎದುರಿಸಿ ಓಡಿಸುವ ಸಿದ್ಧಾಂತಕ್ಕೆ ಭಾರತದಾದ್ಯಂತ ಅನೇಕ ಯುವಪಡೆ ಸಿದ್ಧಗೊಂಡಿತ್ತು. ಆ ಆಜಾದ್ ಹಿಂದ್ ಫೌಜ್ ಪಡೆಯಲ್ಲಿ ಸೇರಿಕೊಂಡು ಹೋರಾಟ ನಡೆಸಲು ಸನ್ನದ್ಧರಾಗಿದ್ದವರು ನಮ್ಮ ಗಂಗಾಧರಸ್ವಾಮಿಯವರ ತಂದೆ ಮಹಾಗುಂಡಯ್ಯ ಪ್ರಭಯ್ಯನಮಠ. ಅಜಾನುಬಾಹು, ಜ್ಯಾತಾತೀತ ಮನೋಭಾವದವರು, ಮಹಾನ್ ದೈವ ಭಕ್ತ, ಅಪ್ಪಟದೇಶ ಪ್ರೇಮಿಯಾಗಿದ್ದರು. ಹೆಸರಾಂತ ಮನೆತನ ಇವರದು. ವೀರಶೈವ ಪರಂಪರೆಗೆ ಸೇರಿದ ಜಂಗಮರು ಇವರು. ಬಸವಣ್ಣನ ತತ್ತ್ವಾದರ್ಶಗಳ ಪಾಲಕರು. ಮಾನವ ಜನ್ಮವೇ ದೊಡ್ಡದು ಎಂದು ನಂಬಿದವರು. ಗಂಗಾಧರಸ್ವಾಮಿಯವರ ತಾಯಿ ಶ್ರೀಮತಿ ಪಾರ್ವತಮ್ಮ ಇವರುಗಳ ಸುಪುತ್ರನಾಗಿ 1950 ರಲ್ಲಿ ಮೊದಲ ಮಗನಾಗಿ, ಗದಗಿನ ಸಮೀಪದ ಹುಲಕೋಟಿಯಲ್ಲಿ ಜನಿಸಿದರು. ಮಹಾಗುಂಡಯ್ಯ ಪ್ರಭಯ್ಯನಮಠರವರು ವೃತ್ತಿಯಲ್ಲಿ ಬೆಳ್ಳಿಬಂಗಾರ ವ್ಯಾಪಾರವನ್ನು ಮಾಡುತ್ತಿದ್ದರು. ಆಜಾದ್ ಹಿಂದ್ ಫೌಜನ್ನು ಸೇರಿ ಎರಡು

ವರ್ಷ ಭೂಗತವಾಗಿದ್ದುಕೊಂಡು ಚಳುವಳಿಯ ಹೋರಾಟವನ್ನು ಮಾಡಿದರು. ಅಲ್ಲಿಂದ ಮರಳಿದ ಮೇಲೆ ಅಜ್ಞಾತವಾಸವನ್ನು ಅನುಭವಿಸಿದರು. ಮುಂದೆ ಮುಂಡರಗಿಯಲ್ಲಿ ಕಿರಾಣಿ ಅಂಗಡಿಯನ್ನಿಟ್ಟುಕೊಂಡು ಜೀವನವನ್ನು ಸಾಗಿಸಿದರು.

ಗಂಗಾಧರಸ್ವಾಮಿಗಳು ಚಿಕ್ಕವರಾಗಿದ್ದಾಗ ಅದೇನೋ ಪದೇ ಪದೇ ಜ್ವರ ಬರುತ್ತಿತ್ತು. ಆರೋಗ್ಯ ಸದಾ ಹದಗೆಡುತ್ತಿತ್ತು. ಮಗನಿಗೆ ಪದೇ, ಪದೇ ಬರುವ ಜ್ವರದ್ದೇ ತಾಯಿಗೆ ಸಮಸ್ಯೆಯಾಗಿತ್ತು. ಬೇಡದ ದೇವರಿಲ್ಲ, ನೀಡದ ಔಷಧಿಯಿಲ್ಲ. ಸ್ಥಳ ಬದಲಾವಣೆ ಮಾಡಿದರೆ ಆರೋಗ್ಯ ಸುಧಾರಿಸಬಹುದು ಅಂತ ಅಮ್ಮ ತಮ್ಮ ತಂದೆಯವರ ಬಳಿಯಲ್ಲಿ ಗಂಗಾಧರಸ್ವಾಮಿಗಳನ್ನು ಯಾವಗಲ್‌ನಲ್ಲಿ ಬಿಡುತ್ತಾರೆ. ತಾಯಿಯ ತಮ್ಮ ಆಯುರ್ವೇದಿಕ್ ಡಾಕ್ಟರ್ ಆಗಿದ್ದರು. ಅವರು ನೀಡಿದ ಔಷಧಿಯಿಂದ ಆರೋಗ್ಯ ಸ್ವಲ್ಪ ಮಟ್ಟಿಗೆ ಸುಧಾರಿಸಿತು. ಗಂಗಾಧರಸ್ವಾಮಿಯವರ ಪ್ರಾಥಮಿಕ ಶಿಕ್ಷಣ ಯಾವಗಲ್‌ನಲ್ಲಾಯಿತು. ತಮ್ಮ ಬಾಲ್ಯವನ್ನು ಮಾಮ ಭೂಸನೂರು ಮಠರ ಪ್ರೀತಿಯಲ್ಲಿ ಅಜ್ಜ ಅಜ್ಜಿಯರ ಬೆಚ್ಚನೆಯ ಆರೈಕೆಯಲ್ಲಿ ಕಳೆದರು.

ಸ್ವಾಮಿಗಳು ಏಳನೆಯ ವರ್ಷದವರಾಗಿದ್ದಾಗ ಲಕ್ಷ್ಮೇಶ್ವರದಲ್ಲಿ ನಡೆಯಿತು– ಮುಕ್ತಿಮಂದಿರದ ಸ್ವಾಮಿಗಳ ಅಡ್ಡಪಲ್ಲಕ್ಕಿ ಉತ್ಸವ. ಈ ಉತ್ಸವದಲ್ಲಿ ನೂರೆಂಟು ವಟುಗಳ ಸಮಾವೇಶ. ಅದರಲ್ಲಿ ನಮ್ಮ ಸ್ವಾಮಿಗಳೂ ಸಹ ಒಬ್ಬರು. ಸಮಾವೇಶದ ಮೆರವಣಿಗೆಯಲ್ಲಿ ಕುಣಿಯುತ್ತಿದ್ದ 'ವೀರಭದ್ರ ಕುಣಿತ'ದವರ ಕುಣಿತವನ್ನು ಅವರು ತದೇಕಚಿತ್ತದಿಂದ ನೋಡುತ್ತಿದ್ದರು; ಆ ಕಲಾವಿದರಂತೆ ಕುಣಿಯಬೇಕೆಂದು ಹಂಬಲಿಸುತ್ತಿದ್ದ ದೊಡ್ಡ ಕಣ್ಣಿನ, ಚಂದ್ರನಂತ ಸುಂದರ ವದನವನ್ನು ಹೊಂದಿದ್ದ ಸ್ವಾಮಿಗಳ ಮೇಲೆ ಬಾಳೇಹೊನ್ನೂರು ರಂಭಾಪುರಿ ಮಠದ ಸ್ವಾಮಿಗಳ ಕಣ್ಣಬಿತ್ತು. ಮುಂದೆ ಇವನನ್ನು ಮಠದ ಉತ್ತರಾಧಿಕಾರಿಯಾಗಿ ಮಾಡಬೇಕೆಂಬ ಹಂಬಲ ಎದ್ದಾಡಿತ್ತು. ಸಮಾವೇಶ ಮುಗಿದ ಕೂಡಲೇ ರಂಭಾಪುರಿ ಸ್ವಾಮಿಗಳು ಪ್ರಭಯ್ಯಮಠರವರನ್ನು ಕರೆದು "ಪ್ರಭಯ್ಯನವರೇ ನಿಮ್ಮ ಮಗನನ್ನು ಮುಂದೆ ಮಠದ ಉತ್ತರಾಧಿಕಾರಿಯನ್ನಾಗಿ ಮಾಡಬೇಕೆಂದು ನಮ್ಮ ಇಚ್ಛೆ, ಮಿರಿಯನ್ನು ಸಂಸ್ಕೃತ ವಿದ್ಯಾಭ್ಯಾಸ ಮಾಡಲು ಸೇರಿಸಿ" ಎಂದು ಅಪ್ಪಣೆಯನ್ನು ಮಾಡಿದರು. ಪ್ರಭಯ್ಯಮಠನವರಿಗೆ ಸ್ವಾಮಿಗಳ ಬೇಡಿಕೆ ಇಷ್ಟವಿತ್ತೋ ಇಲ್ಲವೋ ಗೊತ್ತಿಲ್ಲ. ರಂಭಾಪುರಿ ಸ್ವಾಮಿಗಳೇ ಅಪ್ಪಣೆ ಮಾಡಿದ ಮೇಲೆ ಅಬದ್ಧ ನುಡಿದವರುಂಟೇ? ಸರಿ, ಮಗನನ್ನು ಸಂಸ್ಕೃತವನ್ನು ಕಲಿಯಲು ಮಠದ ಶಾಲೆಗೆ ಸೇರಿಸಿದರು.

'ಮಠದ ಸ್ವಾಮಿಗಳು ಒಂದು ಬಗೆದರೆ ದೈವ ಬೇರೊಂದು ಬಗೆಯಿತು'. ಶಾಲೆಗೆ ಸೇರಿದ ಗಂಗಾಧರಸ್ವಾಮಿಗಳಿಗೆ ಸಂಸ್ಕೃತ ಪಾಠ ಒಗ್ಗಲಿಲ್ಲ. ಹೇಗೆ ಒಗ್ಗೀತು ಹೇಳಿ 'ಸಂಸ್ಕೃತಿಯನ್ನು ಕಟ್ಟುವ ವಟುವೊಬ್ಬ ಅವರೊಳಗೆ ಇದ್ದನಲ್ಲ! ಅವನು ಸುಮ್ಮನೆ ಇದ್ದಾನೆಯೇ'. ಶಾಲೆಯಲ್ಲಿ ಸಂಸ್ಕೃತ ಕಲಿಯಲು ಹೋಗಿದ್ದು ಮಾಡಿದ್ದು ಅಸಂಸ್ಕೃತ ಆಟಗಳೇ. ಅವರೊಳಗಿದ್ದವನು ತನ್ನಾಟ ಸುರುಮಾಡಿದ. ಸರಿ ಅಲ್ಲಿಂದ ಅಜ್ಜನ ಮನೆಗೆ ಪರಾರಿ. ಪ್ರಭಯ್ಯಮಠರವರು ಕೆಂಡಾಮಂಡಲವಾದರು ಲೋಕದ ಕಣ್ಣಿಗೆ. ಮಠದಿಂದ ಓಡಿ ಬಾರದೇ ಇದ್ದಿದ್ದರೆ ಈ ವಟು ಕನ್ನಡ ರಂಗಭೂಮಿಗೆ ದಕ್ಕುತಿರಲಿಲ್ಲ. ಮುಂದೆ ಗಂಗಾಧರಸ್ವಾಮಿಯವರ ವಿದ್ಯಾಭ್ಯಾಸ ಮುಂಡರಗಿಯಲ್ಲಿ ಮುಂದು ವರಿಯುತ್ತದೆ. ಆಟೋಟಗಳಲ್ಲಿ ಮುಂದಿದ್ದ ಸ್ವಾಮಿಗಳು ವಿದ್ಯಾಭ್ಯಾಸದಲ್ಲಿ ಸ್ವಲ್ಪ ಹಿಂದೆಯಿದ್ದರು. ಅವರಿಗೆ ಅಗಾಧವಾದ ಗ್ರಹಣಶಕ್ತಿಯಿತ್ತು. ಏನಾದರು ಕೇಳಿದರೆ ಸಾಕು ಅದು ಅವರ ಸ್ಮೃತಿಪಟಲದ ಮೇಲೆ ಅಚ್ಚೊತ್ತಿ ಬಿಡುತ್ತಿತ್ತು. ಗೆಳೆಯರೊಟ್ಟಿಗೆ ಓದಲೆಂದು ಮುಂಡರಗಿಯಲ್ಲಿ ರೂಮು ಮಾಡಿಕೊಂಡಿದ್ದರು. ರೂಮಿನಲ್ಲಿ ಗೆಳೆಯರೆಲ್ಲ ಓದುತ್ತಿದ್ದರೆ ಇವರು ಮಾತ್ರ ಮುಖದ ತುಂಬ ದುಪ್ಪಡಿ ಹೊದ್ದುಕೊಂಡು ಮಲಗುತ್ತಿದ್ದರು. ಗೆಳೆಯರು ಜೋರಾಗಿ ಓದುತ್ತಿದ್ದುದು ಇವರ ಕಿವಿಮೇಲೆ ಬೀಳುತ್ತಿತ್ತು. ಅದು ಮನಸ್ಸಿನ ಆಳಕ್ಕೆ ಇಳಿಯುತ್ತಿತ್ತು (ಟಿ.ಪಿ. ಕೈಲಾಸಂರವರು ಕೂಡ ಹೀಗೆ ಮಾಡುತ್ತಿದ್ದರಂತೆ). ಹೀಗೆ ದುಪ್ಪಡಿ ಹೊದ್ದುಕೊಂಡು ಮಲಗುವ ಅಭ್ಯಾಸ ಮುಂದುವರಿಯಿತು. ಅದು ಎಸ್.ಎಸ್.ಎಲ್.ಸಿ. ಪರೀಕ್ಷೆ ಬೇರೆ. ಎಲ್ಲರೂ ಹೀಗಳಿಯುವುದಕ್ಕೆ ಪ್ರಾರಂಭಿಸಿದರು. ಈ ಪ್ರಕರಣ ಸ್ವಾಮಿಯವರ ಮಾಮ (ತಾಯಿ ತಮ್ಮ)ನವರ ಕಿವಿಗೆ ಬೀಳುತ್ತದೆ. ಅವರು "ನೋಡು ನೀನು ಎಸ್‌ಎಸ್‌ಎಲ್‌ಸಿಯನ್ನು ಒಂದೇ ಸಲಕ್ಕೆ ಪಾಸುಮಾಡಿದರೆ ನಿನಗೆ ನೂರು ರೂಪಾಯಿ ಕೊಡುತ್ತೇನೆ" ಅಂತ ಛಾಲೇಂಜ್ ಮಾಡುತ್ತಾರೆ. ಹಠಬಿದ್ದ ಸ್ವಾಮಿಗಳು ಒಂದೇ ಸಲಕ್ಕೆ ಎಸ್‌ಎಸ್‌ಎಲ್‌ಸಿಯನ್ನ ಪಾಸು ಮಾಡುತ್ತಾರೆ. ಆದರೆ ಅವರಿಗೆ ನೂರು ರೂಪಾಯಿ ಇನ್ನೂ ಬಂದಿಲ್ಲವಂತೆ.

ಯಾವುದೇ ಕೆಲಸವನ್ನು ಕೈಗೆತ್ತಿಕೊಂಡರೆ ಅದನ್ನು ಪೂರೈಸದೇ ಬಿಡವವರಲ ಈ ಛಲವಾದಿ. ಈ ಸ್ವಭಾವ ಇವರಿಗೆ ಮೊದಲಿನಿಂದಲೂ ಬಂದಿದ್ದೆ. ಈ ಸ್ವಭಾವ ಅವರು ರಂಗಭೂಮಿಯನ್ನು ಕಟ್ಟುವಲ್ಲಿ ಸಾಕಷ್ಟು ಸಹಕಾರಿ ಯಾಗಿದೆ.

ಹೇಳಿದೆನ್ನಲ್ಲ ಸ್ವಾಮಿಗಳು ಓದಿನಲ್ಲಿ ಸ್ವಲ್ಪ ಹಿಂದೆ ಅಂತ.

ಎಸ್‌ಎಸ್‌ಎಲ್‌ಸಿಯನು ಮುಗಿದ ನಂತರ ತಮ್ಮ ಪಿಯುಸಿ ವಿದ್ಯಾಭ್ಯಾಸವನ್ನು ಗದುಗಿನ ಫ್ರೀ ಬೋರ್ಡಿಂಗ್ ಸ್ಕೂಲ್‌ನಲ್ಲಿದ್ದುಕೊಂಡು ಮುಂದುವರೆಸಿದರು. ಹಾಗೂ ಹೀಗೂ ಪಿಯುಸಿಯನ್ನು ಮುಗಿಸಿಕೊಂಡು ಬಿಎಸ್ಸಿ ಪದವಿಗೆ ಸೇರುತ್ತಾರೆ. ಇಲ್ಲಿ ಬಿಎಸ್ಸಿ ಸೆಕೆಂಡಿಯರ್‌ನಲ್ಲಿ ಫೇಲಾಗುತ್ತಾರೆ. ವಿದ್ಯಾಭ್ಯಾಸ ಮುಂದುವರೆಸಲು ಸಾಧ್ಯವಾಗದೇ ಮುಂಡರಗಿಗೆ ವಾಪಸ್ಸಾದರು.

## ಮೊಬೈಲ್ ಇಸ್ಪೀಟು ಅಡ್ಡ

ಅಹ್ ಇದು ಸ್ವಾಮಿಗಳು ಮುಂಡರಗಿಗೆ ಬಂದ ಮೇಲೆ ಅತ್ತ ಓದದೇ ಇತ್ತ ದುಡಿಯದೇ ಮಾಡುವುದೇನು? ತನ್ನಂತೆ ಇರುವ ಹುಡುಗರ ತಂಡ ಕಟ್ಟಿಕೊಂಡು ಇಸ್ಪೀಟು ಆಡುವುದಕ್ಕೆ ಸುರುಮಾಡಿದರು. ಇವರು ಅಲ್ಲಿ ಇಲ್ಲಿ ಕೂತುಕೊಂಡು ಇಸ್ಪೀಟು ಆಡುವುದನ್ನು ಸಹಿಸದವರು ಮೂದಲಿಸುವುದಕ್ಕೆ ಸುರುಮಾಡಿದರು. ಹೇಗೆ ಸಹಿಸುತ್ತಾರೆ? ಇದೇನ್ ಘನಂದಾರಿ ಕೆಲಸವೇ...? ಜನರ ಕಣ್ಣ್ ತಪ್ಪಿ ಆಟ ಆಡುವುದು ಹೇಗೆ? ಹೊಳೆಯಿತು ನೋಡಿ ಸ್ವಾಮಿಗಳಿಗೊಂದು ಐಡಿಯಾ!. ಇವರ ಗೆಳೆಯನದೊಂದು ಪೆಟ್ಟಿ ಅಂಗಡಿ. ಅದರಲ್ಲಿ ಯಾಕೆ ನಾವು ಬಾಗಿಲು ಹಾಕಿಕೊಂಡು ಆಟ ಆಡಬಾರದು ಅಂತ ಅನ್ನಿಸಿದ್ದೇ ತಡ. ಪೆಟ್ಟಿ ಅಂಗಡಿ ಯಾವಾಗಲೂ ಬಾಗಿಲು ಹಾಕಿಕೊಂಡಿರುತ್ತಿತ್ತು.... ಆದರೆ ಒಳಗಡೆಯಿಂದ ಹೊಗೆ ಮಾತ್ರ ಹೊರಬರುತ್ತಿತ್ತು. ನೋಡಿದವರು ಸುಮ್ಮನಿದ್ದರೇ? ತೊಂದರೆ ಕೊಡವುದಕ್ಕೆ ಸುರು ಮಾಡಿದರು. ಬಂತು ನೋಡಿ ಮತ್ತೊಂದು ಐಡಿಯಾ. ಅಂಗಡಿಯನ್ನೇ ಎತ್ತಂಗಡಿ ಮಾಡಿದ್ದು, ಊರಾಚೆ, ಗದ್ದೆಬಯಲಿನಲ್ಲಿ, ಪಕ್ಕದೂರಿಗೆ... ಹೀಗೆ. ಎಲ್ಲಿಯತನಕ ಜನ ಈ ತೊಂದರೆ ಕೊಡುತ್ತಿರಲಿಲ್ಲವೋ ಅಲ್ಲಿಯವರೆಗೆ ಬಾಗಿಲು ಹಾಕಿದ ಪೆಟ್ಟಿ ಅಂಗಡಿ ಹೊಗೆ ಬಿಡುತ್ತಿತ್ತು. ತೊಂದರೆ ಕೊಟ್ಟು ಅಸಹನೆ ತೋರುತ್ತಿದ್ದರೊ... ಅಲ್ಲಿಂದ ನೀನು ಬೇಡ ನಿನ್ನ ಊರು ಬೇಡ...ಅಂತ ಸ್ಥಳಾಂತರವಾಗುತ್ತಿತ್ತು

ಈ ಅನುಭವವನ್ನು ಸ್ವಾಮಿಯವರು 1983ರಲ್ಲಿ ಸಮುದಾಯ ತಂಡಕ್ಕೆ ಶ್ರೀ ಪ್ರಸನ್ನನವರು ನಿರ್ದೇಶನ ಮಾಡಿದ 'ದಂಗೆಯ ಮುಂಚಿನ ದಿನಗಳು' ನಾಟಕದಲ್ಲಿ ಸ್ವಾಮಿಯವರು ಚದುರಂಗ ಆಡುವ ಆಟಗಾರನ ಪಾತ್ರ, ಈ ನಾಟಕದಲ್ಲೂ ಶತರಂಜ್ ಕೆ ಕಿಲಾಡಿಗಳು ಸ್ಥಳದಿಂದ ಸ್ಥಳಕ್ಕೆ ಸ್ಥಳಾಂತರಗೊಂಡು ಆಟ ಆಡುತ್ತಿರುತ್ತಾರೆ. ಊರು ದಂಗೆಯಲ್ಲಿ ನಾಶವಾದರೂ ಈ ಕಿಲಾಡಿಗಳಿಗೆ ಅದರ ಪರಿವೇ ಇರುವುದಿಲ್ಲ. ಜೀವನದ ಒಂದು ಅನುಭವವನ್ನು ನಟನೊಬ್ಬ

ತಾನು ಅಭಿನಯಿಸುವ ಪಾತ್ರಕ್ಕೆ ಹೇಗೆ ಎರಕಹೊಯ್ದು ಅಭಿನಯಿಸಬಹುದು ಎಂಬುದನ್ನು ಸ್ವಾಮಿಯವರು ಅಭಿನಯಿಸಿದ 'ದಂಗೆಯ ಮುಂಚಿನ ದಿನಗಳು' ನಾಟಕದ ಅವರ ಅದ್ಭುತ ಅಭಿನಯಕ್ಕೆ ಸಮೀಕರಿಸಿಕೊಂಡು ನೋಡಬಹುದು. ನಟನೊಬ್ಬ ತಾನು ಅಭಿನಯಿಸುವ ಪಾತ್ರಕ್ಕೆ ತನ್ನ ಜೀವನಾನುಭವಗಳನ್ನು ಎರವಲು ತಂದುಕೊಂಡು ಅಭಿನಯಿಸಬೇಕೆಂಬುದು ಹಲವು ರಂಗಸಿದ್ಧಾಂತಕಾರರ ವಾದ.

**ಹೀಗೆ ಬಂತು ಈ ರಂಗ ಪ್ರೀತಿ.....**

ಇದೇ ನೋಡಿ ಪರಮಾಶ್ಚರ್ಯವಾದ ಸಂಗತಿ. ಮಾಮ ಡಾಕ್ಟರ್ ಆಗಿದ್ದರಿಂದ 'ನಾನು ಡಾಕ್ಟರ್ ಆಗಬೇಕು' ಅಂತ ಗಂಗಾಧರಸ್ವಾಮಿ ಕನಸು ಕಂಡಿದ್ದುಂಟು. ಆದರೆ ರಂಗಭೂಮಿ ಮೂಲಕ ಸಮಾಜಕ್ಕೆ ಚಿಕಿತ್ಸೆಯನ್ನು ನೀಡುವ ಮಾನವೀಯತೆಯ ಡಾಕ್ಟರ್ ಆಗುತ್ತಾರೆ ಅಂತ ಯಾರಿಗೆ ಗೊತ್ತಿತ್ತು. ಆ ಸೆಳೆತ ಬಂದಿದ್ದೆಲ್ಲಿಂದ?

ನಿಮಗೆಲ್ಲಾ ಗೊತ್ತಿದೆ. ಉತ್ತರ ಕರ್ನಾಟಕದ ಕಣಕಣದಲ್ಲಿ ಜಾನಪದ ಸಂಸ್ಕೃತಿ ತುಂಬಿಕೊಂಡಿದೆ. ಈ ನೆಲದಲ್ಲಿ ಎಲ್ಲದಕ್ಕೂ ಹಾಡು ಹಸೆ ಇದ್ದೇ ಇರುತ್ತದೆ. ಹುಟ್ಟಿದಾಕ್ಷಣದಿಂದ ಅಂತಿಮ ಜೀವನಯಾತ್ರೆ ನಡೆಸುವತನಕ ಜೀವನದಲ್ಲಿ ನಡೆಯುವ ಎಲ್ಲದಕ್ಕೂ ಹಾಡು, ಆಟ, ಸಂಸ್ಕೃತಿಯ ಸಿಂಚನ ಇದ್ದೇ ಇರುತ್ತದೆ. ಇನ್ನೂ ಜಾತ್ರೆ ಹರಿದಿನಗಳ ವಿಷಯಕ್ಕೆ ಬಂದರೆ. ಆಟ, ಬಯಲಾಟ, ಕೂಟ ಇಲ್ಲದೇ ಅವು ಮುಗಿಯೋದೇ ಇಲ್ಲ. ನೂರಾರು ಕಲಾಪ್ರಕಾರಗಳು, ಲಾವಣಿ, ಸೋಬಾನೆಪದ, ಡೊಳ್ಳಿನ ಪದ, ಕೋಲಾಟ, ಹಗಲುವೇಷ, ಬಹುರೂಪಿಗಳು, ಹೀಗೆ ಬೆಳೆಯುತ್ತಾ ಹೋಗುತ್ತದೆ. ಇದೆಲ್ಲ ಕಂಡವರು ನಮ್ಮ ಗಂಗಾಧರಸ್ವಾಮಿಗಳು.

ಹೈಸ್ಕೂಲ್ ಓದುತ್ತಿದ್ದಾಗ ಶಾಲೆಯ ಮಾಸ್ತರೊಬ್ಬರು ನಾಟಕ ಮಾಡಿಸಿದ್ದರು. ಅದರಲ್ಲಿ ಇವರದು ಪೋಸ್ಟ್‌ಮ್ಯಾನ್ ಪಾತ್ರ. ಇವರು ಬಟ್ಟೆ ಹಾಕಿಕೊಂಡು, ಕೈಯಲ್ಲಿ ಪೋಸ್ಟ್ ಹಿಡಿದುಕೊಂಡು ನೇಪಥ್ಯದಲ್ಲಿ ನಿಲ್ತಾರೆ. ಎದೆಯಲ್ಲಿ ನಡುಕ, ಭಯ. ಎಂಟ್ರಿ ಕೊಡದ ಹಾಗೆ ನಿಂತು ಬಿಡ್ತಾರೆ. ನಾಟಕ ಕಲಿಸಿದ ಮೇಸ್ಟ್ರಿಗೆ ಸಿಟ್ಟುಬಂದು ಕಪಾಳಕ್ಕೊಂದು ಕೊಟ್ಟು ನಡಿ ಆಚೆಗೆ ಅಂತ ಕಳುಹಿಸುತ್ತಾರೆ. ಆಮೇಲೆ ಅದನ್ನ ಬೇರೆ ಯಾರೋ ಮಾಡಿದರು. ನಾಟಕ ಮುಂದುವರೆಯಿತು.

ಅಲ್ಲದೆ ಪ್ರಭಯ್ಯನಮಠರವರಿಗೆ ಕಲೆ ಮತ್ತು ಸಂಸ್ಕೃತಿ ಬಗ್ಗೆ ಅಪಾರವಾದ ಪ್ರೀತಿಯಿತ್ತು. ಅವರು ಸಹ ದೊಡ್ಡಾಟದಲ್ಲಿ ಅಭಿನಯಿಸಿದ ಕಲಾವಿದರಾಗಿದ್ದರು. ನಮ್ಮ ಹಳ್ಳಿಗಳಲ್ಲಿ ನಾಟಕ, ಬಯಲಾಟವನ್ನು ಕಟ್ಟುವುದು ಅಂದರೆ ಅದೊಂದು 'ಸಮಾಜವನ್ನು ಒಗ್ಗೂಡಿಸುವ ಮತ್ತು ಐಕ್ಯತೆಯನ್ನು ವೃದ್ಧಿಸಿಕೊಳ್ಳುವ ಪ್ರಕ್ರಿಯೆ' ಎಂದು ನನ್ನ ಅಭಿಪ್ರಾಯ. ಎಲ್ಲಾ ಜಾತಿ ಮತ್ತು ವರ್ಗದವರು ಸೇರಿಕೊಂಡು ನಾಟಕ ಮತ್ತು ಬಯಲಾಟಗಳನ್ನು ಕಟ್ಟುತ್ತಿದ್ದರು. ಸಾಮಾನ್ಯವಾಗಿ ಹಬ್ಬ ಹರಿದಿನಗಳಲ್ಲಿ ಈ ಸಾಂಸ್ಕೃತಿಕ ಕಾರ್ಯಕ್ರಮ ನಡೆಯುವುದು ವಾಡಿಕೆ. ಆಟಗಳಲ್ಲಿ ಮುಖ್ಯಪಾತ್ರಗಳನ್ನು ಮೇಲ್ವರ್ಗದವರು, ದುಡ್ಡಿದ್ದವರು ಅಭಿನಯಿಸುವುದು ಸಾಮಾನ್ಯ ಸಂಗತಿ. ಸಣ್ಣಪುಟ್ಟ ಪಾತ್ರಗಳು ಬಡವರ, ಶೂದ್ರರ ಪಾಲಾಗುತ್ತಿತ್ತು. ಎಷ್ಟೋ ಆಟದ ಕಥಾನಕದಲ್ಲಿ ಸಣ್ಣಪುಟ್ಟ ಪಾತ್ರಗಳಿಗೆ ಪ್ರಮುಖ ಪಾತ್ರಗಳು ನಮಸ್ಕರಿಸುವ, ಕಾಲಿಗೆರಗುವ ಸನ್ನಿವೇಶಗಳು ಬರುತ್ತವೆ. ಹಾಗೆ ಮಾಡಬೇಕಾದದ್ದು ಅನಿವಾರ್ಯ. ಇಂತಹದೊಂದು ಸನ್ನಿವೇಶ ಪ್ರಭಯ್ಯನಮಠ ಅಭಿನಯಿಸಿದ ದೊಡ್ಡಾಟದಲ್ಲಿ ಬರುತ್ತದೆ. ಪ್ರಮುಖ ಪಾತ್ರಧಾರಿ, ಇನ್ನೊಂದು ಪಾತ್ರಕ್ಕೆ ನಮಸ್ಕರಿಸುವ ಸನ್ನಿವೇಶ. ಜಂಗಮರಾದ ಪ್ರಭಯ್ಯನಮಠ, ಶೂದ್ರನಾದ ಪಾತ್ರಧಾರಿಗೆ ಸಮಸ್ಕರಿಸಬೇಕೆ ಬೇಡವೆ ಎಂದು ದೊಡ್ಡ ಚರ್ಚೆ ವಾರಗಟ್ಟಲೆ ಊರಿನಲ್ಲಿ, ಸುತ್ತಮುತ್ತಲ ಹಳ್ಳಿಗಳಲ್ಲಿ ನಡೆಯುತ್ತದೆ. ಪ್ರದರ್ಶನದ ದಿನ ವೇಷಧಾರಿಯಾದ ಪ್ರಭಯ್ಯನಮಠನವರು ಪಾತ್ರಧಾರಿಗೆ ನಮಸ್ಕಾರವನ್ನು ಮಾಡುತ್ತಾರೆ. ಈ ಘಟನೆ ಪ್ರಭಾವ ಗಂಗಾಧರಸ್ವಾಮಿಗಳ ಮೇಲಾಗುತ್ತದೆ.

ಸ್ವಾಮಿಗಳಿಗೆ ತಮ್ಮ ತಂದೆಯ ಶಿಸ್ತು, ಬದ್ಧತೆ ಎರವಲಾಗಿ ಬಂದರೆ, ಜಾತ್ಯಾತೀತ ಮನೋಭಾವ ಬಂದಿದ್ದು ಅವರ ದೊಡ್ಡಪ್ಪನವರಿಂದ. ಅವರ ಮನೆತನದ ಹೆಸರು 'ಪ್ರಭಯ್ಯನಮಠ' ಅಂತ. ಹೆಸರಿನೊಂದಿಗೆ ಪ್ರಭಯ್ಯನಮಠ ಅಂತ ಇದ್ದರೆ ಅದು ಜಾತಿ ಸೂಚಕವಾಗುತ್ತದೆ ಅಂತ ಅವರು 'ಕುರ್ತುಕೋಟಿ' ಎಂದು ಗುರುತಿಸಿಕೊಳ್ಳುತ್ತಾರೆ. ದೊಡ್ಡಪ್ಪ ಆಯುರ್ವೇದಿಕ್ ಡಾಕ್ಟರ್. ಅವರು ಎಲ್ಲಿ ಹೋದರಲ್ಲಿ ಸಾಮಾಜಿಕ ಕ್ರಾಂತಿಯನ್ನೇ ಮಾಡುತ್ತಿದ್ದರು. ದೇವಸ್ಥಾನದೊಳಗೆ ಶೂದ್ರರನ್ನು ದಲಿತರನ್ನು ಕರೆದುಕೊಂಡು ಹೋಗುವುದು, ಮನೆಗೆ ಕರೆಸಿಕೊಂಡು ಪಾಠ ಮಾಡುವುದು, ಸಹಪಂಕ್ತಿ ಭೋಜನ ಮಾಡುವುದು ಮುಂತಾದವನ್ನು ಮಾಡುತ್ತಿದ್ದರು. ಮೇಲ್ವರ್ಗದ ಜನ ಸಹಿಸದೆ ಇವರಿಗೆ ಕಿರುಕುಳ ನೀಡುತ್ತಿದ್ದರು. ತೊಂದರೆ ಸಹಿಸಲಾಗದೆ ಇವರು ಮುಂದಿನ ಊರಿಗೆ ಹೋಗುತ್ತಿದ್ದರು. ಈ ಘಟನೆಗಳು ಪದೇ ಪದೇ ನಡೆಯುತ್ತಲೇ ಇತ್ತು. ಪ್ರತಿದಿನ

ದೊಡ್ಡಪ್ಪ ಕೆಲಸದಿಂದ ಬಂದ ಮೇಲೆ ತಂಬೂರಿಯನ್ನು ಮೀಟುತ್ತಾ ಗಂಟೆಗಟ್ಟಲೇ ಹಾಡುತ್ತಾ, ಧ್ಯಾನಸ್ಥರಾಗುತ್ತಿದ್ದರು. ಇದು ಸ್ವಾಮಿಗಳ ಮೇಲೆ ಹೆಚ್ಚಿನ ಪ್ರಭಾವ ಬೀರಿತು.

ಅಲ್ಲದೇ ಈ ರಂಗಪಟು ಕೂಸಿಗೆ ಜೋಗುಳ ಹಾಡಿದವರು ವೃತ್ತಿರಂಗಭೂಮಿಯ ಪ್ರಸಿದ್ಧ ನಾಟಕಕಾರರಾದ ಹೆಚ್. ಎನ್. ಹೂಗಾರ್‌ರವರು. ಗದಗಿನಲ್ಲಿ ಹೂಗಾರವರ ಮನೆಯ ಪಕ್ಕದಲ್ಲಿ ಸ್ವಾಮಿಗಳ ಮನೆಯಿತ್ತು. ಚಿಕ್ಕಮಗುವಾಗಿದ್ದ ಸ್ವಾಮಿಯವರನ್ನು ಹೂಗಾರ್‌ರವರು ಎತ್ತಿ ಆಡಿಸುತ್ತಿದ್ದರು. ಹೂಗಾರ್‌ರವರು ಮನೆ ಮನೆಗೆ ಹೋಗಿ ಹೂ ಕೊಡುವ ತಮ್ಮ ವೃತ್ತಿಯನ್ನು ಮಾಡುತ್ತಿದ್ದರು. ಹೂಗಾರ್‌ರವರು ಅನೇಕ ನಾಟಕಗಳಿಗೆ ಗಂಗಾಧರಸ್ವಾಮಿಯವರನ್ನು ಕರೆದುಕೊಂಡು ಹೋಗುತ್ತಿದ್ದರು. ಹೂಗಾರ್‌ರವರ ಮನೆಗೆ ನಾಟಕದ ಕಲಾವಿದರು ಸಾಮಾನ್ಯವಾಗಿ ಬರುತ್ತಿದ್ದರು. ರಾತ್ರಿ ನಾಟಕದಲ್ಲಿ ಕಂಡ ಕಲಾವಿದರನ್ನು ಎದುರಿಗೆ ಕಂಡಾಗ ಸ್ವಾಮಿಗಳಿಗೆ ಬೆರಗೋ ಬೆರಗು.

ಹೆಚ್. ಎನ್. ಹೂಗಾರ್‌ರವರು ತಮ್ಮದೇ ಆದ ಒಂದು ಕಂಪನಿಯನ್ನು ಕಟ್ಟುತ್ತಾರೆ. ಈ ಕಂಪನಿ ಮಾಡುವ ನಾಟಕಗಳನ್ನು ನೋಡುವುದು ಕಂಪನಿಯೊಟ್ಟಿಗೆ ಪ್ರವಾಸ ಮಾಡುವುದು ಸುರುವಾಗುತ್ತದೆ. ಅವರು ನಡೆಸುವ ನಾಟಕ ಚರ್ಚೆಗಳು, ನಾಟಕವನ್ನು ಕಲಾವಿದರಿಗೆ ಕಲಿಸುವ ಪರಿ ಸ್ವಾಮಿಯವರ ಮೇಲೆ ಸಾಕಷ್ಟು ಪ್ರಭಾವವನ್ನು ಬೀರುತ್ತದೆ. ಇವರ ಸಂಪರ್ಕದಿಂದ ಗುಡಿಗೇರಿ ಕಂಪನಿಯಲ್ಲಿ ಒಂದಿಷ್ಟು ದಿನ ಕೆಲಸ ಮಾಡುತ್ತಾರೆ. ಇಲ್ಲಿ ಕಂಪನಿ ವಾತಾವರಣ ಕಲಿಕಾ ವಿಧಾನಗಳು ಪ್ರದರ್ಶನ ಪದ್ಧತಿಗಳು ಹೆಚ್ಚು ಪ್ರಭಾವವನ್ನು ಬೀರುತ್ತದೆ. ಇದು ಮೂರ್‍ನಾಲ್ಕು ವರ್ಷಗಳ ಕಾಲ ಸಾಗುತ್ತದೆ. ಇಷ್ಟೆಲ್ಲಾ ಕಂಪನಿಯವರೊಟ್ಟಿಗಿದ್ದಾಗ ಸಣ್ಣಪುಟ್ಟ ಪಾತ್ರಗಳಿಗೆ ಬಣ್ಣ ಹಚ್ಚಿಕೊಂಡು ರಂಗಪ್ರವೇಶವನ್ನು ಮಾಡುತ್ತಾರೆ. ಆದರೂ ರಂಗಭೂಮಿಯನ್ನು ಸೀರಿಯಸ್ಸಾಗಿ ಸ್ವೀಕಾರ ಮಾಡುವ ಮನಸ್ಸು ಈ ಸಂದರ್ಭದಲ್ಲಿ ಸ್ವಾಮಿಗಳಿಗೆ ಬರಲಿಲ್ಲ. ಆದರೆ ಸುಪ್ತಪ್ರಜ್ಞೆಯಲ್ಲೊಂದು ರಂಗ ಮುರಳಿಯ ಗಾನ ಕರೆಯುತ್ತಲೇ ಇತ್ತು.

**ಯಾವ ಮೋಹನ ಮುರುಳಿ ಕರೆಯಿತೋ....**

ಇಸ್ಪೀಟು ಆಟದಲ್ಲಿ ಸಾಥ್ ನೀಡುತ್ತಿದ್ದ ಗೆಳೆಯರಿಗೆ ಕೆಲಸ ಸಿಕ್ತು. ಏನ್ ಮಾಡೋದು ಏನಾದ್ರೂ ಮಾಡಬೇಕಲ್ಲ, ಸುಮ್ನೆ ಉಂಡ್ಕೊಂಡು ತಿನ್ಕಂಡು ಇದ್ದರೆ ಯಾರು ಸುಮ್ಮನಿದ್ದಾರು? ಆಯುರ್ವೇದಿಕ್ ಡಾಕ್ಟರ್ ಮಾಮನ

ನೋಡಿ ಮನಸ್ಸಿನಲ್ಲಿ 'ನಾನೂ ಡಾಕ್ಟರ್ ಆಗಬೇಕು' ಎಂಬ ಬಯಕೆಯೊಂದು ಹುಟ್ಟಿತ್ತಲ್ಲ, ಅದರ ಸೆಳೆತ ಹೆಚ್ಚಾಯಿತು. ಮುಂಡರಗಿಯಲ್ಲಿ ಆಯುರ್ವೇವೇದಿಕ್ ಡಾಕ್ಟರ್ ಶಂಭುಲಿಂಗ ಸೂಡಿ ಅಂತ, ಅವರು ಶಾಪ್ ಇಟ್ಟುಕೊಂಡು ಚಿಕಿತ್ಸೆಯನ್ನು ಕೊಡ್ತಾ ಇದ್ದರು ಅಲ್ಲಿಗೆ ಸ್ವಾಮಿಗಳು ಹೋಗಿ ಸೇರಿಕೊಳ್ಳುತ್ತಾರೆ. ರೋಗಿಗಳಿಗೆ ಬ್ಯಾಂಡೇಜ್ ಹಾಕೋದು, ಔಷಧಿ, ಇಂಜೆಕ್ಷನ್ ಕೊಡೋದು ಕಲೀತಾರೆ. ಈ ಸಂದರ್ಭದಲ್ಲಿ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ 'ನೀವು ಡಾಕ್ಟರ್ ಆಗಬೇಕೆ' ಎಂಬ ಜಾಹೀರಾತು ಕಣ್ಣಿಗೆ ಬೀಳುತ್ತದೆ. ಅದು ಹೋಮಿಯೋಪತಿ ಪದ್ಧತಿಯನ್ನು ಅಂಚೆ ಮೂಲಕ ಕಲಿಸುವ ಕೋರ್ಸು. ಅದಕ್ಕೆ ಅರ್ಜಿಯನ್ನು ಹಾಕಿಕೊಂಡು ಸೇರಿಕೊಳ್ಳುತ್ತಾರೆ. ಅವರು ಕಳಿಸುವ ಪುಸ್ತಕಗಳನ್ನು, ನೋಟ್ಸ್‌ಗಳನ್ನು ಓದಿಕೊಂಡು ಪಾಸಾಗುತ್ತಾರೆ. ಇದರ ಎರಡು ತಿಂಗಳ ಪ್ರಾಯೋಗಿಕ ತರಬೇತಿಯನ್ನು ಪಡೆಯಲು ಬೆಂಗಳೂರಿಗೆ ಬರಲು ಕರೆ ಬರುತ್ತದೆ.

❒

# ಬೆಂಗಳೂರಿಗೆ ಬಂದವರು ತಿರುಗಿ ಹೋಗಲಿಲ್ಲ

ಹೌದು, ಪ್ರಾಯೋಗಿಕ ತರಬೇತಿಯನ್ನು ನೀಡಲು ಡಾ. ರಾಮನ್ ಎಂಬ ಪ್ರಸಿದ್ಧ ಪೆಥಾಲಜಿ ತಜ್ಞರು ಬರುತ್ತಿದ್ದರು. ಅವರ ಕ್ಲಿನಿಕ್ ರಾಜಾಜಿನಗರದ ನವರಂಗ ಥಿಯೇಟರ್ ಬಳಿಯಿತ್ತು. ಈಗ ಮೆಟ್ರೋ ಬಂದು ಅದನ್ನು ಒಡೆದು ಹಾಕಲಾಗಿದೆ. ಬೆಂಗಳೂರಿನಿಂದ ಮರಳಿ ವಾಪಸ್ಸು ಡಾ. ರಾಮನ್‌ರವರ ಹತ್ತಿರ 'ಸಾರ್ ಬೆಂಗಳೂರಿನಲ್ಲಿರಬೇಕು ನನಗೆ ಏನಾದರೂ ಒಂದು ಕೆಲಸ ಕೊಡಿ' ಅಂತ ಕೋರಿದರು. ಅವರ ಕ್ಲಿನಿಕ್‌ನಲ್ಲಿ ಸಹಾಯಕ ಕೆಲಸವನ್ನು ಮಾಡುವ ಅವಕಾಶವೊಂದು ಸ್ವಾಮಿ ಅವರಿಗೆ ಸಿಗುತ್ತದೆ. ಪ್ರಾಯೋಗಿಕವಾಗಿ ಪ್ರಯೋಗಿಸುವ ಮತ್ತು ನುರಿತ ಡಾಕ್ಟರ್‌ನೊಟ್ಟಿಗೆ ಕೆಲಸ ಮಾಡುವ ಅವಕಾಶವೊಂದು ಸಿಗುತ್ತದೆ. ಬೆಂಗಳೂರಿನಲ್ಲಿರುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟವರು ಸ್ವಾಮಿಯವರ ತಂಗಿ ಗಂಡನಾದ ಶ್ರೀ ಮನೋಹರರವರು. ಇವರು ಬಸವೇಶ್ವರ ಹೈಸ್ಕೂಲ್‌ನಲ್ಲಿ ಮೇಸ್ಟ್ರಾಗಿದ್ದರು. ಸ್ವಾಮಿಯವರು ಬೆಂಗಳೂರಿನಲ್ಲಿ ನೆಲೆಯೂರವುದಕ್ಕೆ ಅವರು ಬೆಂಬಲವಾಗಿದ್ದರು.

ಸ್ವಾಮಿಯವರಿಗೆ ಬೆಂಗಳೂರಿನ ಶ್ರೀರಾಂಪುರದ 'ವಿಜಯ ವಿದ್ಯಾರಣ್ಯ ಕನ್ನಡ ಕಲಾಸಂಘ' ದ ಕಲಾವಿದರ ಸಂಪರ್ಕವಾಗುತ್ತೆ. ಈ ಸಂಘದವರು ರಸ್ತೆ, ಬಯಲು ಜಾಗದಲ್ಲಿ ಸ್ಟೇಜ್ ಹಾಕಿಕೊಂಡು 'ಶನಿಮಹಾತ್ಮೆ' 'ಕುರುಕ್ಷೇತ್ರ' ಮುಂತಾದ ನಾಟಕಗಳನ್ನು ಅಭಿನಯಿಸುತ್ತಿದ್ದರು. ಈ ತಂಡ ಅಭಿನಯಿಸಿದ 'ಸಾಹುಕಾರ ಸೋಮಶೇಖರಯ್ಯ' ಸಾಮಾಜಿಕ ನಾಟಕದಲ್ಲಿ ಪಾತ್ರವನ್ನು ಮಾಡುವ ಮೂಲಕ ತಮ್ಮ ರಂಗಾಯನವನ್ನು ಪ್ರಾರಂಭಿಸುತ್ತಾರೆ. ಈ ಸಂದರ್ಭದಲ್ಲಿ ಸಂಪರ್ಕಕ್ಕೆ ಬಂದವರು ಭವಾನಿ ತ್ಯಾಗರಾಜ್ ಮತ್ತು ಹಂಸಲೇಖರವರು. ಈ ಭವಾನಿ ತ್ಯಾಗರಾಜ್‌ರವರು ನಾಟಕಗಳಿಗೆ ಸಂಗೀತ ನಿರ್ದೇಶನವನ್ನು ಮಾಡುತ್ತಿದ್ದರು. ಇವರಿಗೆ ಬಹಳಷ್ಟು ಜನ ನಾಟಕದವರ ಸಂಪರ್ಕವಿತ್ತು. ಇವರ ಸಹಕಾರದೊಂದಿಗೆ ಎಲ್ಲೆಲ್ಲಿ ನಾಟಕಗಳು ನಡೆಯುತ್ತಿದ್ದವೊ ಅಲ್ಲಲ್ಲಿ ನೇಪಥ್ಯದ ಕೆಲಸವನ್ನು ಮಾಡುತ್ತಾ ಸ್ವಾಮಿ ನಾಟಕದವರಿಗೆ ಸಹಾಯ ಮಾಡತೊಡಗಿದರು.

## ನಾಚೋ ಸ್ವಾಮಿ ನಾಚೋ....

ಇದೇನ್ ಇದು ಹೀಗೆ ಹೇಳ್ತಾ ಇದ್ದೇನೆ ಅಂತ ಅಂದುಕೊಂಡಿರಾ? ಹೌದು! ನಮ್ಮ ಸ್ವಾಮಿಗಳು ಭರತನಾಟ್ಯ ಕಲಾವಿದನಾಗಬೇಕಂತ ವಿಜಯನಗರದ ಶ್ರೀ ಆರಾಧ್ಯ ಅವರು ನಡೆಸುತ್ತಿದ್ದ 'ಸಂಗೀತ ಭಾರತಿ' ಶಾಲೆಯಲ್ಲಿ ನಾಟ್ಯಗುರು ಶ್ರೀ ಎನ್.ಎನ್. ಭಾಸ್ಕರರವರ ಬಳಿ ಭರತನಾಟ್ಯವನ್ನು ಕಲಿಯಲು ಸೇರಿಕೊಂಡರು. ಇದು ಹೇಗಪ್ಪ ಅಂದ್ರೆ.... ಡಾ. ರಾಮನ್‌ರವರ ಕ್ಲಿನಿಕ್ ಕೆಲಸ ಕೈ ತಪ್ಪಿ ಹೋಗುತ್ತೆ. ಮುಂದೆ ಏನು ಮಾಡಬೇಕೂಂತ ತಿಳಿಯದೇ ಸ್ವಾಮಿ ಕೆಲಸಕ್ಕಾಗಿ ಅಲೆಯ ತೊಡಗುತ್ತಾರೆ. ಆಗ ರಾಜಾಜಿ ನಗರದ ಶಾಂತಿ ವಿದ್ಯಾಮಂದಿರದಲ್ಲಿ ತಾತ್ಕಾಲಿಕವಾಗಿ ಕನ್ನಡದ ಮೇಸ್ಟ್ರು ಕೆಲಸಕ್ಕೆ ಸೇರಿಕೊಳ್ಳುತ್ತಾರೆ (1971). ಇಲ್ಲಿ ಒಂದು ವರ್ಷ ಕೆಲಸ ಮಾಡುತ್ತಾರೆ. ತಿಂಗಳಿಗೆ 120 ರೂ ಸಂಬಳ. ಇದರ ಜೊತೆಗೆ ಮಕ್ಕಳಿಗೆ ಮನೆಪಾಠವನ್ನು ಪ್ರಾರಂಭಿಸುತ್ತಾರೆ. ಶಾಲೆಯಲ್ಲಿ ಮಕ್ಕಳಿಗೆ ಪಾಠ ಮಾಡುವುದರೊಂದಿಗೆ ಹಾಡು, ಡ್ಯಾನ್ಸ್‌ನ್ನು ತಮಗೆ ತಿಳಿದ ಹಾಗೆ ಹೇಳಿಕೊಡಲು ತೊಡಗುತ್ತಾರೆ. ಆಗ ಅವರಿಗೆ ಅನಿಸುತ್ತದೆ. ಇಲ್ಲ ನಾನು ತಪ್ಪು ಮಾಡುತ್ತಿದ್ದೇನೆ, ಹಾಡು ಡ್ಯಾನ್ಸ್ ಗೊತ್ತಿಲ್ಲದ ನಾನು ಹೇಗೆ ಹೇಳಿಕೊಡುವುದು, ಮೊದಲು ನಾನು ಕಲಿತು ನಂತರ ಮಕ್ಕಳಿಗೆ ಹೇಳಿಕೊಡಬೇಕು ಅಂತ ನಾಟ್ಯಶಾಲೆಗೆ ಸೇರಿಕೊಳ್ಳುತ್ತಾರೆ. ಈ ನಾಟ್ಯಶಾಲೆಯಲ್ಲಿ ಪುರುಷ ಕಲಾವಿದರ ಕೊರತೆ ಸಾಕಷ್ಟು ಇತ್ತು. ಸರಿ, ಸಿಕ್ಕನಲ್ಲಪ್ಪ ಇವನು ಅಂತ ಶ್ರೀ ಎನ್. ಎನ್. ಭಾಸ್ಕರರವರು ತುರ್ತಾಗಿ ಭರತನಾಟ್ಯ ಕಲಾವಿದನಾಗಿ ಕೇವಲ ಆರು ತಿಂಗಳಲ್ಲಿ ಮಾಡಿಬಿಟ್ಟರು. ಇಷ್ಟು ತುರ್ತಾಗಿ ಕಲಾವದನಾಗಿ ರೂಪಿಸಲು ಒಂದು ಕಾರಣವೂ ಇತ್ತು. ಸಂಗೀತ ಭಾರತಿ ವಿದ್ಯಾಮಂದಿರದ ಶಾಲೆಗ ಸಿಕ್ಕಾಪಟ್ಟೆ ರಂಗಪ್ರದರ್ಶನಗಳಿಗೆ ಅವಕಾಶ ಬರುತ್ತಿತ್ತು. ಈ ಸಂಸ್ಥೆಯವರು ಮಾಡುತ್ತಿದ್ದ ಕಾರ್ಯಕ್ರಮದಲ್ಲಿ ನವಿಲು ನೃತ್ಯಗಾರನಾಗಿ, ತಾಂಡವ ನೃತ್ಯ, ಜತಿಸ್ವರ ನೃತ್ಯ, ಶಿವ, ಕೃಷ್ಣ, ರಾಮನಾಗಿ ನಾಟ್ಯಾಭಿನಯವನ್ನು ಮಾಡಿ ಖ್ಯಾತಿ ಗಳಿಸಿಕೊಂಡರು. ನಾಟ್ಯಶಾಲೆಯಲ್ಲಿ ಕಲಿತದ್ದು ಶಾಲೆಯಲ್ಲಿ ಮಕ್ಕಳಿಗೆ ಕಲಿಸುತ್ತಾ ಆನಂದ ಪಟ್ಟರು. ಈ ಸಂದರ್ಭದಲ್ಲಿ ಪ್ರದರ್ಶನ ಕಲೆ ಬಗ್ಗೆ ವಿಶೇಷ ಆಸಕ್ತಿಯನ್ನು ಬೆಳೆಸಿಕೊಂಡರು.

## ಸೀರೆ ಬೇಕೇನಮ್ಮ ಸೀರೆ....

ಸರಿಯಾಗಿ ಕೇಳಿಸಿಕೊಳ್ಳಿ ಬೆಂಗಳೂರು ಬೀದಿ ಬೀದಿಯಲ್ಲಿ ನಮ್ಮ ಗಂಗಾಧರಸ್ವಾಮಿಗಳು ಕೂಗುತ್ತಾ ಗಿರಾಕಿಗಳನ್ನು ಕರೆಯುತ್ತಿದ್ದ ಧ್ವನಿ ಇದು....

ಮೇಸ್ತ್ರಾಗಿ ಬದುಕನ್ನು ಕಂಡುಕೊಳ್ಳುವಾಸೆ ಎದ್ದಾಡುವ ಹೊತ್ತಿನಲ್ಲಿಯೇ, ಕೆಲಸವನ್ನು ಬಿಡಬೇಕಾದ ಸ್ಥಿತಿ ಎದುರಾಯಿತು. ಶಾಂತಿ ವಿದ್ಯಾಮಂದಿರದ ಕೆಲಸ ಮಾಡುವ ಸಿಬ್ಬಂದಿಗಳಿಗೆ ವೇತನ ನೀಡುವಲ್ಲಿ ಆಡಳಿತ ಮಂಡಳಿಯವರು ತಾರತಮ್ಯ ಮಾಡುತ್ತಿದ್ದರು. ಅಲ್ಲದೆ ಪ್ರತೀ ತಿಂಗಳು ಸಂಬಳವನ್ನು ಪಡೆಯುವಾಗ 40 ರೂಪಾಯಿಗಳನ್ನು ನೀಡಿದರೆ ಮಾತ್ರ ಸಂಬಳವನ್ನು ನೀಡುತ್ತಿದ್ದರು. ಈ ಭ್ರಷ್ಟಾಚಾರದ ವಿರುದ್ಧ ಸಿಬ್ಬಂದಿಗಳು ಸಿಡಿದೆದ್ದರು. ಪ್ರತಿಭಟನೆ ಮತ್ತು ಮುಷ್ಕರಗಳನ್ನು ನಡೆಸಿದರು. ಇದು ಸ್ವಾಮಿಗಳು ಭಾಗವಹಿಸಿದ ಮೊದಲ ಪ್ರತಿಭಟನೆ. ಪ್ರತಿಭಟನೆ ತೀವ್ರವಾದಾಗ ಸರಕಾರ ಆಡಳಿತ ಮಂಡಳಿ ವಿರುದ್ಧ ಕ್ರಮ ಕೈಗೊಂಡಾಗ ಸಂಬಳವನ್ನು ಚೆಕ್ ಮೂಲಕ ನೀಡುವ ವ್ಯವಸ್ಥೆಯನ್ನು ಮಾಡಿದರು. ಕೊನೆಗೆ ಆಡಳಿತ ಮಂಡಳಿಯವರು ತಂತ್ರ ಮಾಡಿ ಕನ್ನಡ ಮಾಧ್ಯಮವನ್ನು ತೆಗೆದು ಹಾಕಿ ಆಂಗ್ಲ ಮಾಧ್ಯಮವನ್ನು ಪ್ರಾರಂಭಿಸಿದರು. ಕನ್ನಡದಲ್ಲಿ ಪಾಠ ಮಾಡುವವರನ್ನು ತೆಗೆದುಹಾಕಿದರು. ಸ್ವಾಮಿಯವರು ಬೀದಿಗೆ ಬಿದ್ದರು. ಮತ್ತೆ ಬದುಕು ದುಸ್ತರವಾಯಿತು.

ಸ್ವಾಮಿ ಮತ್ತೆ ಕೆಲಸವನ್ನು ಹುಡುಕುವುದಕ್ಕೆ ಪ್ರಾರಂಭ ಮಾಡಿದರು. ಶಾಂತಿ ವಿದ್ಯಾಮಂದಿರ ಹೈಸ್ಕೂಲ್ ವಿಭಾಗದ ಮುಖ್ಯೋಪಾಧ್ಯಾಯನಿ ಶ್ರೀಮತಿ ನಾಗಪಾಲ್‌ರವರು ತಮ್ಮ ಪತಿಯ ಔಷಧಿ ತಯಾರಿಸುವ 'ಮೆಡಿಕೇಡ್ಸ್' ಕಂಪನಿಯಲ್ಲಿ ಕೆಲಸವೊಂದನ್ನು ಕೊಡಿಸಿದರು. ಇಲ್ಲಿ ಕಮ್ಮಿ ಸಂಬಳ. ಶೆಡ್‌ನಲ್ಲಿ ವಾಸ. ವೇಳೆ ನಿಗದಿ ಇಲ್ಲದ ಕೆಲಸ. ಮಾತ್ರೆಗಳಿಗೆ ಶುಗರ್ ಕೋಟಿಂಗ್ ಮಾಡುವುದು, ಪಂಚಿಂಗ್, ಪ್ಯಾಕಿಂಗ್ ಹೀಗೆ.... ಮಾತ್ರೆ ಮಾರುಕಟ್ಟೆಗೆ ಹೋಗುವತನಕ ಎಲ್ಲಾ ವಿಭಾಗದಲ್ಲೂ ಕೆಲಸ ಮಾಡುತ್ತಿದ್ದರು. ಈ ಒಂದು ಮಾತ್ರೆಗೆ ಫೆರಸ್ ಸಲ್ಫೇಟ್ ಅನ್ನುವ ರಸಾಯನಿಕವನ್ನು ಮಿಶ್ರಣ ಮಾಡುವ ಕೆಲಸ... ಬರಿಗೈಯಲ್ಲಿ ಕೆಲಸ ಮಾಡುತ್ತಿದ್ದುದರಿಂದ ದೇಹಕ್ಕೆ ಅಲರ್ಜಿಯಾಗಿ ಮೈ ಕೈ ತುಂಬಾ ಕಪ್ಪು ಕಪ್ಪು ಗುಳ್ಳೆಗಳೆದ್ದು ಆರೋಗ್ಯ ಹದಗೆಟ್ಟಿತ್ತು. ಇದನ್ನು ಗಮನಿಸಿದ ಶ್ರೀಮತಿ ನಾಗಪಾಲ್‌ರವರು ಸ್ವಾಮಿಯವರನ್ನು ಕೆಲಸದಿಂದ ಬಿಡುಗಡೆಗೊಳಿಸಿದರು. ಮುಂದೇನು? ಏನಾದ್ರೂ ಮಾಡಬೇಕಲ್ವೇ? ಶ್ರೀಮತಿ ನಾಗಪಾಲ್‌ರವರು ಹೋಲ್‌ಸೇಲ್‌ನಲ್ಲಿ ಸೀರೆಗಳನ್ನು ಕೊಡಿಸಿದರು. ಒಂದು ಸೈಕಲ್‌ನ್ನು ಕೊಡಿಸಿದರು. ಸರಿ ಸುರುವಾಯಿತು ಸ್ವಾಮಿಯವರ 'ಸೀರೆ ಮಾರುವ ಉದ್ಯೋಗ'... ಬೀದಿ ಬೀದಿಯಲ್ಲಿ 'ಸೀರೆ ಬೇಕೆ ಸೀರೆ.... ತರಾವರಿ ಸೀರೆ, ನೈಲಾನ್, ಪಾಲಿಸ್ಟರ್, ಗದ್ದವಾಲ್' ಎಂದು ಕೂಗುತ್ತಾ ವ್ಯಾಪಾರವನ್ನು

ಮಾಡತೊಡಗಿದರು. ವ್ಯಾಪಾರದಿಂದ ಬಂದ ದುಡ್ಡಿನಲ್ಲಿ ಶ್ರೀಮತಿ ನಾಗಪಾಲ್‌ರವರು ಹಾಕಿದ ಬಂಡವಾಳವನ್ನು ವಾಪಸ್ಸು ಕೊಟ್ಟು ಉಳಿದ ಹಣದಲ್ಲಿ ಜೀವನ ಸಾಗಿಸುತ್ತಿದ್ದರು. ಇವರು ಕೂಗುತ್ತಿದ್ದ ಧ್ವನಿಗೆ, ವಿವರಿಸುತ್ತಿದ್ದ ರೀತಿಗೆ ಮಹಿಳೆಯರು ಆಕರ್ಷಿತರಾಗಿ ಸೀರೆ ಕೊಂಡುಕೊಳ್ಳುತ್ತಿದ್ದರು. ಜೊತೆಗೆ ನಾಟಕದ ಗೆಳೆಯರು ಸಹಾಯ ಮಾಡುತ್ತಿದ್ದರು. ಈ ಹೊತ್ತು ಮಾರುವ ಕಲೆ ಸುಮ್ಮನೆ ಬಂದಿದ್ದಲ್ಲ; ಇದು ಇವರ ವಂಶಪಾರಂಪರ್ಯವಾಗಿ ಬಂದದ್ದು.

ಇದರ ನಡುವೆ ನಾಟಕದವರ ಸಹವಾಸವನ್ನು ಬಿಟ್ಟಿರಲಿಲ್ಲ. ಶ್ರೀರಾಂಪುರ ವಿದ್ಯಾರಣ್ಯ ಕನ್ನಡ ಕಲಾ ಸಂಘದಲ್ಲಿ ನಾಟಕಗಳನ್ನಾಡುವುದು, ನಾಟಕಕ್ಕೆ ಸಹಾಯ ಮಾಡುವುದು ನಡೆದೇ ಇತ್ತು. ಜಯದೇವ (ಶೀಲಾರವರ ಅಣ್ಣ) ರವರ ಪರಿಚಯವಾಯಿತು. ನಾಟಕದ ವಿಷಯಕ್ಕೆ ಸಂಬಂಧಿಸಿದ ಜಗಳ ಕನ್ನಡ ಕಲಾ ಸಂಘದಲ್ಲಿ ನಡೆಯಿತು. ಈ ಕಾರಣದಿಂದಾಗಿ ಜಯದೇವರವರು ಸ್ವಾಮಿಯವರನ್ನು ಮರಿಯಪ್ಪನ ಪಾಳ್ಯದಲ್ಲಿದ್ದ ತಮ್ಮ ಮನೆಗೆ ಕರೆದುಕೊಂಡು ಹೋಗಿ ಇಟ್ಟುಕೊಂಡರು. ಜಯದೇವರವರು ಮೋಲ್ಡ್ ಶಿಲ್ಪಗಳನ್ನು ವಿವಿಧ ಬಗೆಯ ಕಲಾಕೃತಿಗಳನ್ನು ತಯಾರಿಸುವ ಪ್ರಸಿದ್ಧ ಕಲಾಕಾರರಾಗಿದ್ದರು. ಅವರ ಕೆಲಸದಲ್ಲಿ ಸ್ವಾಮಿಯವರು ಸಹಾಯ ಮಾಡುವುದಕ್ಕೆ ಪ್ರಾರಂಭಿಸಿದರು. ನಾಟಕ ಹವ್ಯಾಸವೇನು ಕಡಿಮೆಯಾಗಿರಲಿಲ್ಲ. ಸಂಜೆ ಹೊತ್ತಿನಲ್ಲಿ ನಾಟಕದ ತಾಲೀಮು, ತಯಾರಿ ಕೆಲಸಗಳಲ್ಲಿ ತೊಡಗಿಕೊಳ್ಳುತ್ತಿದ್ದರು. ಈ ಸಂದರ್ಭದಲ್ಲಿ ಹಂಸಲೇಖ ಮತ್ತು ಬಿ. ಎಂ. ರಾಮಚಂದ್ರ (ರಾಜೇಶ್ವರಿ ವಸ್ತ್ರಾಲಂಕಾರ, ಮೈಸೂರು) ಇವರ ಪರಿಚಯವಾಯಿತು. (ಇವರೆಲ್ಲ ಸುಮಾರು ಒಂದೇ ವಯಸ್ಸಿನವರು) ಇವರೊಟ್ಟಿಗೆ ಸೇರಿಕೊಂಡು ನಾಟಕಗಳನ್ನು ಮಾಡುವುದು ಆರ್ಕೇಸ್ಟ್ರಾಗಳನ್ನು ಮಾಡುವುದು ಮಾಡತೊಡಗಿದರು.

ಈ ನಡುವೆ ಸಿನಿಮಾದಲ್ಲಿ ಕೆಲಸ ಮಾಡುವುದಕ್ಕೆ ಅವಕಾಶ ಸಿಕ್ಕಿತು. ಸಿನಿಮಾದ ಡೈರೆಕ್ಟರ್ ಗಂಡುಗಲಿ. ಇವರು ವೀರ ಮದಕರಿ ನಾಯಕನ ಮೊಮ್ಮೊಗ ಅಂತ ಹೇಳ್ತಾರೆ. ಸಿನಿಮಾದ ಹೆಸರು 'ತಲ್ಲಣಿಸದಿರು ಕಂಡ್ಯಾ ತಾಳು ಮನವೇ' ನಿಮಗೆ ಗೊತ್ತಾ ಈ ಸಿನಿಮಾದ ಹೀರೋ ಯಾರು ಅಂತ? ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪನವರು. ಗಂಡುಗಲಿ ಸಾಹೇಬರು ನಮ್ಮ ಸ್ವಾಮಿಗಳಿಗೆ 'ನೀನೇ ಈ ಸಿನಿಮಾದ ಕಾಸ್ಟ್ಯೂಮ್ ಡಿಸೈನರ್ ಕಣಯ್ಯ' ಅಂತ ಹೇಳ್ತಾರೆ, ಇವರು ಹಿಂದು ಮುಂದು ನೋಡದೆ ಒಪ್ಪಿಕೊಂಡು ಬಿಡ್ತಾರೆ. ಹೇಗೋ

ಕೈಯಲ್ಲಿ ಇತ್ತಲ್ಲ 'ಸೀರೇ ಬೇಕೆ ಸೀರೆ' ಬಿಜಿನೆಸ್. ತಮ್ಮಲ್ಲಿದ್ದ ಎಲ್ಲ ಸೀರೆಗಳನ್ನು ತಂದು ಸಿನಿಮಾದವರಿಗೆ ಕೊಡ್ತಾರೆ. ಇಲ್ಲಿ ಸಂಪೂರ್ಣ ಪಾಪರ್ ಆಗ್ತಾರೆ. ಸಿನಿಮಾ ರಿಲೀಜ್ ಆಗಲಿಲ್ಲವಂತೆ.... ಶೂಟಿಂಗ್ ಪೂರ್ತಿ ಮುಗಿಸಿದರೆ ತಾನೇ ರಿಲೀಜ್ ಆಗೋದು.

ಹೋಯಿತಾ ಸೀರೆ ಬಿಜಿನೆಸ್, ಮುಂದೇನು? ತುತ್ತಿನ ಚೀಲ ತುಂಬಿಸುವುದು ಹೇಗೆ? ಮತ್ತೆ ಸ್ನೇಹಿತರು ನೆರವಿಗೆ ಬಂದರು. ಆಟೋ ಓಡಿಸುವುದನ್ನು ಹೇಳಿಕೊಟ್ಟು, ಬಾಡಿಗೆ ಆಟೋ ಕೊಡಿಸಿದರು. ಗಲ್ಲಿಗಲ್ಲಿಗಳಲ್ಲಿ ಸ್ವಾಮಿಗಳ ಆಟೋರಥ ಸಾಗುತ್ತಾ ಜೀವನದ ರಥಕ್ಕೆ ಸಹಕಾರಿಯಾಯಿತು.

❐

# ಡ್ರಾಮದಲ್ಲಿ ಡಿಗ್ರಿ...

**ಈ** ಬೆಂಗಳೂರಿನಲ್ಲಿ ಮಗನ ದಶಾವತಾರಗಳ ಬಗ್ಗೆ ಪ್ರಭಯ್ಯನಮಠ ಬಲ್ಲವರಿಂದ ತಿಳಿದುಕೊಂಡು ಚಿಂತಿಸುತ್ತಿದ್ದರು. ಹೇಗಾದರೂ ಮಾಡಿ ಮಗನಿಗೊಂದು ಬದುಕಿನ ದಾರಿ ತೋರಿಸೋಣವೆಂದರೆ, ಇವನು ನಾಟಕದ ಬೆನ್ನತ್ತಿಕೊಂಡು ಹೊರಟಿದ್ದಾನೆ. ನಾಟಕವನ್ನು ನೆಚ್ಚಿಕೊಂಡವರು ಉದ್ಧಾರವಾಗುವುದು ಉಂಟೇ!? ಒಂದು ದಿನ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ 'ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಡ್ರಾಮಾ ವಿಭಾಗಕ್ಕೆ ಪ್ರವೇಶಾತಿ' ಬಗ್ಗೆ ಜಾಹೀರಾತು ಪ್ರಕಟಗೊಂಡಿರುತ್ತದೆ. ಪ್ರಭಯ್ಯನಮಠರವರು ಕೂಡಲೇ ಅದನ್ನು ಕತ್ತರಿಸಿಕೊಂಡು, ಹೇಗೋ ಸ್ವಾಮಿಯವರ ವಿಳಾಸವನ್ನು ಸಂಪಾದಿಸಿಕೊಂಡು ಅದನ್ನು ಮಗನಿಗೆ ರವಾನಿಸಿಬಿಡುತ್ತಾರೆ. ಪೋಸ್ಟ್ ಒಡೆದು ನೋಡಿದ ಸ್ವಾಮಿಗಳಿಗೆ ಪರಮಾಶ್ಚರ್ಯವಾಗುತ್ತದೆ. ನನ್ನ ತಂದೆಯ ಒಳಮನಸ್ಸಿನಲ್ಲಿ ನಾನು ಡ್ರಾಮಾದಲ್ಲಿ ಮುಂದುವರಿಯಲಿ ಎಂಬ ಇಚ್ಛೆ ಇದೆ. ನಾನು ಡ್ರಾಮಾದಲ್ಲಿ ಡಿಗ್ರಿ ಮಾಡಿಕೊಳ್ಳುತ್ತೇನೆ ಅಂತ ನಿರ್ಧಾರ ಮಾಡಿಕೊಂಡು ಡ್ರಾಮಾ ವಿಭಾಗಕ್ಕೆ ಹೋಗಿ ಅರ್ಜಿ ಸಲ್ಲಿಸಿ ಪ್ರವೇಶಾತಿಯನ್ನು ಪಡೆದುಕೊಳ್ಳುತ್ತಾರೆ. ಇವರೊಟ್ಟಿಗೆ ಪ್ರವೇಶಾತಿಯನ್ನು ಪಡೆದುಕೊಂಡವರು ಒಟ್ಟು ಎಂಟು ಜನ – ಹಾಸಾಕೃ, ಮೋಹನ್ ರಾಮ್, ಎಸ್. ಆನಂದ, ಆರ್. ಎಸ್. ಎನ್. ಗೌಡ (ಕನ್ನಡ ಚಳುವಳಿಗಾರರು) ಅರ್ಜುನ್ ಮುಂತಾದವರು. ಅಡ್ಮಿಷನ್ ಆಯಿತು ಅಷ್ಟೇ. ತರಗತಿಗಳಿಗೆ ಹಾಜರಾಗಲು ಸಾಧ್ಯವಾಗಲೇ ಇಲ್ಲ. ತರಗತಿಗಳಿಗೆ ಹೋದರೆ ಹೊಟ್ಟೆಪಾಡು? ಒಂದು ದಿನ ಡ್ರಾಮಾ ಡಿಪಾರ್ಟ್‌ಮೆಂಟ್ ನೋಡಿಕೊಂಡು ಬರಲು ವಿಶ್ವವಿದ್ಯಾಲಯಕ್ಕೆ ಹೋಗುತ್ತಾರೆ. ಡ್ಯಾನ್ಸ್–ಸಂಗೀತ–ಡ್ರಾಮಾ ವಿಭಾಗದ ಪ್ರಿನ್ಸಿಪಾಲರು ಪ್ರಸಿದ್ಧ ರಂಗಕರ್ಮಿ ಪ್ರೊ. ಬಿ. ಚಂದ್ರಶೇಖರ್‌ರವರು. ಸ್ವಾಮಿಗಳಿಗೆ ಬಲವಂತದಿಂದ ಪರೀಕ್ಷೆಯನ್ನು ಕಟ್ಟಿಸುತ್ತಾರೆ. ಪರೀಕ್ಷೆಯ ಫೀಜನ್ನು ಅವರೇ ತುಂಬುತ್ತಾರೆ. ಪರೀಕ್ಷೆ ಬಂತು, ಪರೀಕ್ಷೆಯಲ್ಲಿ ಅವರು ಕೇಳಿದ ಪ್ರಶ್ನೆಗಳಿಗೆ ತಾವು ನಾಟಕದ ಬಗ್ಗೆ ತಿಳಿದುಕೊಂಡಿದ್ದನ್ನು ಉತ್ತರವಾಗಿ ದಾಖಲಿಸುತ್ತಾರೆ. ಪರೀಕ್ಷೆಯಲ್ಲಿ ಪಾಸು ಆಗುತ್ತಾರೆ. ಸರಿ ನಿರ್ಧಾರ ಮಾಡಿಬಿಟ್ಟರು, ಏನಾದ್ರೂ ಆಗಲಿ ನಾನು ಡ್ರಾಮಾ ಡಿಗ್ರಿ ಕೋರ್ಸು ಮುಗಿಸಲೇ ಬೇಕು ಅಂತ.

ಶಾಸ್ತ್ರೋಕ್ತವಾಗಿ ನಾಟಕ ಕಲೆಯನ್ನು ಕಲಿಯಲು ಪ್ರಾರಂಭಿಸಿದರು. ನಾಟಕವನ್ನು ಕಲಿಯಬಹುದು, ಅಂತಹದೊಂದು ಕೋರ್ಸು ಇದೆ ಅಂತ ಕೇಳಿದವರೆಲ್ಲ ಬೆರಗಾಗುತ್ತಿದ್ದರು.

ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿದ್ದ ಡ್ರಾಮಾ ವಿಭಾಗ, ಅದನ್ನು ಸೆಂಟ್ರಲ್ ಕಾಲೇಜಿಗೆ ವರ್ಗಾಯಿಸಿದರು. ಇದರಿಂದ ತರಗತಿಗಳಿಗೆ ಹಾಜರಾಗಲು ಅನುಕೂಲವಾಯಿತು. ಮುಂದೆ ಈ ಕಾಲೇಜನ್ನು ಇಂಜನಿಯರಿಂಗ್ ಕಾಲೇಜಿಗೆ, ನಂತರ ಪ್ರಸನ್ನ ಕುಮಾರ್ ಬ್ಲಾಕ್‌ಗೆ ವರ್ಗಾಯಿಸಲಾಯಿತು. ವಸತಿಗಾಗಿ ತೋಟದಪ್ಪನ ಛತ್ರದಲ್ಲಿ ಸೇರಿಕೊಂಡರು. ಬೇಸಿಗೆ ರಜೆ ಬಂದಾಗ ಹಾಸ್ಟಲ್ ಬಿಡಬೇಕು ಅಂತ ಒತ್ತಾಯ ಬರುತ್ತದೆ. 'ನಾನು ನಾಟಕವನ್ನು ಬರೆಯುತ್ತಿದ್ದೇನೆ ಆಗೆಲ್ಲ ನಾನು ಹೋಗೋಕ್ಕಾಗೋಲ್ಲ' ಅಂತ ಹೇಳಿದಾಗ ತೋಟದಪ್ಪ ಛತ್ರದವರು, ತೋಟದಪ್ಪನವರ ಬಗ್ಗೆ ನಾಟಕ ಬರೆಯಲು ಬೇಡಿಕೆನ್ನಿಡುತ್ತಾರೆ. ಸರಿ ಇವರು ಹಾಸ್ಟಲ್‌ನಲ್ಲಿ ಉಳಿದುಕೊಳ್ಳಬೇಕಲ್ಲ, ತೋಟದಪ್ಪನವರ ಬಗ್ಗೆ ನಾಟಕವನ್ನು ಬರೆದುಕೊಡುತ್ತಾರೆ.

ಬದುಕು ಹೀಗೆ ಇರಬೇಕೆಂದು ಸ್ವಾಮಿಗಳು ಎಂದೂ ಆಲೋಚಿಸಿದವರಲ್ಲ. ಬದಲಿಗೆ ಬದುಕು ಹೇಗೆ ಕರೆದುಕೊಂಡು ಹೋಗುತ್ತದೋ ಅದನ್ನು ಸ್ವೀಕರಿಸುತ್ತಾ, ಅದರ ಆಳ ಅಂತರವನ್ನು ಅರಿತುಕೊಳ್ಳುತ್ತಾ ಮುಂದೆ ಸಾಗಿದರು. ಡ್ರಾಮಾ ಕೋರ್ಸ್‌ನ ಕೊನೆಯ ವರ್ಷದಲ್ಲಿ ಹೆಸರಾಂತ ನಿರ್ದೇಶಕ ಪ್ರಸನ್ನರವರು ಆಗತಾನೆ ಎನ್ ಎಸ್ ಡಿಯನ್ನು ಮುಗಿಸಿಕೊಂಡು ಬಂದಿದ್ದರು. ಅವರು ಮತ್ತು ಆರ್. ಟಿ. ರಮಾರವರು ಡ್ರಾಮಾ ವಿಭಾಗಕ್ಕೆ ಪೂರ್ಣಾವಧಿ ಡ್ರಾಮಾ ಟೀಚರ್ ಆಗಿ ಕೆಲಸಕ್ಕೆ ಸೇರಿಕೊಂಡರು. ಅಲ್ಲದೇ ಸೆಂಟ್ರಲ್ ಕಾಲೇಜಿನ ಅನೇಕ ಪ್ರಖ್ಯಾತ ವಿದ್ವಾಂಸರಾದ ಶ್ರೀ ಎಲ್. ಎಸ್. ಶೇಷಗಿರಿರಾಯರು, ಬಾಬಯ್ಯ, ಕೆ. ವಿ. ನಾರಾಯಣ, ವಿದ್ಯಾಶಂಕರ್, ಸಿ. ವೀರಣ್ಣನವರು ಪಾಠ ಮಾಡಲು ಬರುತ್ತಿದ್ದರು. ಇವರುಗಳು ಪುಸ್ತಕದ ಪಾಠಗಳನ್ನು ಬೋಧಿಸದೆ ವೈಚಾರಿಕ ದೃಷ್ಟಿಕೋನದ ನೆಲೆಯಲ್ಲಿ ಪಾಠ ಪ್ರವಚನಗಳನ್ನು ಮಾಡುತ್ತಿದ್ದರು. ಇದರಿಂದಾಗಿ ಸ್ವಾಮಿಯವರ ಮನಸ್ಸಿನಲ್ಲಿ ವೈಚಾರಿಕ ಪ್ರಜ್ಞೆ ಜಾಗೃತವಾಗಲು ಸಹಕಾರಿಯಾಯಿತು. ಕಾಲೇಜಿನಲ್ಲಿ ಪ್ರೊ. ಬಿ. ಚಂದ್ರಶೇಖರ್‌ರವರು ಅನೇಕ ಪ್ರಯೋಗಾತ್ಮಕ ಪ್ರಯೋಗಗಳನ್ನು ಮಾಡಿಸುತ್ತಿದ್ದರು. ಜೊತೆಗೆ ವಿದ್ಯಾರ್ಥಿಗಳಿಗೂ ನಾಟಕವನ್ನು ನಿರ್ದೇಶನ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡುತ್ತಿದ್ದರು.

ಅಂತಿಮ ಬಿ. ಎ (ಡ್ರಾಮಾ) ಇರುವಾಗ ಪ್ರೊ. ಬಿ. ಚಂದ್ರಶೇಖರ್‌ರವರು ನಿವೃತ್ತಿಯನ್ನು ಹೊಂದಿದರು. ಅದೇ ಜಾಗಕ್ಕೆ ಹೆಸರಾಂತ ವಿದ್ವಾಂಸ ಹೆಚ್. ಕೆ. ರಂಗನಾಥ್ ಪ್ರಾಂಶುಪಾಲರಾಗಿ ಬಂದರು. ಮ್ಯೂಜಿಕ್ ಡಿಪಾರ್ಟ್‌ಮೆಂಟಿನವರು ಪ್ರತಿವರ್ಷ ತ್ಯಾಗರಾಜರ ಆರಾಧನೆಯನ್ನು ಮಾಡುತ್ತಿದ್ದರು. ಆರಾಧನೆ ಮುಗಿದ ಮೇಲೆ ಪುಷ್ಕಳವಾದ ಭೋಜನವನ್ನು ಮಾಡುತ್ತಿದ್ದರು. ಮುಖ್ಯ ಉದ್ದೇಶವೇ ಅದು. ಇವರು, ಪ್ರಸನ್ನ, ಡ್ರಾಮಾ ಡಿಪಾರ್ಟ್‌ಮೆಂಟಿನ ಅಟೆಂಡರ್ ನಾಗ್ರಾಜ್ ಎಲ್ಲರೂ ಹೋಗಿ ಪಂಕ್ತಿ ಸಾಲಿನಲ್ಲಿ ಊಟಕ್ಕೆ ಕುಳಿತುಕೊಂಡರು. ಸಾಲಿನಲ್ಲಿ ಕುಳಿತಿದ್ದ ನಾಗ್ರಾಜ್‌ನನ್ನು ನೋಡಿ ಅಲ್ಲಿದ್ದವರು ದಿಗಿಲಾಗುತ್ತಾರೆ. ಹೆಚ್. ಕೆ. ರಂಗನಾಥ್‌ರವರು ಬಂದು 'ಅರೇ ನೀನ್ಯಾಕೆ ಇಲ್ಲಿ ಕುಳಿತೆ, ಹೋಗು' ಅಂದರು. ನಾಗ್ರಾಜ್ ಮರು ಮಾತಾಡದೆ ಎಲೆಯನ್ನೆತ್ತಿಕೊಂಡು ಬಾಗಿಲಾಚೆ ಚಪ್ಪಲಿ ಬಿಡುವ ಜಾಗದಲ್ಲಿ ಹೋಗಿ ಕುಳಿತುಕೊಂಡರು. ಇದನ್ನು ನೋಡಿ ಪ್ರಸನ್ನರವರು ಎಲೆಯನ್ನು ಎತ್ತಿಕೊಂಡು ಹೋಗಿ ನಾಗ್ರಾಜ್‌ನ ಪಕ್ಕದಲ್ಲಿ ಕುಳಿತುಕೊಂಡರು. ಪ್ರಸನ್ನರವರೇ ಹೋದ ಮೇಲೆ ಸ್ವಾಮಿಗಳು ಸುಮ್ಮನಿರಲು ಸಾಧ್ಯವೇ? ಅವರೂ ಎಲೆ ಎತ್ತಿಕೊಂಡು ಹೋಗಿ ಕುಳಿತುಕೊಳ್ಳುತ್ತಾರೆ. ಅಲ್ಲಿದ್ದವರಿಗೆ ಇರಿಸುಮುರುಸಾಗುತ್ತದೆ. ಗಲಾಟೆಯಾಗುತ್ತದೆ. ಮುಂದಿನ ಪರಿಣಾಮ ಪ್ರಸನ್ನರವರು ಡ್ರಾಮಾ ಸ್ಕೂಲಿನ ಕೆಲಸಕ್ಕೆ ರಾಜೀನಾಮೆ ಕೊಟ್ಟು ಆಚೆ ಬರುತ್ತಾರೆ. ಸ್ವಾಮಿಗಳು ಕೂಡ ಮತ್ತೆ ಡ್ರಾಮಾ ಡಿಪಾರ್ಟ್‌ಮೆಂಟ್‌ಗೆ ಹೋಗಿದ್ದು ಅಂತಿಮ ಪರೀಕ್ಷೆಯನ್ನು ಬರೆಯುವುದಕ್ಕೆ.

ಬಿ. ಎ. ಪದವಿ ಓದುವ ದಿನಗಳಲ್ಲಿ ಸ್ವಾಮಿಯವರ ನೆರವಿಗೆ ನಿಂತವರು ಸಹಪಾಠಿಯಾಗಿದ್ದ ಎಸ್. ಆನಂದ. ಇವರು ತಮ್ಮ ಅಣ್ಣನ ಮನೆಯಲ್ಲಿದ್ದರು. ಸ್ವಾಮಿಯವರನ್ನು ಜೊತೆಗೆ ಕರೆದುಕೊಂಡು ಹೋಗಿಟ್ಟುಕೊಂಡರು. ಇವರು ಮುಂದೆ ಗೌರಿ ಅಂತ ನಾಟಕವನ್ನು ನಿರ್ದೇಶನ ಮಾಡಿದರು. ಸ್ವಾಮಿಗಳು ನಾಟಕದಲ್ಲಿ ಪಾತ್ರ ಮತ್ತು ನೇಪಥ್ಯದಲ್ಲಿ ಕೆಲಸ ಮಾಡಿದರು. ಈ ನಾಟಕದ ಗೌರಿ ಪಾತ್ರವನ್ನು ಗಿರಿಜಾ ಲೋಕೇಶ್‌ರವರು ಅಭಿನಯಿಸಿದ್ದರು.

ಎಸ್. ಆನಂದ್, ಸ್ವಾಮಿಯವರ ಕಷ್ಟದಲ್ಲಿ ಕೈ ಹಿಡಿದ ವ್ಯಕ್ತಿ. ನೆನಪಾದಾಗಲೆಲ್ಲ ಸ್ವಾಮಿಯವರು ಆನಂದ್‌ರನ್ನು ಕೃತಜ್ಞತಾಪೂರ್ವಕವಾಗಿ ನೆನೆಯುತ್ತಾರೆ. ಇದು ಸ್ವಾಮಿಯವರ ದೊಡ್ಡ ಗುಣ. ಎಷ್ಟೋ ಸಂದರ್ಭದಲ್ಲಿ ಕಷ್ಟಕ್ಕೆ ಆದವರನ್ನು ಬಹಳ ಬೇಗ ಮರೆತುಬಿಡುತ್ತೇವೆ. ಸ್ವಾಮಿಗಳು ಹಾಗಲ್ಲ. ಕಷ್ಟಕಾಲದಲ್ಲಿ ಕೈ ಹಿಡಿದವರನ್ನು ಸದಾ ಸ್ಮರಿಸುತ್ತಲೇ ಇರುತ್ತಾರೆ. ಅವರ ಜೀವನದಲ್ಲಿ

ಬಂದ ಕಷ್ಟಗಳು ಒಂದಲ್ಲ ಎರಡಲ್ಲ ಒಂದು ದೊಡ್ಡ ಸರಮಾಲೆಯೇ ಇದೆ. ಆ ಸಂದರ್ಭದಲ್ಲಿ ನೆರವು ನೀಡಿದವರು, ಕೈ ಹಿಡಿದವರು ಹತ್ತಾರು ಜನ. ಅವರ್‍ಯಾರನ್ನೂ ಅವರು ಮರೆತಿಲ್ಲ. ಮರೆಯೋದಿಲ್ಲ ಅನ್ನಿ.

## ನಾನೂ ಮಾಡಬಲ್ಲೆ ನಾಟಕ ನಿರ್ದೇಶನ

ಡ್ರಾಮಾ ವಿಭಾಗದ ಅಂತಿಮ ವರ್ಷದಲ್ಲಿ ನಾಟಕವನ್ನು ನಿರ್ದೇಶನ ಮಾಡಬೇಕಿತ್ತು. 'ಗೌರಿ' ನಾಟಕವನ್ನು ಮುಂಡರಗಿಯಲ್ಲಿ ಮಾಡಿಸಲು ಹೊರಟರು. ಕಾಲೇಜಿನ ಮೇಸ್ಟ್ರುಗಳು, ಆಸಕ್ತರನ್ನ ಕಲೆ ಹಾಕಿಕೊಂಡು 'ಮುಂಡರಗಿ ಹವ್ಯಾಸಿಗಳು' ಅಂತ ಸಂಸ್ಥೆಯನ್ನು ಹುಟ್ಟು ಹಾಕಿದರು. ಇದರ ನೇತೃತ್ವವನ್ನು ಸುಗತೆ ಎಂಬ ಪ್ರೈಮರಿ ಹೈಸ್ಕೂಲ್ ಮೇಸ್ಟ್ರಿಗೆ ವಹಿಸಿದರು. ಸರಿ ರಿಹರ್ಸಲ್ ಸುರುವಾಯಿತು. ಒಬ್ಬರು ಬಂದರೆ ಇನ್ನೊಬ್ಬರು ಬರೋಲ್ಲ. ಹೇಳದ್ದನ್ನ ಕೇಳೋಲ್ಲ, ಮಾಡೋಲ್ಲ. ಇವರೋ ಭಯಂಕರ ಡೈರೆಕ್ಟರುಗಳನ್ನು ಬೆಂಗಳೂರಿನಲ್ಲಿ ನೋಡಿದವರು, ಅವರ ನಿರ್ದೇಶನದಲ್ಲಿ ಅಭಿನಯ ಮಾಡಿದವರು. ಆ ಭಯಂಕರ ಡೈರೆಕ್ಟರುಗಳ ತದ್ರೂಪದಂತೆ ಮುಂಡರಗಿಯ ಹವ್ಯಾಸಿಗಳ ಎದುರು ಪ್ರದರ್ಶನ ಮಾಡತೊಡಗಿದರು. ಇವರ ಶಿಸ್ತುಗಾರಿಕೆಗೆ ಹೆದರಿ ಬೆದರಿ ಹೋಗುತ್ತಿದ್ದರು ಕಲಾವಿದರು (ನಾನೂ ಹೆದರಿ ಬೆದರಿದವನೆ). ಅಂತೂ ಇಂತೂ ನಾಟಕ ಸಿದ್ಧಗೊಂಡಿತು. ಈ ನಾಟಕದಲ್ಲಿ ಒಂದೇ ಒಂದು ಸ್ತ್ರೀ ಪಾತ್ರವಿತ್ತು. ಗದಗದಲ್ಲಿದ್ದ ವೃತ್ತಿ ರಂಗಭೂಮಿಯ ನಟಿಯೊಬ್ಬಳಿಗೆ 10 ರೂಪಾಯಿ ಸಂಚಗಾರ (ಅಡ್ವಾನ್ಸ್) ಕೊಟ್ಟು ಗೊತ್ತು ಮಾಡಿಕೊಂಡು ಬಂದಿದ್ದರು. ಆಕೆ ತಾಲೀಮಿಗೆ ಬಂದಳು. ಸ್ವಾಮಿಗಳು ಹೇಳಿದ ಹಾಗೆ ಆ ಕಲಾವಿದೆ ಇವರ ನಿರ್ದೇಶನದ ಯಾವ ಸೂಚನೆಯನ್ನೂ ತೆಗೆದುಕೊಳ್ಳದೆ ತನ್ನಿಚ್ಛೆ ಬಂದ್ಹಾಗೆ ಅಭಿನಯಿಸುವುದಕ್ಕೆ ಪ್ರಾರಂಭ ಮಾಡಿದಳು. ಸ್ವಾಮಿಗಳ ಪಿತ್ತ ನೆತ್ತಿಗೇರಿ 'ನೀನು ಬೇಡ ಹೋಗಮ್ಮ' ಅಂತ ಕಳುಹಿಸಿ ಬಿಟ್ಟರು. ಮುಂದೆ ಯಾರು ಮಾಡಬೇಕು 'ಗೌರಿ' ಪಾತ್ರ. ಆನಂದ್ ಮಾಡಿಸಿದ ನಾಟಕದಲ್ಲಿ ಗಿರಿಜಾ ಲೋಕೇಶ್ ಮಾಡಿದ್ದು ನೆನಪಾಯ್ತು. ಬೆಂಗಳೂರಿಗೆ ಬಂದು 'ಗೌರಿ' ಪಾತ್ರಕ್ಕೆ ಗಿರಿಜಾರವರನ್ನು ದುಂಬಾಲು ಬಿದ್ದು ಒಪ್ಪಿಸಿದರು. ಅವರಿಗೆ ಹೊಂದಾಣಿಕೆಯಾಗುವ ದಿನಾಂಕವನ್ನು ಹೊಂದಿಸಿಕೊಂಡು ನಾಟಕದ ಪ್ರದರ್ಶನದ ದಿನಾಂಕವನ್ನು ನಿಗದಿ ಮಾಡುತ್ತಾರೆ. ಆ ಹೊತ್ತಿಗಾಗಲೇ ಗಿರಿಜಾ 'ಅಬಚೂರಿನ ಪೋಸ್ಟ್ ಆಫೀಸ್' ಎಂಬ ಸಿನಿಮಾದಲ್ಲಿ ಪಾತ್ರ ಮಾಡಿದ್ದರು. ಮುಂಡರಗಿ ಸುತ್ತಮುತ್ತ ಸಿನಿಮಾ ನಟಿ ನಾಟಕ ಮಾಡಾಕೆ ಬರ್‍ತಾರೆ ಅಂತ ಗುಲ್ಲೋಗುಲ್ಲು. ತಕ್ಕಳಪ್ಪ ನಾಟಕಕ್ಕೆ ಸಹಾಯ ಮಾಡೋದಿಕ್ಕೆ ತಾ ಮುಂದು

ನೀ ಮುಂದು ಅಂತ ಜನ ನಾಟಕಕ್ಕೆ ಸಹಾಯ ಮಾಡಿದರು. ಕಂಪನಿ ನಾಟಕ ಮಾಡುವುದಕ್ಕೆ ಥಿಯೇಟರ್ ಹಾಕಿಕೊಂಡು ನಾಟಕ ಮಾಡುವ ಕಂಪನಿಯಿತ್ತು. ಅವರ ನಾಟಕವನ್ನು ನಿಲ್ಲಿಸಿ ನಾಟಕ ಪ್ರದರ್ಶನ ಮಾಡಿದರು. ಯಶಸ್ವಿಯಾಯಿತು. ಅವತ್ತಿನ ಕಲೆಕ್ಷನ್ ತುಂಬಾ ಚೆನ್ನಾಗಿ ಆಯಿತು. ಎಲ್ಲಾ ಖರ್ಚು ಕಳೆದುಬಿಟ್ಟು ಸಾವಿರದೇಳುನೂರು ರೂಪಾಯಿ ಉಳಿಯಿತು. ಸ್ವಾಮಿಗಳು ವೇದಿಕೆ ಮೇಲೆ ಬಂದು, ತಾವು ಓದಿದ ಸ್ಕೂಲಿಗೆ ಕಾಂಪೌಂಡ್ ಕಟ್ಟಿಸಲು ಉಳಿದ ಧನವನ್ನು ದಾನವಾಗಿ ಕೊಟ್ಟುಬಿಡುತ್ತಾರೆ. ಈ 'ಮುಂಡರಗಿ ಹವ್ಯಾಸಿಗಳು', ಮುಂದೆ ಹಲವಾರು ನಾಟಕಗಳನ್ನು ಕನ್ನಡ ರಂಗಭೂಮಿಯಲ್ಲಿ ಮಾಡಿರುವುದು ಇತಿಹಾಸದ ಮಾತು.

ಒಂದೆರಡು ತಿಂಗಳು ಬಿಟ್ಟುಕೊಂಡು ಮತ್ತೆ ಮುಂಡರಗಿಗೆ ಹೋದಾಗ ಅಪ್ಪ ಪ್ರಭಯ್ಯನ ಮಠ ಬಾಗಿಲಿನಲ್ಲಿ ಲೆಕ್ಕ ಬರೆಯುತ್ತಾ ಕುಳಿತಿದ್ದರು. ಮನೆಗೆ ಬಂದ ಮಗನನ್ನು ನೋಡಿದ ಕೂಡಲೇ 'ಹೇ.... ಯಾಕೋ.... ಬಂದೆ..... ಬರಬೇಡ ಹೋಗು' ಅಂತ ವಿಪರೀತ ಕೋಪ ಬರಿಸಿಕೊಂಡು ರೇಗಾಡಿದರು. ಕಾರಣ ತಿಳಿಯದ ಸ್ವಾಮಿಗಳು ಕಂಗಾಲಾದರು. ನಾನೇನು ದೊಡ್ಡ ತಪ್ಪು ಮಾಡಿದೇ ಎಂಬ ಅಳುಕು. ಅಪ್ಪನ ಕೋಪಕ್ಕೆ ಕಾರಣ ತಿಳಿಯದೇ ಹೋಗುತ್ತದೆ. ಕೊನೆಗೆ ಸ್ನೇಹಿತರ ಮೂಲಕ ಪತ್ತೆ ಹಚ್ಚುತ್ತಾರೆ. ಗಿರಿಜಾ 'ಗೌರಿ' ನಾಟಕದಲ್ಲಿ ಪಾತ್ರ ಮಾಡಲಿಕ್ಕೆ ಬಂದಾಗ ಸ್ವಾಮಿಗಳ ಮನೆಗೆ ಬಂದು ಊಟ ಮಾಡಿ ಇದ್ದು ಹೋಗಿದ್ದರಲ್ಲ! ಊರಿನವರೆಲ್ಲಾ ಗಿರಿಜಾರವರೇ ಪ್ರಭಯ್ಯನಮಠ ಅವರ ಸೊಸೆ ಅಂತ ತಿಳಿದುಕೊಂಡು ಅವರು ಕಂಡಾಗಲೆಲ್ಲಾ 'ಏನ್ರೀ ಪ್ರಭಯ್ಯನೋರೆ ಯಾವಾಗ ಬರ್ತಾಳೆ ನಿಮ್ಮ ಸೊಸೆ' ಅಂತ ಕೇಳ್ತಿದ್ದರಂತೆ. ಅದಕ್ಕೆ ಅಪ್ಪನಿಗೆ ಕೋಪ ಬಂದಿದ್ದು.

❐

# ಸಮುದಾಯ–ಸಮುದಾಯದತ್ತ

ಡ್ರಾಮಾ ವಿಭಾಗದಲ್ಲಿ ವ್ಯವಸ್ಥಿತವಾದ ರಂಗಶಿಕ್ಷಣವನ್ನು ಕಲಿಯುವುದಕ್ಕೆ ಸ್ವಾಮಿ ಪ್ರಾರಂಭ ಮಾಡಿದರು. ಡ್ರಾಮಾ ವಿಭಾಗದ ವಿದ್ಯಾರ್ಥಿ ಅನ್ನುವ ಕಾರಣಕ್ಕೂ, ಯಾವುದೇ ಕೆಲಸವನ್ನು ಬದ್ಧತೆಯಿಂದ ಮಾಡುವ ಸ್ವಭಾವಕ್ಕೆ ಅನೇಕ ಅವಕಾಶಗಳು ತಾನಾಗಿ ಹುಡುಕಿಕೊಂಡು ಬರುವುದಕ್ಕೆ ಪ್ರಾರಂಭವಾದವು. ಆ ಹೊತ್ತಿಗಾಗಲೇ ಕರ್ನಾಟಕದಲ್ಲಿನ ಆಧುನಿಕ ರಂಗಭೂಮಿಯ ಸ್ಪಷ್ಟ ಹೆಜ್ಜೆಗಳು ಮೂಡತೊಡಗಿದ್ದವು. ಶ್ರೀರಂಗರು ರಂಗಶಿಕ್ಷಣದ ಮಹತ್ವ ಅರಿತು ರಂಗ ಕಾರ್ಯಾಗಾರದ ಕಲ್ಪನೆಯನ್ನು ಕರ್ನಾಟಕಕ್ಕೆ ತಂದು ತರಬೇತಿ ಶಿಬಿರಗಳನ್ನು ಮಾಡಿಸುತ್ತಿದ್ದರು. ಇದರ ಪರಿಣಾಮವಾಗಿ ಅನೇಕರು ರಂಗಭೂಮಿಯತ್ತ ಮುಖಮಾಡಿದರು. ಹೊಸ ಸಂವೇದನೆಯ ಸಂವಹನಕ್ಕಾಗಿ ಕನ್ನಡದ ಆಧುನಿಕ ರಂಗಭೂಮಿ ತೆರೆದುಕೊಂಡಿತ್ತು. ಬಿ. ವಿ. ಕಾರಂತರು ಐತಿಹಾಸಿಕ ರಂಗತ್ರಿವಳಿ ಪ್ರದರ್ಶನಗಳನ್ನು ಮಾಡಿಸಿದ್ದರು. ಮುಂದೆ ಬಿ. ವಿ. ಕಾರಂತರು ಮೊಟ್ಟಮೊದಲು 'ಶಕ ಶೈಲೂಷರು' ಎಂಬ ತಂಡಕ್ಕೆ 'ಸತ್ತವರ ನೆರಳು' ನಾಟಕವನ್ನು ಮಾಡಿಸಿದ್ದರು. ಇದೊಂದು ವಿಭಿನ್ನ ರೀತಿಯ ತಂಡವಾಗಿತ್ತು. ರಂಗಭೂಮಿಗೆ ಬುದ್ಧಿವಂತ ವಲಯದ ಆಗಮನಕ್ಕೆ ಈ ನಾಟಕ ನಾಂದಿ ಆಗಿತ್ತು. ಆಗ ಕಾರಂತರು ನಾಟಕಕ್ಕೆ ಉತ್ತರ ಕರ್ನಾಟಕದ ಭಾಷೆಯನ್ನು ಮಾತಾಡಬಲ್ಲವರು ಬೇಕು ಅಂತ ಬೇಡಿಕೆಯನ್ನಿಟ್ಟರಂತೆ. ಸರಿ ಈ ಅವಕಾಶ ಸ್ವಾಮಿಗಳನ್ನು ಹುಡುಕಿಕೊಂಡು ಬಂತು. ಈ ನಾಟಕದ ತಯಾರಿಯ ಪ್ರಕ್ರಿಯೆಯಲ್ಲಿ ತೊಡಗಿಕೊಂಡು, ಹೊಸ ಅಲೆಯ ಆಧುನಿಕ ರಂಗಭೂಮಿಯ ಸ್ಪಷ್ಟ ಕಲ್ಪನೆಗಳನ್ನು ಅರಿತುಕೊಂಡರು. ಸತ್ತವರ ನೆರಳು ನಾಟಕದಲ್ಲಿ 'ಬಂಡಿ' ಪಾತ್ರವನ್ನು ಯಶಸ್ವಿಯಾಗಿ ಅಭಿನಯಿಸಿದರು. ಇಲ್ಲಿ ರಂಗಭೂಮಿಯ ಅನೇಕ ಮಿತ್ರರು ಪರಿಚಿತರಾದರು. ಅಲ್ಲದೇ ಬಿ. ವಿ. ಕಾರಂತರ ರಂಗಪರಿಕಲ್ಪನೆಗಳು, ಅವರ ರಂಗಾದರ್ಶಗಳು ಹಿತವೆನಿಸಿದವು. ಬಿ. ವಿ. ಕಾರಂತರು ಆದರ್ಶಸ್ವರೂಪರಾಗಿ ಕಂಡರು. ಸತ್ತವರು ನೆರಳು ನಾಟಕವನ್ನು ಬೇರೆ ಬೇರೆ ಕಡೆಗಳಲ್ಲಿ ಪ್ರದರ್ಶನ ಮಾಡುವ ಯೋಜನೆ ಹಾಕಿಕೊಂಡು ತಂಡ ಪ್ರವಾಸ ಹೊರಟಿತು. ಇದರಲ್ಲಿ ಹೆಚ್ಚಾಗಿ ಸ್ವಾಮಿಯವರು ನೇಪಥ್ಯ ವಿಭಾಗಗಳಲ್ಲಿ ಸಾಕಷ್ಟು ಕೆಲಸವನ್ನು ಮಾಡಿದರು. ಈ ಸಂದರ್ಭದಲ್ಲಿ ಸಂಘಟಕರು

ಮತ್ತು ಕಲಾವಿದರು ಎಂಬ ಭಿನ್ನತೆ ಅರಿವಿಗೆ ಬಂತು. ಅದರಲ್ಲೂ ನೇಪಥ್ಯಗಾರರನ್ನು ಅಲಕ್ಷ್ಯದಿಂದ ನೋಡುವ ಮನೋಭಾವ. ಇದರ ವಿರುದ್ಧ ಸ್ವಾಮಿ ಮತ್ತು ಇತರರು ಪ್ರತಿಭಟನೆಯನ್ನು ಮಾಡಿದರು. ಈ ನಾಟಕದಲ್ಲಿ ಯಾರಾದ್ರೂ ಪಾತ್ರಧಾರಿಗಳು ಕೈಕೊಟ್ಟಾಗ ಅವರ ಪಾತ್ರಗಳನ್ನು ಸ್ವಾಮಿ ಮಾಡುತ್ತಿದ್ದರು. ಹೀಗೆ ಬಂಡಿ ಪಾತ್ರವನ್ನು ನಿರ್ವಹಿಸಿ ನೇಪಥ್ಯದಲ್ಲಿ ಕುಳಿತಿದ್ದ ಹಿರಿಯ ಕಲಾವಿದರನ್ನು 'ಸಾರ್ ಹೇಗಿತ್ತು ನನ್ನ ಅಭಿನಯ' ಅಂತ ಕೇಳಿದ್ದಕ್ಕೆ 'ನೀವು ಶೂದ್ರಮುಂಡೇವು ಎಷ್ಟು ಮಾಡಿದ್ರೂ ಅಷ್ಟೇ ಹೋಗಿ'. ಈ ಮಾತು ಸ್ವಾಮಿಯವರಿಗೆ ಬಹಳ ನೋವು ಕೊಡುತ್ತದೆ. ಸತ್ತವರ ನೆರಳು ಸುಮಾರು 36 ಪ್ರದರ್ಶನಗಳಾದ ಮೇಲೆ ಹಣವನ್ನು ಕೇಳಿದ್ದಕ್ಕೆ ಕಾರಂತರು ಸರಿಯಾಗಿ ಪ್ರತಿಕ್ರಿಯಿಸದೆ 'ನೋಡಿ ಸಾಧ್ಯವಾದರೆ ಮಾಡಿ' ಎಂಬ ಮಾತುಗಳನ್ನಾಡಿದ ಮೇಲೆ ಸ್ವಾಮಿಗಳು 'ಸತ್ತವರ ನೆರಳು' ನಾಟಕ ಪ್ರದರ್ಶನದಿಂದ ದೂರ ಉಳಿದರು. ಹಣದ ಅವಶ್ಯಕತೆ ತುಂಬಾ ಇತ್ತು. ಜೀವನ ಸಾಗಿಸಬೇಕಲ್ಲ.

ಅದು ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ಹೇರಿದ ಕಾಲ. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ದೊಡ್ಡ ಪೆಟ್ಟು ಕೊಟ್ಟ ಕಾಲವದು. ದೇಶದ ತುಂಬಾ ಅವಿರತ ಹೋರಾಟಗಳು ನಿರಂತರವಾಗಿ ನಡೆಯುತ್ತಿದ್ದವು. ಈ ಸಂದರ್ಭದಲ್ಲಿ ಬೆಂಗಳೂರಿನ ಪ್ರಗತಿಪರ ಸಂಘಟನೆಗಳು ನಿರಂತರ ಹೋರಾಟವನ್ನು ಆಯೋಜಿಸಿದವು. ವಿಧಾನಸೌಧದ ಎದುರು ಬಾಯಿಗೆ ಬಟ್ಟೆಯನ್ನು ಕಟ್ಟಿಕೊಂಡು ಮೌನ ಪ್ರತಿಭಟನೆಯನ್ನು ನಡೆಸಿದರು. ಸ್ವಾಮಿಯವರು ಇದರಲ್ಲಿ ಭಾಗವಹಿಸಿದರು. ನಾಡಿನ ಬಹುತೇಕ ವಿದ್ವಾಂಸರು ಪ್ರತಿಭಟನೆಯಲ್ಲಿ ಭಾಗವಹಿಸಿದರು. ಸ್ವಾಮಿಯವರ ಮನಸ್ಸಿನಲ್ಲಿ 'ವ್ಯಕ್ತಿ, ಜನ ಸಮುದಾಯದ ಏಳಿಗೆಗೆ ಬದುಕಬೇಕು, ಸ್ವಾರ್ಥವನ್ನು ಬಿಡಬೇಕು' ಎಂಬ ಅಂಶ ಜಾಗೃತವಾಗತೊಡಗಿತ್ತು.

ಇದರೊಟ್ಟಿಗೆ ಸೆಂಟ್ರಲ್ ಕಾಲೇಜಿನ ಕ್ಯಾಂಟೀನ್‌ನಲ್ಲಿ ಸಂಜೆಹೊತ್ತು ಪಿ. ಲಂಕೇಶ್, ಕೀರಂ ನಾಗರಾಜ್, ಕೆ. ವಿ. ನಾರಾಯಣ, ಡಿ. ಆರ್. ನಾಗರಾಜ್, ಪ್ರಸನ್ನ ಹೀಗೆ ಮುಂತಾದ ಚಿಂತಕರು ಸೇರಿಕೊಂಡು ನಾಡು ನುಡಿ, ಸಂಸ್ಕೃತಿ ಬಗ್ಗೆ ಚರ್ಚೆಗಳನ್ನು ನಡೆಸುತ್ತಿದ್ದರು. ಸ್ವಾಮಿಯವರು ಅನೇಕ ಸಲ ಈ ಚರ್ಚೆಗಳಲ್ಲಿ ನೇರವಾಗಿ ಭಾಗವಹಿಸದಿದ್ದರೂ, ಅಲ್ಲಿಗೆ ಹೋಗಿ ಅವರ ಸಮಾಜಮುಖಿಯಾದ ಚಿಂತನೆಗಳನ್ನು ಕೇಳಿಸಿಕೊಳ್ಳುತ್ತಿದ್ದರು. ಒಳಗೊಳಗೆ ಅವರಲ್ಲಿ ಜ್ಞಾನದ ಹಸಿವು ಜಾಸ್ತಿಯಾಯಿತು. ಈ ಚರ್ಚೆಗಳ ಫಲಶ್ರುತಿಯೇ

'ಸಮುದಾಯ'ದ ಹುಟ್ಟಿಗೆ ಕಾರಣವಾಯಿತು. ಮೊಟ್ಟಮೊದಲ ಸಲ ಕೀರಂ ನಾಗರಾಜ್ ಅವರು ಕರ್ನಾಟಕದಲ್ಲಿ 'ಪೀಪಲ್ಸ್ ಥಿಯೇಟರ್'ನ ಅವಶ್ಯಕತೆ ಇದೆ ಎಂಬ ಅಭಿಪ್ರಾಯವನ್ನು ಮುಂದಿಟ್ಟರು. ಈ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದು 'ಸಮುದಾಯ' ಹುಟ್ಟಿಕೊಂಡಿತು.

**ಮೂರನೇ ರಂಗಭೂಮಿ... ಇಪ್ಟಾ...**

ಎಡಪಂಥೀಯ ಮತ್ತು ಸಮಾಜವಾದದ ಚಿಂತನೆಗಳು ದೇಶದ ಸಾಹಿತ್ಯದಲ್ಲಿ ಪ್ರಬಲ ಸ್ಥಾನವನ್ನು ಪಡೆದುಕೊಂಡ ಕಾಲವಿದು. ಪ್ರದರ್ಶನ ಕಲೆಗಳಲ್ಲಿ ವಿಶೇಷವಾಗಿ ಆಧುನಿಕ ಚಿತ್ರಕಲೆ ಮತ್ತು ನಾಟಕಗಳಲ್ಲೂ ಈ ಚಿಂತನೆಗಳು ವಿಶೇಷ ಸ್ಥಾನವನ್ನು ಪಡೆದುಕೊಂಡಿತು. ಬಾದಲ್ ಸರ್ಕಾರ್ ಅವರು ಮೂರನೇ ರಂಗಭೂಮಿಯನ್ನು ಹೆಚ್ಚು ಪ್ರಚುರ ಪಡಿಸುತ್ತಿದ್ದರು. ಜೊತೆಗೆ 'ಇಪ್ಟಾ' ಸಂಘಟನೆ ದೇಶದಲ್ಲಿ ದೊಡ್ಡ ಸಂಚಲನವನ್ನುಂಟು ಮಾಡಿತ್ತು.

'ಇಪ್ಟಾ'ದ ಪ್ರಭಾವವೇ 'ಸಮುದಾಯ'ದ ಹುಟ್ಟಿಗೆ ಕಾರಣ ಅಂತಲೂ ಹೇಳಬಹುದು. ಇಪ್ಟಾದ ಧೋರಣೆಗಳನ್ನು ಸ್ವೀಕರಿಸುತ್ತಲೇ ತನ್ನ 'ಸಮಾಜಮುಖಿ ಸಿದ್ಧಾಂತ' ವನ್ನು ರೂಪಿಸಿಕೊಂಡು ಸಮುದಾಯ ಜನ್ಮತಾಳಿತು. ಈ ಸಮುದಾಯದ ಚಿಂತನಾ ರಥವನ್ನು ಎಳೆಯಲು ಟೊಂಕ ಕಟ್ಟಿ ನಿಂತವರಲ್ಲಿ ಪ್ರಸನ್ನರವರು ಪ್ರಮುಖರು.

ಪ್ರಸನ್ನರವರ ಒಡನಾಟ ಸ್ವಾಮಿಯವರಿಗೆ ಮೊದಲೇ ಆಗಿತ್ತು ಅಂತ ಹೇಳಿದ್ದೆನಲ್ಲ. ಡ್ರಾಮಾ ಸ್ಕೂಲಿಗೆ ಪ್ರಸನ್ನ ಮೇಸ್ಟ್ರಾಗಿ ಬಂದಿದ್ದರು. ಅವರಿಗೆ ಸಂಬಳ ಬರುತ್ತಿತ್ತು. ತಮಗೆ ಬರುವ ಸಂಬಳದಲ್ಲಿ ಸ್ವಾಮಿಯವರಿಗೆ ಪುಸ್ತಕಗಳನ್ನು ಕೊಡಿಸುತ್ತಾ 'ಓದಿನ ಹುಚ್ಚು' ಹಿಡಿಸಿದರು. ಪ್ರಸನ್ನರವರ ವಿಚಾರಧಾರೆ, ಅವರ ಮಾತು, ರಂಗಭೂಮಿಯ ಬಗ್ಗೆ ಅವರ ಕಲ್ಪನೆಗಳು ಸ್ವಾಮಿಯವರಿಗೆ ಸಾಕಷ್ಟು ಹಿಡಿಸುತ್ತಿದ್ದವು. ಪ್ರಸನ್ನರವರ ಒಡನಾಟದ ಮೇಲೆ ಮೂರು ಹೊತ್ತು ರಂಗಭೂಮಿಯ ಬಗ್ಗೆ ಚಿಂತಿಸುವಷ್ಟು ಹುಚ್ಚು ಹಿಡಿಸಿಕೊಂಡರು. ಪ್ರಸನ್ನ ಎನ್. ಎಸ್. ಡಿಯಲ್ಲಿ ಎರಡನೆಯ ವರ್ಷದಲ್ಲಿ ಕಲಿಯುತ್ತಿದ್ದಾಗ ರಜೆಯಲ್ಲಿ ಬೆಂಗಳೂರಿಗೆ ಬಂದಾಗ 'ಬಯಲು ಸೀಮೆ ಸರದಾರ' ಅಂತ ಅದ್ಭುತ ಅನಿಸುವಂತ ನಾಟಕವನ್ನು ಮಾಡಿಸಿದರು. ಈ ನಾಟಕದಲ್ಲಿ ಲೋಕನಾಥ್, ಗಿರಿಜಾ ಲೋಕೇಶ್, ಜಯರಾಜ್, ಗೋಡೆ ಲಕ್ಷ್ಮೀನಾರಾಯಣ, ಎ. ಎಸ್. ಮೂರ್ತಿ ಮುಂತಾದವರು ಅಭಿನಯಿಸಿದ್ದರು. ಇದರಲ್ಲೂ ಸ್ವಾಮಿಯವರು

ಮತ್ತು ಜಯದೇವರು ನೇಪಥ್ಯ ಕಾರ್ಯವನ್ನು ನಿರ್ವಹಿಸುತ್ತಾ ಪಾತ್ರವನ್ನು ಮಾಡಿದರು. ಆಧುನಿಕ ರಂಗಭೂಮಿಯ ಸ್ಪಷ್ಟ ಸ್ವರೂಪ ಗ್ರಹಿಕೆಗೆ ಬಂತು.

ಪ್ರಸನ್ನರವರು 'ಸಮುದಾಯದಲ್ಲಿ ಪೂರ್ಣ ಪ್ರಮಾಣ ರಂಗಕರ್ಮಿಗಳಾಗಿ ದುಡಿಯೋಣ' ಅಂತ ಸ್ವಾಮಿಯವರಿಗೆ ಕರೆಯನ್ನು ಕೊಟ್ಟರು. ಹಣ ಸಿಗುತ್ತದೆ ಎಂಬ ಕಾರಣಕ್ಕೆ ಸಮುದಾಯದಲ್ಲಿ ಪೂರ್ಣಪ್ರಮಾಣದ ಕಾರ್ಯಕರ್ತನಾಗಿ ಸ್ವಾಮಿಯವರು ಸೇರಿಕೊಳ್ಳುತ್ತಾರೆ. ವೃತ್ತಿ ಮತ್ತು ಹವ್ಯಾಸ ಒಂದೇ ಆಗುವ ಅವಕಾಶ ಒದಗಿ ಬಂತು. ಸಮುದಾಯ ರಂಗಭೂಮಿಯನ್ನೇ ತನ್ನ ಸಂವಹನ ಮಾಧ್ಯಮವಾಗಿ ಆಯ್ಕೆ ಮಾಡಿಕೊಂಡಿತ್ತು. ಹೀಗಾಗಿ ಸಮುದಾಯ 'ಹುತ್ತವ ಬಡಿದರೆ' ಪ್ರಥಮ ನಾಟಕವನ್ನು ಅಭಿನಯಿಸಲು ಸಿದ್ಧತೆಯನ್ನು ನಡೆಸಿತು. ಈ ನಾಟಕದ ತಯಾರಿಯ ಎಲ್ಲಾ ವಿಭಾಗದಲ್ಲಿ ಸ್ವಾಮಿಯವರು ಪ್ರಧಾನ ಪಾತ್ರವನ್ನು ವಹಿಸಿಕೊಂಡು ಕೆಲಸ ಮಾಡಿದರು. ನಾಟಕ ಯಶಸ್ವಿಯಾಗಿ ತುಂಬಾ ಕಡೆಯಲ್ಲಿ ಪ್ರದರ್ಶನಗೊಂಡಿತು. ಈ ನಾಟಕವಾದ ಮೇಲೆ ಬೇರೆ ಬೇರೆ ತಂಡಗಳಲ್ಲಿ ಕೆಲಸವನ್ನು ಮಾಡುವುದನ್ನು ನಿಲ್ಲಿಸಿ ಸಮುದಾಯಕ್ಕೆ ನಿಷ್ಠರಾಗಿ ಕೆಲಸ ಮಾಡುವುದಕ್ಕೆ ಪ್ರಾರಂಭಿಸಿದರು. ನಂತರದ ದಿನಗಳಲ್ಲಿ 'ಕುಬಿ ಮತ್ತು ಇಯಾಲ' ನಾಟಕವನ್ನು ಪ್ರಸನ್ನ ಮಾಡಿಸಿದರು. ಈ ನಾಟಕದಲ್ಲಿ ಶೀಲಾರವರು (ಸ್ವಾಮಿಯವರ ಪತ್ನಿ) ಅಭಿನಯ ಮಾಡುವುದರ ಮೂಲಕ ರಂಗಪ್ರವೇಶ ಮಾಡಿದರು. 'ಕತ್ತಲೆ ದಾರಿ ದೂರ' ನಾಟಕವನ್ನು ಟಿ. ಎನ್. ನರಸಿಂಹನ್ ನಿರ್ದೇಶನ ಮಾಡಿದರು. ಎಂ.ಸಿ. ಆನಂದ, ಚಂದ್ರಶೇಖರ್ (ಈಗಿನ ಮುಖ್ಯಮಂತ್ರಿ ಚಂದ್ರು, ಇವರ ಮೊದಲ ನಾಟಕವಿದು) ಸನತ್ಕುಮಾರ, ಲೋಹಿತಾಶ್ವ ಮುಂತಾದವರು ಅಭಿನಯಿಸಿದ ನಾಟಕವಿದು. ಈ ನಾಟಕದಲ್ಲಿ ಸ್ವಾಮಿಗಳು ಬಹಳ ಪ್ರಮುಖ ಪಾತ್ರವನ್ನು ಮಾಡುವುದರ ಮೂಲಕ ತಮ್ಮಲ್ಲಿದ್ದ ನಟನಾ ಸಾಮರ್ಥ್ಯವನ್ನು ಪ್ರದರ್ಶನ ಮಾಡಿ ಸೈ ಅನಿಸಿಕೊಂಡರು.

ಸಮುದಾಯ ಅಭಿನಯಿಸಿದ ಮುಂದಿನ ನಾಟಕ 'ತಾಯಿ'. ಈ ನಾಟಕದಲ್ಲಿ ಪ್ರಧಾನ ಭೂಮಿಕೆಯಲ್ಲಿ ಬಿ. ಜಯಶ್ರೀರವರು ಅಭಿನಯಿಸಿದ್ದರು. ಈ ನಾಟಕ ಮ್ಯಾಕ್ಸಿಂ ಗಾರ್ಕಿಯ ಕಾದಂಬರಿ ಆಧಾರಿತ ಬರ್ಟೋಲ್ಟ್ ಬ್ರೆಕ್ಟ್ ಬರೆದ ಪ್ರಸಿದ್ಧ ನಾಟಕ. ಮಾರ್ಕ್ಸ್‌ವಾದಿ ತತ್ವಗಳನ್ನು ಪ್ರತಿಪಾದಿಸುವ ಕಾರ್ಮಿಕ ಪರವಾದ ನಾಟಕವಿದು. ಸಿಪಿಐ ಪಕ್ಷದ ಪ್ರಮುಖ ಮಾರ್ಕ್ಸ್‌ವಾದಿ ಚಿಂತಕರಾದ ಎಂ. ಕೆ. ಭಟ್, ಸೂರ್ಯನಾರಾಯಣ ರಾವ್, ವಿಜಿಕೆ ನಾಯರ್ ಮುಂತಾದವರು

ಈ ನಾಟಕವನ್ನು ನೋಡಿದರು. ಇದಾದ ಮೇಲೆ ಅನೇಕ ಕಾರ್ಮಿಕ ವರ್ಗದ ಸ್ನೇಹಿತರು ಸಮುದಾಯದ ಕಡೆಗೆ ಒಲಿದು ಬಂದರು. ಸರಿ ಪ್ರಸನ್ನರವರು ಎಲ್ಲರನ್ನೂ ಒಟ್ಟುಹಾಕಿ ಮಾರ್ಕ್ಸ್‌ವಾದಿ ಚಿಂತನೆಗಳನ್ನು ಕುರಿತಂತೆ ಕಾರ್ಯಾಗಾರಗಳನ್ನು ನಡೆಸತೊಡಗಿದರು. ಎಂ. ಕೆ. ಭಟ್, ರಾಮಚಂದ್ರರಾವ್‌ರವರು ತಮ್ಮ ಚಿಂತನೆಗಳನ್ನು ವಿವರಿಸುತ್ತಿದ್ದರು. ಈ ಕಾರ್ಯಾಗಾರಗಳು ಎರಡು ಮೂರು ದಿನಗಟ್ಟಲೆ ನಡೆಯುತ್ತಿತ್ತು.

## ಕಲೆಗಾಗಿ ಕಲೆ ಅಲ್ಲ

ಸ್ವಾಮಿಯವರಲ್ಲಿ ಶೋಷಣೆಯ ವಿರುದ್ಧ ಕೆಲಸ ಮಾಡಬೇಕು, ಶೋಷಿತ ವರ್ಗದವರ ಪರವಾಗಿ ಧ್ವನಿಯೆತ್ತಬೇಕು ಅನ್ನುವ ಧೋರಣೆಗಳು ಹುಟ್ಟಿಕೊಂಡವು. ಸರಿ ಕಾರ್ಮಿಕರು, ಸಿ. ಪಿ. ಐ ಪಕ್ಷದವರು ಮಾಡುತ್ತಿದ್ದ ಮುಷ್ಕರಗಳಲ್ಲಿ ನೇರವಾಗಿ ಭಾಗವಹಿಸುವುದಕ್ಕೆ ಪ್ರಾರಂಭಿಸಿದರು. ಯಾವಾಗ ಸಮುದಾಯಕ್ಕೆ ಕಾರ್ಮಿಕ ಮುಖಂಡರ ಸಂಪರ್ಕ ಬಂತೋ ಆಗ 'ಕಲೆ ಕಲೆಗಾಗಿ ಅಲ್ಲ ಕಲೆ ಸಮುದಾಯಕ್ಕಾಗಿ' ಎಂಬ ತಾತ್ವಿಕ ಸಿದ್ಧಾಂತವನ್ನು ಒಪ್ಪಿಕೊಂಡಿತು. ಆ ನಿಟ್ಟಿನಲ್ಲಿ ಕೆಲಸ ಮಾಡುವುದಕ್ಕೆ ಸನ್ನದ್ಧವಾಯಿತು. ಸಮುದಾಯ ಸಂಘಟನೆಯನ್ನು ಸಮಾಜಮುಖಿಯಾಗಿಸುವಲ್ಲಿ ಸಾಕಷ್ಟು ಚರ್ಚೆಗಳು ನಡೆದವು. ಪರಿಣಾಮ ಇಡೀ ಕರ್ನಾಟಕದಲ್ಲಿ ಈ ಸಂಘಟನೆ ಕೆಲಸ ಮಾಡಬೇಕೆಂಬ ಉದ್ದೇಶವನ್ನು ಮುಂದಿಟ್ಟುಕೊಂಡು ಕಾರ್ಯೋನ್ಮುಖವಾಗಿ ಕೆಲಸ ಮಾಡುವುದಕ್ಕೆ ಆರಂಭಿಸಿತು. ಈ ಹಿನ್ನೆಲೆಯಲ್ಲಿ ಪ್ರಸನ್ನರವರ ನಿರ್ದೇಶನದಲ್ಲಿ ಸಮುದಾಯ ಪ್ರಥಮ ರಂಗಕಾರ್ಯಾಗಾರ ಶಿಬಿರವನ್ನು 'ಕುಂಬಳಗೋಡು' ನಲ್ಲಿ ಮಾಡಿತು. ಈ ಶಿಬಿರಕ್ಕೆ ಅನೇಕರು ಬಂದು ಸೇರಿಕೊಂಡರು. ಈ ಶಿಬಿರವನ್ನು ಸಂಘಟಿಸುವಲ್ಲಿ ಸ್ವಾಮಿಗಳು ಪ್ರಮುಖ ಪಾತ್ರವನ್ನು ವಹಿಸಿದರು. ತದನಂತರದಲ್ಲಿ 'ಸಮುದಾಯ' ಸಂಘಟನೆಯನ್ನು ರಾಜ್ಯಕ್ಕೆ ವಿಸ್ತರಿಸಬೇಕೆಂಬ ನಿಲುವಿಗೆ ಬದ್ಧರಾಗಿ ಕಾರ್ಯ ಯೋಜನೆಯನ್ನು ರೂಪಿಸಲಾಯಿತು. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರದ ಉಪನ್ಯಾಸಕರಾಗಿದ್ದ ಸಿ. ಜಿ. ಕೃಷ್ಣಸ್ವಾಮಿಯವರು, ಜನ್ನಿ (ಜನಾರ್ಧನ) ಮುಂತಾದವರು ಸಮುದಾಯದಲ್ಲಿ ಪ್ರಮುಖವಾಗಿ ಕಾಣಿಸಿಕೊಂಡರು. ಪ್ರಸನ್ನರವರು ಸಮುದಾಯವನ್ನು ವಿಸ್ತರಿಸುವ ಸಲುವಾಗಿ ಮೈಸೂರಿನಲ್ಲಿ 'ತಾಯಿ' ನಾಟಕವನ್ನು ನಿರ್ದೇಶನ ಮಾಡುವ ಮೂಲಕ ಸಮುದಾಯವನ್ನು ಪ್ರಾರಂಭಿಸಿದರು. ಸಿಜಿಕೆ ತುಮಕೂರಿನಲ್ಲಿ ಪಂಚಮ, ಯಾರು ನೀನು ಯಾರು ಗೆಳೆಯ ನಾಟಕವನ್ನು ಮಾಡಿಸುವುದರ ಮೂಲಕ

ಸಂಘಟನೆಯನ್ನು ಕಟ್ಟಿದರು. ಈ ಸಂದರ್ಭದಲ್ಲಿ ಸಮುದಾಯಕ್ಕೆ ಲೋಹಿತಾಶ್ವರವರ ಪ್ರವೇಶವಾಯಿತು. ದಕ್ಷಿಣ ಕನ್ನಡ ಪ್ರಾಂತಗಳಲ್ಲಿ ಪ್ರಸನ್ನ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಕಡೆಯಲ್ಲಿ ಸಿಚಿಕೆ, ಉತ್ತರ ಕರ್ನಾಟಕ ಭಾಗದಲ್ಲಿ ಸಮುದಾಯವನ್ನು ಕಟ್ಟುವ ಹೊಣೆ ಗಂಗಾಧರಸ್ವಾಮಿಯವರಿಗೆ ವಹಿಸಲಾಯಿತು. ಈ ಹೊತ್ತಿಗಾಗಲೇ ಸ್ವಾಮಿಯವರಲ್ಲಿ ಎಡಪಂಥೀಯ ತತ್ವಗಳನ್ನು ಒಪ್ಪಿಕೊಳ್ಳುವ ಮನೋಭಾವ ಬಂದಿತ್ತು.

# ನಾನು ಬಡವಿ ಆತ ಬಡವ ಒಲವೇ ನಮ್ಮ ಬದುಕು

ದ. ರಾ. ಬೇಂದ್ರೆಯವರು ಅದ್ಯಾವ ಗಳಿಗೆಯಲ್ಲಿ ಈ ಸಾಲುಗಳನ್ನು ಬರೆದರೋ ಅದು ಅನೇಕರ ಒಲವಿನ ದಾಂಪತ್ಯಕ್ಕೆ ಬರೆದ ವ್ಯಾಖ್ಯಾನದಂತಾಗಿಬಿಟ್ಟಿದೆ. ನಿಜವಾದ ಪ್ರೇಮಕ್ಕೆ ಯಾವ ಲೆಕ್ಕಾಚಾರವಾಗಲಿ, ಗಡಿಗಳಾಗಲಿ, ಬಂಧನಗಳಾಗಲಿ ಇರುವುದಿಲ್ಲ ಅನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯವೇ. ಸ್ವಾಮಿ ಮತ್ತು ಶೀಲಾರವರದು ಒಲವಿನ ದಾಂಪತ್ಯ. ಶೀಲಾರವರ ತಂದೆಯವರು ಹೆಸರಾಂತ ಭರತನಾಟ್ಯ ಕಲಾವಿದರಾಗಿದ್ದ ಎಂ. ಚೆನ್ನವೀರಪ್ಪನವರು (ಎಂ.ಸಿ. ವೀರ್). ಚಿಕ್ಕ ವಯಸ್ಸಿನಲ್ಲಿ ಸಂಗೀತದ ಬಗ್ಗೆ ಆಸಕ್ತಿಯನ್ನು ಹೊಂದಿದ್ದವರು. ಹರಿಕಥೆ ಕಾಲಕ್ಷೇಪವನ್ನು ಮಾಡುವಷ್ಟು ಹರಿಕಥೆ ಪ್ರಕಾರವನ್ನು ಕಲಿತುಕೊಂಡಿದ್ದರು. ಸೋಮವಾರಪೇಟೆಯ ತಾತನ ಮನೆಯಲ್ಲಿದ್ದ ಶೀಲಾರವರು ಬೆಂಗಳೂರಿನ ಮರಿಯಪ್ಪನ ಪಾಳ್ಯದಲ್ಲಿದ್ದ ತಮ್ಮ ಅಣ್ಣ ಜಯದೇವರವರ ಮನೆಗೆ ಬರುತ್ತಾರೆ. ಇಲ್ಲೇ ಸ್ವಾಮಿಗಳು ಇದ್ದಿದ್ದು. ಮೊದಲೇ ಪುಟ್ಟ ಮನೆ. ಅದರಲ್ಲಿ ಐದಾರು ಜನ ಹೇಗೋ ಹೊಂದಿಕೊಂಡಿದ್ದರು. ಶೀಲಾರವರ ಎಂಟ್ರಿ ಆ ಮನೆಗೆ ಆಯಿತು. ಮುದ್ದು ಮುದ್ದಾಗಿದ್ದು ಆಕರ್ಷಣೆಯ ವ್ಯಕ್ತಿತ್ವವನ್ನು ಹೊಂದಿದ ಶೀಲಾರವರ ಮೇಲೆ ಸ್ವಾಮಿಯವರ ಕಣ್ಣು ಬಿತ್ತು. ಮೊದಲ ನೋಟದಲ್ಲಿ ಪ್ರೇಮಾಂಕುರ ಅನ್ನ್ತಾರಲ್ಲ ಹಾಗೆ. ಸ್ವಾಮಿಯವರ ಮನಸ್ಸು ಶೀಲಾರವರ ಕಡೆಗೆ ವಾಲಿತು. ನೇರ ಸ್ವಭಾವದವರಾಗಿದ್ದ ಸ್ವಾಮಿಯವರು ಹಿಂದು ಮುಂದು ನೋಡದೆ, ಪ್ರೇಮ ನಿವೇದನೆಯನ್ನು ಮಾಡಿಕೊಂಡರು. ಶೀಲಾರವರಿಂದ ಒಪ್ಪಿಗೆಯೂ ಸಿಕ್ಕುತ್ತದೆ. ಸ್ವಾಮಿ ಆಗಿನ್ನೂ ಡ್ರಾಮಾ ಕೋರ್ಸ್‌ನ ಎರಡನೆಯ ವರ್ಷದಲ್ಲಿ ಕಲಿಯುತ್ತಿದ್ದರು. ಗುಪ್ತವಾಗಿ ನಡೆಯತ್ತಿದ್ದ ಇಬ್ಬರ ಪ್ರೇಮ, ಬಯಲಾಗಬಾರದು, ಜಯದೇವನಿಗೆ ಗೊತ್ತಾಗಿಬಿಟ್ಟರೆ? ಈ ಪುಟ್ಟ ಮನೆಯಲ್ಲಿ ಒಂದೇ ಕಡೆ ನಾವಿಬ್ಬರೂ ಇರಬಾರದು ಅಂತ ಅಂದುಕೊಂಡು ಸ್ವಾಮಿಯವರು ಜಯದೇವರ ಮನೆಯನ್ನು ಬಿಟ್ಟು ತೋಟದಪ್ಪನವರ ಛತ್ರಕ್ಕೆ ಬಂದು ಸೇರಿಕೊಳ್ಳುತ್ತಾರೆ. ಸುಮಾರು ಎರಡು ವರ್ಷಗಳ ಕಾಲ ಪ್ರೀತಿಯ ಬಳ್ಳಿ ಇಬ್ಬರ ಎದೆಯಲ್ಲಿ ಬೆಳೆಯುತ್ತಲೆ ಇತ್ತು. ಆಗಾಗ ಭೇಟಿ ಮಾಡುವುದು, ಕನಸು ಕಟ್ಟಿಕೊಳ್ಳುವುದು. ಇವರ ಕನಸು ಎಂತಹವು, ಬರೀ ನಾಟಕ, ರಂಗಭೂಮಿಯ ಸುತ್ತ ಹೆಣೆದುಕೊಂಡವು. ಸ್ವಾಮಿಯವರ ಒಡನಾಟ ಸಿಕ್ಕ ಮೇಲೆ ಶೀಲಾರವರೂ ಕೂಡ ರಂಗಭೂಮಿಯ

ಬದುಕನ್ನು ಕಂಡುಕೊಳ್ಳುವ ನಿರ್ಧಾರಕ್ಕೆ ಬಂದರು. ರಂಗಭೂಮಿಯಲ್ಲಿ ನಟನೆಯನ್ನು ಮಾಡುವುದಕ್ಕೆ ಪ್ರಾರಂಭಮಾಡಿದರು. ಶೀಲಾರವರ ರಂಗಭೂಮಿ ಬದ್ಧತೆ, ರಂಗಕ್ರಿಯೆಗಳಲ್ಲಿ ತೊಡಗಿಸಿಕೊಳ್ಳುವ ರೀತಿ ಮತ್ತು ಪ್ರೀತಿ ಕಂಡು ಸ್ವಾಮಿಯವರು ನಿರ್ಧಾರ ಮಾಡುತ್ತಾರೆ–'ನಾನು ಮದುವೆಯಾದರೆ ಶೀಲಾಳನ್ನೇ!' ಇಬ್ಬರು ಒಂದೆಡೆ ಕೂತು 'ಮದುವೆಯಾಗುವ ಬಗ್ಗೆ' ನಿರ್ಧಾರ ಮಾಡಿಕೊಳ್ಳುತ್ತಾರೆ. ಹೀಗೆ ನಾಟಕಗಳಲ್ಲಿ ಭಾಗವಹಿಸುವಿಕೆ, ಸ್ವಾಮಿ ಮತ್ತು ಶೀಲಾರವರೊಟ್ಟಿಗೆ ಇರುವುದು ಮಾತಾಡುವುದು, ಅವರಿಬ್ಬರ ಮಧ್ಯದಲ್ಲಿ ಪ್ರೇಮಾಂಕುರವಾಗಿರುವುದು ಹೇಗೋ ಜಯದೇವನಿಗೆ ಮೊದಲೇ ತಿಳಿದಿತ್ತು. ವಯಸ್ಸಿಗೆ ಬಂದ ಮನಸ್ಸು ಒಂದಾಗುವುದರಲ್ಲಿ ತಪ್ಪೇನಿದೆ ಎಂಬ ಮನೋಭಾವವನ್ನುಳ್ಳಾತ ಗೊತ್ತಿದ್ದೂ ಗೊತ್ತಿಲ್ಲದವನ ಹಾಗೆ ಇದ್ದು ಬಿಡುತ್ತಾರೆ. ಮದುವೆಯಾಗುವ ನಿರ್ಧಾರ ಮಾಡಿದ ಮೇಲೆ ಮನೆಯಲ್ಲಿ ತಿಳಿಸಬೇಕಲ್ಲ, ಸರಿ ಜಯದೇವರಿಗೆ ಸುದ್ದಿ ಮುಟ್ಟಿಸುತ್ತಾರೆ. ಶೀಲಾರವರ ಮನೆಯಿಂದ ಹಸಿರು ನಿಶಾನೆ ಸಿಕ್ಕಿಬಿಡುತ್ತದೆ. ಇನ್ನು ಸ್ವಾಮಿಯವರ ಮನೆಯಲ್ಲಿ ಹಸಿರು ನಿಶಾನೆ ಬೀಸಬೇಕಲ್ಲ. ಸರಿ ಸ್ವಾಮಿ ಮುಂಡರಗಿಗೆ ಹೋಗಿ ಅಪ್ಪನ ಬಳಿಯಲ್ಲಿ ವಿಷಯವನ್ನಿಟ್ಟು ಮದುವೆ ಮಾಡಿಕೊಳ್ಳುವುದಕ್ಕೆ ಅನುಮತಿಯನ್ನು ಪಡೆದುಕೊಂಡು ಬಂದರಾಯಿತು ಅಂತ ಹೊರಡುತ್ತಾರೆ. ಇಲ್ಲಿದೆ ನೋಡಿ ಡ್ರಾಮಾ!

ಮುಂಡರಗಿಗೆ ಬರ್ತಾರೆ. ಬಸ್ಸಿಳಿದ ಕೂಡಲೆ ಸ್ವಾಮಿಯವರ ಮನಸ್ಸಿನಲ್ಲಿ ಒಂದು ರೀತಿಯ ಅವ್ಯಕ್ತ ಭಯ. ಏನಾಗುತ್ತದೋ ಎಂಬ ತಳಮಳ, ಅಪ್ಪ ಒಪ್ಪಿಗೆ ಕೊಡದಿದ್ದರೆ ಎಂಬ ಆತಂಕ. ಬಸ್ಸು ನಿಲ್ದಾಣದಿಂದ ಮನೆಗೆ ಹೋಗುವ ತನಕ ನೂರಾರು ಯೋಚನೆಗಳು. ರಸ್ತೆಯಲ್ಲಿ ಎದುರಿಗೆ ಸಿಕ್ಕ ಹಿರಿಯರಿಗೆ ಔಪಚಾರಿಕ ನಮಸ್ಕಾರ, ಮಾತು. ಗೆಳೆಯರು ಸಿಕ್ಕು ಡ್ರಾಮಾ ಡಿಗ್ರಿ ಮುಗಿಸಿದ್ದಕ್ಕೆ ಅಭಿನಂದಿಸುತ್ತಿದ್ದರು. ಮನೆ ಬಂತು ಒಳಗೆ ಹೋಗುವುದಕ್ಕೆ ಒಂಥರ ನಡುಕ. ಹೊರಗೆ ಇಟ್ಟಿದ್ದ ನೀರನ್ನು ಕಾಲ ಮೇಲೆ ಹಾಕಿಕೊಂಡು ಒಳಹೋಗ್ತಾರೆ. ತಂದೆಯವರು ಕೂತಿದ್ದಾರೆ, ಶಿಷ್ಟಾಚಾರದಂತೆ ತಂದೆಯವರಿಗೆ ನಮಸ್ಕಾರವನ್ನು ತಿಳಿಸುತ್ತಾರೆ. ಯಾವ ಪ್ರತಿಕ್ರಿಯೆಯೂ ಇಲ್ಲ. ಅವ್ವನಿಗೆ ಮಗ ಮನೆಗೆ ಬಂದಿದ್ದಕ್ಕೆ ಎದೆತುಂಬಿದ ಸಂಭ್ರಮ. ಅಪ್ಪನೆದುರು ಕೂತು ಅದು ಇದು ಮಾತಾಡಿದ್ದಾಯಿತು. ಮದುವೆ ಬಗ್ಗೆ ಪ್ರಸ್ತಾಪ ಮಾಡಲು ನಾಲಿಗೆಗೆ ಧೈರ್ಯ ಬರಲಿಲ್ಲ. 'ಅಪ್ಪ ತಿರಸ್ಕಾರ ಮಾಡಿಬಿಟ್ಟರೆ ಮುಂದೇನು ಮಾಡುವುದು' ಎಂಬ ಒಂದು ಸಣ್ಣ ಆತಂಕ ಸ್ವಾಮಿಯವರ ಮನಸ್ಸಿನಲ್ಲಿತ್ತು. ಬೆಂಗಳೂರಿನಿಂದ ಮುಂಡರಗಿಗೆ

ಬರುವಾಗಲೇ 'ಅಪ್ಪ ಒಪ್ಪದಿದ್ದರೆ ಅಪ್ಪನಿಗೆ ವಿಷಯ ತಿಳಿಸಿ ಶೀಲಾಳನ್ನು ಮದುವೆ ಆಗೋದೆ.. ಬೇಕಾದ್ದಾಗಲಿ...' ಎಂಬ ನಿರ್ಧಾರವನ್ನು ಅಚಲ ಮಾಡಿಕೊಂಡಿದ್ದರು. ತಂದೆ ಮತ್ತು ಮಗನ ಮಧ್ಯೆ ಮಾತು ಮುಂದುವರಿಯುತ್ತಿದ್ದಂತೆ ಅಪ್ಪನೇ 'ಹಂಗಾರೆ ಹೆಂಗೂ ನಿನ್ನ ಡ್ರಾಮಾ ಡಿಗ್ರಿ ಮುಗೀತಲ್ಲ, ನಡಿ ನಾಳೆ ಕನ್ಯಾ ನೋಡಾಕೆ ಹೋಗೋನ, ಈ ವರ್ಷ ನಿನ್ನ ಮದುವೆ ಮಾಡಿಬಿಡ್ತೀನಿ. ಹೆಂಗೋ ಜೀವನ ಮಾಡುವಂತಿ. ನಂ ಕಳ್ಳುಬಳ್ಳೆಲ್ಲ ಯಾವಾಗ ನಿನ್ನ ಮಗನ ಮದುವೆ ಮಾಡ್ತೀಯಾ ಅಂತ ಕೇಳೇ ಕೇಳ್ತಾರ. ನಮ್ಮ ಮನೆಯಾಗೆ ಹೆಣ್ಣೈತಿ ನೋಡಾಕ ಬನ್ನಿ ಅಂತ ಕರೀತಾರ. ನಂಗೂ ಉತ್ತರ ಹೇಳಿ ಸಾಕಾಗ್ಯೆತಿ.... ಹೆಂಗೂ ಅನಾಯಾಸ ಬಂದಿದೀಯಾ ನಾಳೆ ಕನ್ಯಾ ನೋಡಲಿಕ್ಕೆ ಹೋಗೋನ' ಅಂತ ವಿಶ್ವಾಮಿತ್ರ ವಾಣಿಯನ್ನು ನುಡಿದು ಆಚೆ ನಡೆದೇ ಬಿಟ್ಟರು. ಸ್ವಾಮಿಗಳು 'ಇದೇನಪ್ಪ ಇದು ನಾನೊಂದು ಬಗೆದರೆ ನಮ್ಮಪ್ಪೊಂದು ಬಗೆಯುತ್ತಾರ' ಇಕ್ಕಟ್ಟಿನ ಸ್ಥಿತಿ ತಲಪುತ್ತಾರೆ.

**ನಾಟಕ ಕಂಪನಿ ಮಾಡ್ತೀನಿ.. ಹಂಗಾರ ನಡೀರಿ......**

ಮಾರನೆಯ ದಿನ ಬೆಳಗ್ಗೆ ಸ್ವಾಮಿಗಳನ್ನು 'ಕನ್ಯಾ ನೋಡೋದಕ್ಕೆ' ಲಕ್ಷ್ಮೇಶ್ವರಕ್ಕೆ ಕರೆದುಕೊಂಡು ಹೋಗುತ್ತಾರೆ. ಅಲ್ಲೊಂದು ಮನೆಗೆ ಹೋದರು. ಎಲ್ಲರಿಂದಲೂ ಆದರದ ಸ್ವಾಗತ. ಸ್ವಾಮಿಗಳ ಮನಸ್ಸಿನಲ್ಲಿ ಭಯ, ಆತಂಕ. ಕನ್ಯೆ ಲಕ್ಷಣವಾಗಿ ಸಿಂಗರಿಸಿಕೊಂಡು ಬಂದು 'ಸಿರಾ ಉಪ್ಪಿಟ್ಟು' ಕೊಟ್ಟಳು. ಸ್ವಾಮಿಗಳು ನೋಡಲೋ ಬೇಡವೋ ಅನ್ನುವ ರೀತಿಯಲ್ಲಿ ನೋಡ್ತಾರೆ. ಮನಸ್ಸಿನ ತುಂಬಾ ಶೀಲಾರವರೇ ತುಂಬಿಕೊಂಡಿರುವಾಗ ಉಳಿದವರಿಗೆ ಜಾಗವೆಲ್ಲಿ! ಸಿರಾ ಉಪ್ಪಿಟ್ಟು ಆದ್ಮೇಲೆ, ಚಾ ಕೊಡೋದು ಬಾಕಿ ಇತ್ತು. ತಿಂಡಿ ತಿನ್ನುತ್ತಾ ಅದು ಇದು ಮಾತುಕತೆ ಪ್ರಾರಂಭವಾಗಿ ಭಾವಿ ಮಾವ (ಕನ್ಯಾಳ ತಂದೆ) 'ಡಿಗ್ರಿ ಮುಗೀತಲ್ಲ ಮುಂದೇನ್ ಮಾಡ್ತೀರಿ' ಅಂತ ಕೇಳಿದರೆ ಇವರು ಸುಮ್ನಿರಬೇಡವೆ. 'ನಂದು ಡ್ರಾಮಾ ಡಿಗ್ರಿ ಮುಗಿದಿದೆ. ನಾನೊಂದು ನಾಟಕ ಕಂಪನಿ ಮಾಡ್ತೀನಿ' ಅಂತ ಹೇಳಿಬಿಡೋದೆ. ಪಟ್ಟಂತ ಭಾವಿ ಮಾಮ ಎದ್ದೋಗಿ ಬಂದು 'ಸರಿ ಮಹಾಗುಂಡಯ್ಯನವರೇ ನಡೀರೀಗ, ನಾವು ಪತ್ರ ಬರೆದು ತಿಳಿಸ್ತೀವಿ' ಅಂತಂದ್ರು, ಚಾ ಕೂಡ ಕೊಡಲಿಲ್ಲ.

ಅಲ್ಲಿಂದ ಬಸ್‌ಸ್ಟ್ಯಾಂಡಿನ ತನಕ ತಂದೆ ಮಗನ ಮಧ್ಯೆ ಮಾತಿಲ್ಲ ಕತೆಯಿಲ್ಲ, ಮೌನ ಮೆರವಣಿಗೆ. ರಸ್ತೆಯುದ್ದಕ್ಕೂ ತಂದೆ ಮುಖದ ಭಾವನೆಗಳನ್ನು ಗಮನಿಸುತ್ತಲೇ ಬಂದರು. ಬಸ್‌ಸ್ಟ್ಯಾಂಡ್ ಬಂತು. ಮಹಾಗುಂಡಯ್ಯನವರು

'ಏನಪ್ಪ ಇಲ್ಲಿಂದ ಬೆಂಗಳೂರಿಗೆ ಬಸ್‌ಚಾರ್ಜು' ಮೌನ ಮುರಿದು ಕೇಳಿದರು. 'ಎಂಬತ್ಮೂರು ರೂಪಾಯಿ' ಅಂಜುತ್ತಲೇ ಸ್ವಾಮಿಗಳ ಉತ್ತರ. ಪ್ರಭಯ್ಯನಮಠರವರು ಸರಿಯಾಗಿ 83 ರೂಪಾಯಿಗಳನ್ನು ತೆಗೆದು 'ತಗ, ಈ ರೂಪಾಯಿ, ಬೆಂಗಳೂರಿಗೆ ಹೋಗು. ತಿರಿಗಿ ಬರಬೇಡ' ಅಂತ ಬೈದಾಶೀರ್ವಾದ ಮಾಡಿ ಹೊರಟೇ ಹೋದರು. ಸರಿ, ಸ್ವಾಮಿಗಳು ಬೆಂಗಳೂರು ಬಸ್ಸು ಹತ್ತಿದರು.

ಮುಂದೇನ್ ಮಾಡೋದು ಎಂಬ ಚಿಂತಿ ಪ್ರಾರಂಭವಾಯಿತು. ತಂಗಿಯ ಗಂಡ ಮನೋಹರರವರ ಬಳಿ ಮದುವೆ ಆಗುವ ವಿಷಯವನ್ನು ಶೀಲಾ ಮತ್ತು ಸ್ವಾಮಿಗಳು ಹೋಗಿ ಪ್ರಸ್ತಾಪ ಮಾಡುತ್ತಾರೆ. ಮುಂಡರಗಿಗೆ ಹೋಗಿ ವಾಪಸ್ಸು ಬಂದ ಕತೆಯನ್ನು ಮನೋಹರರ ಬಳಿಯಲ್ಲಿ ಹೇಳಿದಾಗ, ನಾನು ಒಂದು ಬಾರಿ ಮುಂಡರಗಿಗೆ ಹೋಗಿ ಪ್ರಯತ್ನಮಾಡುತ್ತೇನೆಂದು ಭರವಸೆಯನ್ನು ನೀಡಿದರು. ಹೋದರು – ಬಂದರು. ಅಲ್ಲೇನು ನಡೀತು ಒಂದೂ ವಿಷಯ ಗೊತ್ತಾಗಲಿಲ್ಲ ಸ್ವಾಮಿಗಳಿಗೆ. ಸುಮಾರು ಹದಿನೈದು ದಿನ ಕಳೆದ ಮೇಲೆ ಮಹಾಗುಂಡಯ್ಯ ಪ್ರಭಯ್ಯನಮಠರವರು ಬೆಂಗಳೂರಿನ ಶೀಲಾರವರ ಮನೆಯ ವಿಳಾಸವನ್ನು ಹಿಡಿದುಕೊಂಡು ಪ್ರತ್ಯಕ್ಷವಾಗಿ ಬಿಡೋದೆ! ಸ್ವಾಮಿಗಳಿಗೆ ಪರಮಾಶ್ಚರ್ಯ. ಶೀಲಾರವರನ್ನು ಎದುರಿಗೆ ಕೂರಿಸಿಕೊಂಡು ಅವರ ಕೈಯನ್ನು ಹಿಡಿದು ಕೈಗೆರೆಗಳನ್ನು ದಾರಹಾಕಿ ಅಳತೆ ಮಾಡಿ, ಹೊತ್ತಿಗೆ ತೆಗೆದು ಶಾಸ್ತ್ರವನ್ನು ನೋಡತೊಡಗಿದರು. ಮನೆಯಲ್ಲಿದ್ದವರೆಲ್ಲ ಇದೇನೋ ವಿಚಿತ್ರ ದೃಶ್ಯವೆಂಬಂತೆ ತದೇಕಚಿತ್ತರಾಗಿ ನೋಡತೊಡಗಿದರು. ಕೊನೆಯಲ್ಲಿ 'ಆಯಿತು, ನೀವಿಬ್ಬರೂ ಮದುವೆ ಆಗಿ. ದಿನಾಂಕವನ್ನು ಗೊತ್ತು ಮಾಡಿಕೊಂಡು ನಮ್ಮೂರಿಗೆ ಬಂದು ಮದುವೆಯಾಗಿ' ಎಂಬ ಸುಗ್ರೀವಾಜ್ಞೆಯನ್ನು ಹೊರಡಿಸಿದರು. ಎಲ್ಲರ ಮುಖದಲ್ಲಿ ಸಂತಸದ ಗೆರೆಗಳು ಮೂಡತೊಡಗಿದವು.

ಏನಾಗಿದೆ – ಮನೋಹರರವರು ಮುಂಡರಗಿಗೆ ಹೋಗಿ ಮದುವೆ ಪ್ರಸ್ತಾಪ ಹೇಳಿ ಬಂದಿದ್ದರಲ್ಲ, ಆಗ ಮಹಾಗುಂಡಯ್ಯನವರು ನಿರ್ಧಾರ ಹೇಳಿರಲಿಲ್ಲ. ಮುಂಡರಗಿಯಿಂದ ಯಾರಿಗೂ ಹೇಳದೆ ಗಾಯಬ್. ಎಲ್ಲಿಗೆ ಹೋದರು ಅಂತ ಯಾರಿಗೂ ಗೊತ್ತಿಲ್ಲ. ಎಲ್ಲಿಗೆ ಬರ್ತಾರೆ ಅಂದರೆ ಸೋಮವಾರಪೇಟೆಯಲ್ಲಿದ್ದ ಶೀಲಾರವರ ಸೋದರಮಾವನ ಮನೆಗೆ ಬರ್ತಾರೆ. ಈ ಗಡ್ಡಧಾರಿ ಅಜಾನುಬಾಹುವನ್ನು ನೋಡಿದ ಮನೆಯವರು ಗಾಬರಿಯಾಗಿ

ಒಳಗೆ ಬಿಟ್ಟುಕೊಳ್ಳುವುದಿಲ್ಲ. ಅದು ಹೇಳಿಕೇಳಿ ಕಟ್ಟಾ ಲಿಂಗಾಯತ ಓಣಿಯಲ್ಲಿದ್ದ ಸಂಪ್ರದಾಯಬದ್ಧ ಮನೆ. ಇವರು ಬಂದ ಉದ್ದೇಶ ಹೇಳಿದಾಗ ಹಿತ್ತಲ ಬಾಗಿಲಿನಿಂದ ಮನೆಯೊಳಗೆ ಬಿಟ್ಟುಕೊಳ್ಳುತ್ತಾರೆ. ಆಗ ಬಂದಂತಹ ಉದ್ದೇಶವನ್ನು ಹೇಳಿ ಅವರ ಮನೆಯಲ್ಲಿ ಎರಡು ದಿನ ಇದ್ದು ಅವರ ಮನೆಯ ರೀತಿ ರಿವಾಜು, ನಡೆನುಡಿಯೆಲ್ಲವನ್ನು ಅರಿತುಕೊಂಡು ಒಪ್ಪಿತವಾಗಿ ಬೆಂಗಳೂರಿಗೆ ಬಂದು 'ಮದುವೆ ಆಗಿ' ಅಂತ ಕಾರಣಿಕ ಹೇಳಿದ್ದು.

## ಸ್ವಾಮಿ ಮದುವೆ

1976 ನವೆಂಬರ್ 6ರಂದು ಸ್ವಾಮಿ ಮತ್ತು ಶೀಲಾರವರ ಮದುವೆ ಮುಂಡರಗಿಂಯಲ್ಲಿ ಮಹಾಗುಂಡಯ್ಯನವರು ನಿರ್ಧರಿಸಿದಂತೆ ಸಂಪ್ರದಾಯಬದ್ಧವಾಗಿ ನೆರವೇರಿತು. ನವೆಂಬರ್ 4 ರಂದು ಹೆಗ್ಗೋಡಿನ ನಾಟಕ ಪ್ರದರ್ಶನದಲ್ಲಿ ಸ್ವಾಮಿಗಳು ಭಾಗವಹಿಸಿ, 5 ರಂದು ಮುಂಡರಗಿಗೆ ಬರುತ್ತಾರೆ. ಬೆಂಗಳೂರಿನಿಂದ ಶೀಲಾರೊಂದಿಗೆ ಕೇವಲ 8 ಜನ ಮಾತ್ರ ಬರುತ್ತಾರೆ. ಸರಳವಾಗಿ ಮದುವೆಯಾಯಿತು. ಆಡಂಬರಕ್ಕೆ ಅವಕಾಶವಿರಲಿಲ್ಲ. ಆದರೆ ಸಂಪ್ರದಾಯಗಳು ಸ್ಥಾನವನ್ನು ತುಂಬಿಕೊಂಡವು. ಸ್ವಾಮಿ ಮತ್ತು ಶೀಲಾರವರಿಗೆ ಮದುವೆಯ ಪದ್ಧತಿಗಳೆಲ್ಲ ಯಾವುದೋ ನಾಟಕದ ಒಂದು ದೃಶ್ಯದಂತೆ ಅಥವಾ 'ವಾತಾವರಣ ರಂಗಭೂಮಿ' ಯ ಒಂದು ನಾಟಕದಂತೆ. ಶೀಲಾ ಮತ್ತು ಸ್ವಾಮಿಯವರಿಗೆ ತಾವುಗಳು ಮದುವೆಯಾಗುತ್ತಿದ್ದೇವೆ ಅಂತ ಅನ್ನುವುದಕ್ಕಿಂತ ನಾವಿಬ್ಬರು ಇನ್ಮೇಲೆ ಒಟ್ಟಿಗೆ ಇರುತ್ತೇವೆ, ಒಟ್ಟಿಗೆ ಬದುಕುತ್ತೇವೆ. ಒಟ್ಟಿಗೆ ರಂಗಭೂಮಿಯ ಕಾಯಕ ಮಾಡುತ್ತೇವೆ ಎಂಬ ಭಾವನೆಗಳೇ ಎದೆಯೊಳಗೆ ದೃಢವಾಗಿ ಎದ್ದಾಡುತ್ತಿದ್ದವು. ಅಪ್ಪನಿಗಾಗಿ ಸಂಪ್ರದಾಯದಂತೆ ಮದುವೆಯನ್ನು ಸ್ವೀಕಾರ ಮಾಡಿಕೊಂಡರು.

'ನನ್ನ ಮಗನ ಮದುವೆ ಆಯಿತು ನೋಡಿ' ಎಂತಲೋ ಅಥವಾ 'ನಾಟಕದೋನಿಗೂ ಹೆಣ್ಣು ಕೊಡ್ತಾರೆ' ಅಂತ ತೋರಿಸುವುದಕ್ಕಾಗಿಯೋ ಗೊತ್ತಿಲ್ಲ. ಮದುವೆ ದಿನ ಅಪ್ಪ, ಎತ್ತಿನಬಂಡಿಯಲ್ಲಿ ಒಂದು ಮಂಚವನ್ನು ಹಾಕಿ ಕೂರಿಸಿ ಊರ ತುಂಬಾ ಮೆರವಣಿಗೆಯನ್ನು ಮಾಡಿಸುತ್ತಾರೆ. ಮೆರವಣಿಗೆಯ ಉದ್ದಕ್ಕೂ ಸ್ವಾಮಿಯವರು ತಾವು ಬಾಲ್ಯದಲ್ಲಿ ಆಟವಾಡಿದ ಜಾಗಗಳನ್ನು, ಶಾಲೆಗೆ ಚಕ್ಕರ್ ಹೊಡೆದು ಅಡಗಿ ಕೂತ ಜಾಗಗಳನ್ನು 'ಮೊಬೈಲ್ ಇಸ್ಪೀಟು ಅಡ್ಡ' ಸಂಚರಿಸಿದ ಜಾಗಗಳನ್ನು ತೋರಿಸಿ 'ಆತ್ಮಕಥೆ'ಯನ್ನು ಹೇಳುತ್ತಿದ್ದರು. ಸ್ವಾಮಿಯವರ

ಸ್ನೇಹಿತರು ಈ ಮದುವೆಯನ್ನು ಕಂಡು ಸಂಭ್ರಮಿಸಿದರು. ಮದುವೆಯಾಯಿತು. ಮಾರನೆಯ ದಿನ ಬಸ್ಸಿನಲ್ಲಿ ಬೆಂಗಳೂರಿಗೆ ನವದಂಪತಿಗಳು ಬಂದರು.

ಸಮುದಾಯದ ಗೆಳೆಯ ಸನತ್ಕುಮಾರ ನವದಂಪತಿಗಳಿಗೆ ತನ್ನ ನಾಗರಭಾವಿಯಲ್ಲಿದ್ದ ಮನೆಯನ್ನು ವಾಸಕ್ಕೆ ಬಿಟ್ಟುಕೊಡುತ್ತಾರೆ. ಅಲ್ಲಿದ್ದುಕೊಂಡು ಕಲಾಕ್ಷೇತ್ರದಲ್ಲಿ ನಡೆಯುತ್ತಿದ್ದ ನಾಟಕದ ತಾಲೀಮಿಗೆ ಬೆಳಗ್ಗೆ ಬಂದು ರಾತ್ರಿಯ ತನಕ ಇದ್ದು ರಿಹರ್ಸಲ್‌ನಲ್ಲಿ ತೊಡಗಿಕೊಳ್ಳುವುದು, ರಂಗ ಕಾಯಕವನ್ನು ಮಾಡುವುದು ಆರಂಭವಾಯಿತು. ಅದು ಎಷ್ಟರ ಮಟ್ಟಿಗೆ ಅಂದ್ರೆ, ನವವಧು ಶೀಲಾರವರು ಪ್ರಸನ್ನರವರ ಕುಬಿ ಮತ್ತು ಇಯಾಲ ನಾಟಕದಲ್ಲಿ, ಸ್ವಾಮಿಯವರು ಟಿ. ಎನ್. ಸೀತಾರಾಂ ನಿರ್ದೇಶನದ 'ಕತ್ತಲೆ ದಾರಿ ದೂರ' ನಾಟಕದಲ್ಲಿ ಪಾತ್ರವನ್ನು ಅಭಿನಯಿಸುವುದಕ್ಕೆ ಪ್ರಾರಂಭಿಸುತ್ತಾರೆ. ಈ ಕಾಲದಲ್ಲಿ ಆಧುನಿಕ ರಂಗಭೂಮಿಯಲ್ಲಿ ಅಭಿನಯಿಸುತ್ತಿದ್ದವರಿಗೆ 'ರಂಗಭೂಮಿ' ಒಂದು ಹವ್ಯಾಸದ ಭಾಗವಾಗಿರುತ್ತಿತ್ತು. ವೃತ್ತಿಯಾಗಿರುತ್ತಿರಲಿಲ್ಲ. ಬಹುಶಃ ಸ್ವಾಮಿಯವರು ಮತ್ತು ಶೀಲಾರವರು 'ಆಧುನಿಕ ರಂಗಭೂಮಿ' ಯನ್ನೇ ವೃತ್ತಿಯಾಗಿ ಸ್ವೀಕರಿಸಿದ ಪ್ರಥಮ ದಂಪತಿಗಳೆಂದು ಹೇಳಬಹುದೇನೋ? ಇವರು ಹೇಗೆ ಸಂಸಾರ ನಡೆಸಿರಬಹುದು ಎಂದು ಊಹೆ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ.

❑

## ಉತ್ತರ ಕರ್ನಾಟಕ ರಂಗಕಾರ್ಯಕ್ಷೇತ್ರ

ಸ್ವಾಮಿಯವರ ಸ್ವಭಾವವೇ 'ಬದ್ಧತೆಗೆ' ಹೆಚ್ಚು ಬೆಲೆ ಕೊಡುವುದು. ಗೆಳೆಯರಾದ ಹಂಸಲೇಖಾರವರು ಒಂದು ನಾಟಕ ತಂಡವನ್ನು ಕಟ್ಟಿಕೊಂಡು 'ರೈತಜೀವಿ' ಎಂಬ ನಾಟಕವನ್ನು ರಾಜ್ಯಾದ್ಯಂತ ಪ್ರದರ್ಶನ ಮಾಡುವ ಯೋಜನೆಯನ್ನು ರೂಪಿಸುತ್ತಾರೆ. ಆ ಪ್ರಕಾರವಾಗಿ ದಾವಣಗೆರೆಯಲ್ಲಿ ಹಂಸಲೇಖಾರವರ ಕಂಪನಿ ಕ್ಯಾಂಪ್ ಹಾಕುತ್ತದೆ. ಈ ರೈತಜೀವಿ ನಾಟಕಕ್ಕೆ ಸ್ವಾಮಿಯವರು ಬೆಳಕಿನ ವಿನ್ಯಾಸವನ್ನು ಮಾಡಿದ್ದಲ್ಲದೆ ನಿರ್ವಹಣೆಯನ್ನು ಕೂಡ ಮಾಡುತ್ತಿದ್ದರು. ಸ್ವಾಮಿಯವರು ದಾವಣಗೆರೆ ಕ್ಯಾಂಪ್‌ಗೆ ಹೋಗುತ್ತಾರೆ. ಆಗ ಶೀಲಾರವರು ನಾಲ್ಕು ತಿಂಗಳ ಗರ್ಭಿಣಿ. ನಾಗರಭಾವಿಯ ಐಜಾಕ್ ಕ್ವಾರ್ಟರ್ಸ್‌ನಲ್ಲಿ ಬಿಟ್ಟು ಹೋಗುತ್ತಾರೆ. ವಾಪಸ್ಸು ಬರುವುದು ತಡವಾಗುತ್ತದೆ. ಶೀಲಾರವರ ಬಳಿಯಲ್ಲಿದ್ದ ದುಡ್ಡೆಲ್ಲ ಖರ್ಚಾಗುತ್ತದೆ. ತಿನ್ನುವುದಕ್ಕೂ ಮನೆಯಲ್ಲಿ ಏನೂ ಇಲ್ಲ, ಮೂರು ದಿನಗಳ ಕಾಲ ಬರೀ ನೀರನ್ನು ಕುಡಿದುಕೊಂಡು ಉಪವಾಸವಿರುತ್ತಾರೆ. ನೆನಸಿಕೊಂಡರೆ ಮನಸ್ಸಿಗೆ ಅತೀವವಾದ ವೇದನೆಯಾಗುತ್ತದೆ. ಕ್ಯಾಂಪ್ ಮುಗಿದ ಮೇಲೆ ಮನೆಗೆ ಬಂದಾಗ ವಿಷಯ ತಿಳಿದು ಸ್ವಾಮಿಯವರ ಕಣ್ಣಿನಲ್ಲಿ ಧಾರಾಕಾರವಾಗಿ ಕಣ್ಣೀರು ಹರಿಯುತ್ತದೆ. ಅದನ್ನ ಅವರು ಶೀಲಾರವರಿಗೆ ತೋರಗೊಡುವುದಿಲ್ಲ.

'ಸಮುದಾಯ' ರಂಗ ಘಟಕಗಳನ್ನು ವಿಸ್ತರಿಸುವ ಸಲುವಾಗಿ ಪ್ರಸನ್ನ ಮೈಸೂರಿನ ಪ್ರಾಂತದಲ್ಲೂ, ಸಿಜಿಕೆ ಬೆಂಗಳೂರಿನ ಆಸುಪಾಸಿನಲ್ಲೂ ನಾಟಕಗಳನ್ನು ಮಾಡಿಸುವುದು, ಶಿಬಿರಗಳನ್ನು ನಡೆಸುವುದಕ್ಕೆ ಸನ್ನದ್ಧರಾದಂತೆ, ಸ್ವಾಮಿಯವರ ಪಾಲಿಗೆ ಬಂದಿದ್ದು ಉತ್ತರ ಕರ್ನಾಟಕದ ಜಿಲ್ಲೆಗಳು. ಸರಿ ಧಾರವಾಡದ ಕಾಮ್ರೇಡ್‌ಗಳಿಂದ ನಾಟಕವನ್ನು ಮಾಡಿಸುವುದಕ್ಕೆ ಕರೆ ಬಂತು. ಸ್ವಾಮಿಗಳು ತಮ್ಮ ಬ್ಯಾಗ್ ಹೆಗಲಿಗೆ ಹಾಕಿಕೊಂಡರು. ಗರ್ಭಿಣಿ ಹೆಂಡತಿಯನ್ನು ಎಲ್ಲಿ ಬಿಡುವುದು? ದಾವಣಗೆರೆ 'ರೈತಜೀವಿ' ಕ್ಯಾಂಪಿಗೆ ಹೋದಾಗ ಬಿಟ್ಟು ಹೋದಂತೆ ಈಗ ಹೋಗಬಾರದೆಂದು ಯೋಚಿಸಿ ಮುಂಡರಗಿಯ ತಮ್ಮ ತಂದೆ ಮನೆಯಲ್ಲಿ ಶೀಲಾರವರನ್ನು ತಾಯಿಯ ಆರೈಕೆಯಲ್ಲಿ ಬಿಟ್ಟು ಧಾರವಾಡಕ್ಕೆ ಬಸ್ಸು ಹತ್ತುತ್ತಾರೆ.

## ಹಂಸಲೇಖರ ಒಡನಾಟ

ಧಾರವಾಡಕ್ಕೆ ಬಂದರೂ ಇವರಿಗೆ ಉಳಿದುಕೊಳ್ಳಲು ಜಾಗವಿಲ್ಲ. ನಾಟಕ ಮಾಡಿಸಲು ಜನವೇ ಇಲ್ಲ. ನಾಟಕ ಮಾಡಿಸಲು ಧನಸಂಚಯವಿಲ್ಲ. ಹೇಗೆ ಮಾಡೋದು? ಯಾರೋ ಮಾರ್ಕ್ಸ್‌ವಾದಿ ಸ್ನೇಹಿತರು ಕರೆದರು, ಇವರು ಬಂದರು. ಆದರೆ ನಾನು ಮಾಡೇ ಮಾಡ್ತೀನಿ ಅನ್ನುವ ಸಂಕಲ್ಪವಿದೆಯಲ್ಲ ಅದು ದೊಡ್ಡದು. ಸರಿ ಈ ಹೊತ್ತಿಗೆ ಚಿಂದೋಡಿ ವೀರಪ್ಪನವರು ಹಂಸಲೇಖಾರವರ 'ರೈತಜೀವಿ' ನಾಟಕವನ್ನು ಕಂಟ್ರಾಕ್ಟ್ ಮೇಲೆ ಕರೆಸಿಕೊಂಡು ತಮ್ಮ ಥಿಯೇಟರ್‌ನಲ್ಲಿ ನಾಟಕದ ಪ್ರದರ್ಶನ ಏರ್ಪಾಡು ಮಾಡುತ್ತಿದ್ದರು. ಸ್ವಾಮಿಯವರು ಈ ನಾಟಕಕ್ಕೆ ಬೆಳಕಿನ ವಿನ್ಯಾಸ ಮತ್ತು ನಿರ್ವಹಣೆ ಮಾಡುತ್ತಿದ್ದುದರಿಂದ ಕಲಾವಿದರು ವಸತಿ ಮಾಡಿದ್ದ ಹುಬ್ಬಳ್ಳಿಯ ಆನಂದ ಭವನದಲ್ಲಿ ಇವರಿಗೂ ವಸತಿ ಸಿಕ್ಕಿತು. ಬೆಳಗಿನಿಂದ ಸಂಜೆಯ ತನಕ ಧಾರವಾಡದಲ್ಲಿ ಸಮುದಾಯ ಘಟಕವನ್ನು ಪ್ರಾರಂಭಿಸುವ ಸಂಘಟನೆಯ ಕೆಲಸ, ರಂಗತಾಲೀಮು, ಇತ್ಯಾದಿಗಳನ್ನು ಮುಗಿಸಿಕೊಂಡು ಬಂದು ರಾತ್ರಿ 10.30ಕ್ಕೆ ಹುಬ್ಬಳ್ಳಿಯಲ್ಲಿ ಪ್ರದರ್ಶನವಾಗುತ್ತಿದ್ದ ರೈತಜೀವಿ ನಾಟಕದ ಲೈಟಿಂಗ್ ನಿರ್ವಹಣೆಯನ್ನು ಮಾಡುತ್ತಿದ್ದರು.

ಈ ಕಾಲದಲ್ಲಿ ಹುಬ್ಬಳ್ಳಿ ಧಾರವಾಡಗಳಲ್ಲಿ ನಡೆಯುತ್ತಿದ್ದ ಹವ್ಯಾಸಿ ರಂಗಚಟುವಟಿಕೆಗಳಲ್ಲಿ ಹೆಚ್ಚಾಗಿ ಸ್ಪಾಟ್‌ಲೈಟ್ಸ್‌ಗಳನ್ನು ಬಳಸುತ್ತಿರಲಿಲ್ಲ. ಹೇಗೂ ಹಂಸಲೇಖಾರವರ ತಂಡದಲ್ಲಿ ಸ್ಪಾಟ್‌ಲೈಟ್, ಡಿಮ್ಮರ್‌ಗಳಿವೆ ಇವುಗಳನ್ನು ಬಳಸಿಕೊಂಡು ಯಾಕೆ 'ಬೆಳಕಿನ ವಿನ್ಯಾಸದ ಕಾರ್ಯಾಗಾರ' ಮಾಡಬಾರದು ಎಂದು ಯೋಚಿಸಿ, ಹಂಸಲೇಖಾರವರಿಂದ ಅನುಮತಿಯನ್ನು ಪಡೆದು, ಹುಬ್ಬಳ್ಳಿಯ ಆಗಿನ ಹವ್ಯಾಸಿ ರಂಗಸಂಘಟಕರನ್ನೂ, ಕಲಾವಿದರನ್ನೂ, ನೇಪಥ್ಯಕಾರರನ್ನೂ ಒಟ್ಟಿಗೆ ಸೇರಿಸಿ ಕಾರ್ಯಾಗಾರದ ದಿನಾಂಕ ಮತ್ತು ಸಮಯವನ್ನು ನಿಗದಿ ಮಾಡುತ್ತಾರೆ. ಸುರುವಾಗಬೇಕಾಗಿದ್ದ ದಿನದಂದು ಸ್ವಾಮಿಯವರು ಲೈಟಿಂಗಿನ ಎಲ್ಲಾ ಪರಿಕರಗಳನ್ನು ಹೊಂದಿಸಿಕೊಂಡು ಕೂರುತ್ತಾರೆ. ಯಾರೊಬ್ಬರೂ ಬರುವುದಿಲ್ಲ. ಮಾರನೆಯ ದಿನ ವಿಚಾರಿಸಲಾಗಿ 'ಗಂಗಾಧರಸ್ವಾಮಿಗಳಿಗೆ ಈಗ ಟೈಮ್ ಇಲ್ಲ ಕಾರ್ಯಾಗಾರವನ್ನು ಮುಂದೂಡಲಾಗಿದೆ' ಅಂತ ಯಾರೋ ಪ್ರಚಾರ ಮಾಡಿದ್ದರಂತೆ. ಇದರರ್ಥ ಕೆಲವರಿಗೆ ಈ ವರ್ಕ್‌ಶಾಪ್ ಆಗುವುದು ಬೇಡವಾಗಿತ್ತು.

ಹವ್ಯಾಸಿಗಳಲ್ಲಿ ತಾತ್ವಿಕತೆಯನ್ನು ಒಪ್ಪಿಕೊಂಡು ರಂಗಭೂಮಿಯನ್ನು ಮಾಡುವವರಿದ್ದಾರೆ. ಕೆಲವರು ರಂಗಭೂಮಿಯನ್ನು ತಮ್ಮ ಸ್ವಾರ್ಥಕ್ಕೆ, ಹಿತಾಸಕ್ತಿಯನ್ನು ಬೆಳೆಸಿಕೊಳ್ಳಲು ಬಳಸಿಕೊಳ್ಳುವವರು ಅಂದೂ ಇದ್ದರು ಇಂದೂ ಇದ್ದಾರೆ. ಆದರೆ ರಂಗಭೂಮಿಗೋಸ್ಕರ ರಂಗಭೂಮಿಯನ್ನು ಮಾಡುವವರು ಕೆಲವೇ ಜನ. ಅವರಲ್ಲಿ ಅಂದಿನಿಂದ ಇಂದಿನವರೆಗೆ ಆ ಭಾವ ಉಳಿಸಿಕೊಂಡು ರಂಗಭೂಮಿಗೋಸ್ಕರ ರಂಗಭೂಮಿಯನ್ನು ಮಾಡುವ ಗಂಗಾಧರಸ್ವಾಮಿ ಯವರಂಥವರು ಸಿಗುವುದು ಬಹಳ ಅಪರೂಪ.

ಈ ಮಧ್ಯೆ ಶೀಲಾರವರು ಮುಂಡರಗಿಯಲ್ಲಿರುವುದು ಕಷ್ಟವಾಗುವಂತಹ ಸನ್ನಿವೇಶ ನಿರ್ಮಾಣವಾಯಿತು. ಅನಿವಾರ್ಯವಾಗಿ ಶೀಲಾರವರನ್ನು ಮುಂಡರಗಿಯಿಂದ ಕರೆದುಕೊಂಡು ಬರಲೇಬೇಕಾಯಿತು. ಸೊಸೆಯನ್ನು ತನ್ನ ಮನೆಯಲ್ಲಿಟ್ಟುಕೊಳ್ಳಲಾರದಂತಹ ಅಸಹಾಯ ಸ್ಥಿತಿ ಮಹಾಗುಂಡಯ್ಯ ಪ್ರಭಯ್ಯನಮಠರವರಿಗೆ ಬಂದೊದಗುತ್ತದೆ. ಸೊಸೆ ಮತ್ತು ಮಗನನ್ನು ಬಸ್ಸು ನಿಲ್ದಾಣಕ್ಕೆ ಬಿಡಲು ಬಂದ ತಂದೆಯ ಕಣ್ಣಿನಲ್ಲಿ ಕಣ್ಣೀರನ್ನು ಕಂಡು ಸ್ವಾಮಿಯವರು ಗದ್ಗದಿತರಾಗುತ್ತಾರೆ.

ಇವರೇ ಬೇರೆ ಯಾರದೋ ರೂಮಿನಲ್ಲಿದ್ದವರು. ಈಗ ಗರ್ಭಿಣಿಯನ್ನು ಕರೆದುಕೊಂಡು ಬಂದರು. ಎಲ್ಲಿ ಬಿಡೋದು ಶೀಲಾರವರನ್ನ? ಸರಿ ಕಾಮ್ರೇಡ್ ಸ್ನೇಹಿತರು ವಿ. ಎನ್. ಹಳಕಟ್ಟಿ ಅವರ ಹೆಂಡತಿ ವಿ. ಎನ್. ಮೀರಾ ಹಳಕಟ್ಟಿಯವರ ಮನೆಯಲ್ಲಿ ಬಿಟ್ಟರು. ತಮ್ಮ ಪಾಡಿಗೆ ತಾವು ನಾಟಕ ಮಾಡುವುದಕ್ಕೆ ಹೊರಟರು. ಆ ಮನೆಯಲ್ಲಿ ಬೆಳಗಿನಿಂದ ಸಂಜೆತನಕ ಯಾರೂ ಇರುತ್ತಿರಲಿಲ್ಲ. ಶೀಲಾ ಒಬ್ಬರೇ!

## ಧಾರವಾಡ ಸಮುದಾಯ

ಧಾರವಾಡ ಸಮುದಾಯ ಘಟಕ ಪ್ರಾರಂಭವಾಯಿತು. ಬೆಳೆದವರು ಮತ್ತು ಪಂಚಮ ನಾಟಕಗಳು ಪ್ರದರ್ಶನಗೊಂಡವು. ಏನೂ ಗೊತ್ತಿಲ್ಲದವರಿಗೆ ನಾಟಕವನ್ನು ಕಲಿಸುವ ಸ್ಥಿತಿ ಇದೆಯಲ್ಲ ಅದು ಹೆಚ್ಚು ತ್ರಾಸದಾಯಕ. ಅದು ದೊಡ್ಡ ಅನುಭವದ ಮಹಾಪೂರ.

ರಂಗಕಾರ್ಯಾಗಾರ ಮುಗಿದ ಮೇಲೆ ಮನೆಗೆ ಬಂದ ಗಂಡನ ಬಳಿಯಲ್ಲಿ ಶೀಲಾ ಹೊರಗಡೆ ಸುತ್ತಾಡುವ ಬಯಕೆಯನ್ನಿಡುತ್ತಾರೆ. ಸರಿ ಸ್ವಾಮಿಗಳು

ಧಾರವಾಡ, ಧಾರವಾಡದ ಸುತ್ತಮುತ್ತಲಿನ ಜಾಗ ತೋರಿಸುತ್ತಾರೆ. ಮತ್ತು ತಮ್ಮ ಸಂಬಂಧಿಕರ ಮನೆಗಳಿಗೆ ಕರೆದುಕೊಂಡು ಬಸುರಿ ಕೋರಿದ ಬಯಕೆಯನ್ನು ತೀರಿಸುತ್ತಾರೆ. ಆ ದಿನವೇ ಶೀಲಾರವರಿಗೆ ಹೆರಿಗೆ ನೋವು ಕಾಣಿಸಿಕೊಂಡಿದ್ದರೂ ಗಂಡನೊಂದಿಗೆ ಸುತ್ತಾಡುವ ಈ ಕ್ಷಣಕ್ಕಾಗಿ ನೋವು ಸಹಿಸಿಕೊಂಡು ಆನಂದವನ್ನು ಆಸ್ವಾದಿಸುತ್ತಾರೆ. ಸರಿ ಎಲ್ಲಾ ಮುಗಿಸಿ ಮತ್ತೆ ಶೀಲಾರವರನ್ನು ವಿ. ಎನ್. ಹಳಕಟ್ಟಿಯವರು ನೀಡಿದ್ದ ರೂಮಿನಲ್ಲಿ ಹೆಂಡತಿಯನ್ನು ಬಿಟ್ಟು ಹೊರಡುತ್ತಾರೆ. ಬೆಳಗಿನ ಝಾವ ಶೀಲಾರವರಿಗೆ ಹೆರಿಗೆ ನೋವು ಹೆಚ್ಚಾಗುತ್ತದೆ.

ಆ ಮುಂಜಾನೆ ತನ್ನ ರೂಮಿನಲ್ಲಿ ಮಲಗಿದಾಗ 'ಸಿವಿಲ್ ಹಾಸ್ಪಿಟಲ್‌ನಲ್ಲಿ ಶೀಲಾರವರು ಹೆಣ್ಣು ಮಗುವಿಗೆ ಜನ್ಮ ನೀಡಿದ್ದಾರೆ' ಎಂಬ ಸುದ್ದಿ ಬರುತ್ತದೆ. ಸ್ವಾಮಿಗಳ ಎದೆಯಲ್ಲಿ ಆತಂಕ. ಇನ್ನೂ ಗರ್ಭಾವಧಿ ತುಂಬಿರಲಿಲ್ಲ, ಆಗಲೇ ಮಗು ಹುಟ್ಟಿತಲ್ಲ ಅಂತ. ಸಿವಿಲ್ ಹಾಸ್ಪಿಟಲ್‌ಗೆ ಹೋಗಿ ನೋಡಿದರೆ ನರದ ಸಾದೃಶ್ಯ. ಹುಟ್ಟಿದ ಮಗುವಿನ ಬೆಳವಣಿಗೆ ಕ್ಷೀಣವಾಗಿತ್ತು. ಅಗತ್ಯ ವೈದ್ಯಕೀಯ ಚಿಕಿತ್ಸೆಗಳನ್ನು ಕೊಡಿಸಲೇಬೇಕಾಗಿತ್ತು. ಆಗ ನೆರವಿಗೆ ಬಂದವರು ಕಾಮ್ರೇಡ್ ಸ್ನೇಹಿತರು. ವಿ. ಎನ್. ದೇಶಪಾಂಡೆಯವರು ಜರ್ಮನ್ ಹಾಸ್ಪಿಟಲ್‌ಗೆ ಸೇರಿಸಿ, ಮಗುವನ್ನು ಇನ್‌ಕ್ಯುಬೆಲೇಟರ್‌ನಲ್ಲಿಟ್ಟರು. ಮಗುವಿನ ಬೆಳವಣಿಗೆಗೆ ಕಾರಣರಾದರು. ಕಮ್ಯುನಿಸ್ಟ್ ಸ್ನೇಹಿತರು 25 ದಿನಗಳ ಕಾಲ ಶೀಲಾರವರನ್ನು ನೋಡಿಕೊಳ್ಳುತ್ತಾರೆ. ದಿನಕ್ಕೊಂದು ಮನೆಯಿಂದ ಬಾಣಂತಿಗೆ ಬೇಕಾದ ಊಟವನ್ನು ತಂದು ಕೊಡುತ್ತಾರೆ. ಈ ಸ್ವಾಮಿಗಳು ಅಲ್ಲಿ ನಡೆಯುತ್ತಿದ್ದ ಕಾರ್ಮಿಕ ಮುಷ್ಕರದಲ್ಲಿ ಭಾಗವಹಿಸಿ ಹೋರಾಟದ ಹಾಡುಗಳನ್ನು ಹೇಳಿಸುವುದು, ಸ್ಲೋಗನ್‌ಗಳನ್ನು ಕೂಗಿಸುವುದು ಮುಷ್ಕರವನ್ನು ಚಟುವಟಿಕೆಯಿಂದ ಕೂಡಿರುವಂತೆ ಕೆಲಸ ಮಾಡತೊಡಗಿದರು. ಕೊನೆಗೆ ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಮಾಡಿಸುವಾಗಲೂ ಈ ಕಾಮ್ರೇಡ್ ಸಂಘಟನೆಯ ಸ್ನೇಹಿತರೇ ನೆರವಿಗೆ ಬರುತ್ತಾರೆ.

ಶೀಲಾ ಮತ್ತು ಗಂಗಾಧರಸ್ವಾಮಿಯವರ ಪರಿಸ್ಥಿತಿಯನ್ನು ಅರಿತ ರಾಯಚೂರಿನ ಗೆಳೆಯರಾದ ಶ್ರೀ ಸಿ. ಎಸ್. ಬಾಳೆ ಮತ್ತು ಶರಣಮಾಲಿ ಪಾಟೀಲರು, ಶೀಲಾ ಮತ್ತು ಸ್ವಾಮಿಯವರನ್ನು ರಾಯಚೂರಿಗೆ ಕರೆದುಕೊಂಡು ಹೋಗಿ ಒಂದು ಮನೆಯಲ್ಲಿಡುತ್ತಾರೆ. ಮೊದಲ ದಿನ ಮನೆಯ ಬಾಗಿಲು ತೆಗೆದು ನೋಡಿದರೆ ಬಾಣಂತಿಯ ಆರೈಕೆಗೆ ಬೇಕಾದ ಎಲ್ಲಾ ವಸ್ತುಗಳು ಆ ಮನೆಯಲ್ಲಿದ್ದವು. ಇದನ್ನು ಕಂಡು ಸ್ವಾಮಿ ಬೆರಗಾಗುತ್ತಾರೆ. ರಾಯಚೂರಿನಲ್ಲಿ

ಜೀವನ ಮುಂದುವರಿಯುತ್ತದೆ. ನಿಧಾನಕ್ಕೆ ಮಗುವಿನ ಬೆಳವಣಿಗೆಯಲ್ಲಿ ಪ್ರಗತಿ ಕಂಡುಬರುತ್ತದೆ. ರಾಯಚೂರಿನಲ್ಲಿ ಜೀವನ ಮುಂದುವರಿಯುತ್ತದೆ. ನಿಧಾನವಾಗಿ ಮಗುವಿನ ಬೆಳವಣಿಗೆಯಲ್ಲಿ ಪ್ರಗತಿ ಕಂಡುಬರುತ್ತದೆ. ರಾಯಚೂರಿನ ಸಮುದಾಯದ ಗೆಳೆಯರೊಟ್ಟಿಗೆ ಸೇರಿ ಪ್ರೀತಿಗಾಗಿ ಹುಟ್ಟಿದ ಮಗಳಿಗೆ 'ಸಮತಾ' ಎಂಬ ಹೆಸರನ್ನಿಡುತ್ತಾರೆ.

**ರಾಯಚೂರಿನಲ್ಲಿ ಸಮುದಾಯ**

ರಾಯಚೂರಿನಲ್ಲಿ 'ಸಮುದಾಯ ಘಟಕ' ವನ್ನು ಪ್ರಾರಂಭ ಮಾಡುವ ಕೈಂಕರ್ಯಕ್ಕೆ ಮುಂದಾಗುತ್ತಾರೆ. ಘಟಕ ಪ್ರಾರಂಭವಾಗಬೇಕಾಗಿದ್ದು ನಾಟಕದ ಮೂಲಕ ತಾನೆ. ಸರಿ ರಂಗ ತಾಲೀಮು ಶುರುವಾಯಿತು. ನಾಟಕದಲ್ಲಿ ನಟಿಸುತ್ತೇನೆ ಎಂಬ ವ್ಯಕ್ತಿಗಳಿಲ್ಲ. ಸರಿ ಇವರು ರಾಯಚೂರಿನಲ್ಲಿ ಕೆಲವರ ಮನೆಗೆ ತಾವೇ ಖುದ್ದಾಗಿ ಹೋಗಿ ಅವರೊಂದಿಗೆ ಮಾತಾಡಿ ಮನವೊಲಿಸಿ ಶಿಬಿರಕ್ಕೆ ಕರೆದುಕೊಂಡು ಬಂದರು. ಅವರಿಗೆ ಅಭಿನಯದ ಪ್ರಾಥಮಿಕ ಪಾಠಗಳನ್ನು ಹೇಳಿಕೊಡುತ್ತಾ 'ಕತ್ತಲೆ ದಾರಿ ದೂರ' ನಾಟಕವನ್ನು ಸಿದ್ಧ ಮಾಡಿ, ಅದರ ಪ್ರದರ್ಶನದ ಮೂಲಕ ಸಮುದಾಯ ಘಟಕವನ್ನು ಪ್ರಾರಂಭ ಮಾಡಿದರು. ಈ ನಾಟಕದಲ್ಲಿ ಬಾಣಂತಿ ಶೀಲಾರವರು ಅಭಿನಯಿಸಿದರು.

ಕತ್ತಲೆ ದಾರಿ ದೂರ ನಾಟಕವನ್ನು ಖ್ಯಾತ ಚಿಂತಕ ಡಿ. ಆರ್. ನಾಗರಾಜ್ ಚೆಕಾವ್‌ನ ಕಥೆಯನ್ನು ಆಧರಿಸಿ ಬರೆದಿದ್ದು, ಮೊದಲು ಬೆಂಗಳೂರು ಸಮುದಾಯ ಇದರ ಪ್ರದರ್ಶನವನ್ನು ಮಾಡಿತು. ಕಲಾವಿದರು ಹೆಚ್ಚು ಅಶುವಿಸ್ತರಣೆ ಮೂಲಕ ಈ ಕತ್ತಲೆ ದಾರಿ ದೂರ ನಾಟಕವನ್ನು ಕಟ್ಟಿದರು. ಇದಕ್ಕೆ ಒಂದು ಅಕ್ಷರ ರೂಪ ಕೊಟ್ಟವರು ಗಂಗಾಧರಸ್ವಾಮಿಗಳೇ. ಈಗ ಚಾಲ್ತಿಯಲ್ಲಿರುವ ನಾಟಕದ ಹಸ್ತಪ್ರತಿಯನ್ನು ರಚಿಸಿದವರು ಸ್ವಾಮಿಯವರೇ.

ಹೀಗೆ ಸ್ವಾಮಿಯವರು ಹುಬ್ಬಳ್ಳಿ, ಗುಲ್ಬರ್ಗಾ, ರಾಯಚೂರು ಸಮುದಾಯ ಘಟಕಗಳು ಪ್ರಾರಂಭವಾಗುವುದಕ್ಕೆ ಕಾರಣರಾದರು.

ಇದೇ ಸಂದರ್ಭದಲ್ಲಿ ಬಂಗಾಳಿಯ ಖ್ಯಾತ ನಿರ್ದೇಶಕ ಬಾದಲ್ ಸರ್ಕಾರ್‌ರವರ ನಿರ್ದೇಶನದಲ್ಲಿ ಅಭಿನಯ ಕಾರ್ಯಾಗಾರವನ್ನು ಬೆಂಗಳೂರು ಕೇಂದ್ರ ಸಮುದಾಯದಿಂದ ಆಯೋಜನೆ ಮಾಡಲಾಗಿತ್ತು. ಈ ಕಾರ್ಯಾಗಾರಕ್ಕೆ ಸ್ವಾಮಿ ಮತ್ತು ಶೀಲಾರವರು ಭಾಗವಹಿಸಬೇಕೆಂದು ಕೇಂದ್ರ ಸಮುದಾಯದಿಂದ ಆದೇಶವಿತ್ತು.

ಐದು ತಿಂಗಳ ಸಮಾತಾಳನ್ನು ಶೀಲಾರ ತಾಯಿಯ ಮನೆಯಲ್ಲಿ ಬಿಟ್ಟು ಕಾರ್ಯಾಗಾರದಲ್ಲಿ ಭಾಗವಹಿಸುತ್ತಾರೆ. ಕಾರ್ಯಾಗಾರ ಮುಗಿಸಿ ರಾಯಚೂರಿಗೆ ಹೋದರೆ, ಸಿಕ್ಕಾಪಟ್ಟೆ ಮಳೆ ಬಂದು ಗೆಳೆಯರು ಕೊಡಿಸಿದ್ದ ಮನೆ ಬಿದ್ದು ಸಾಮಾನುಗಳೆಲ್ಲ ಒಳಗಡೆ ಸಿಕ್ಕಿಹಾಕಿಕೊಂಡು ಬಿಟ್ಟಿದೆ. ರಾತ್ರಿ ಹೊತ್ತು ಏನ್ ಮಾಡೋದು? ವಿಧಿಯಿಲ್ಲದೆ ಅವರು ರಾಯಚೂರಿನಲ್ಲಿದ್ದ ಅಕ್ಕನ ಮನೆಗೆ ಹೋಗುತ್ತಾರೆ. ಮನೆಗೆ ಬಂದ ಭಾವ ಸ್ವಾಮಿಯವರು ಬಂದಿರುವುದನ್ನು ಕಂಡು 'ಎಷ್ಟು ದಿನ ಇರ್ತಾರೆ ಇವರು? ಊರೆಲ್ಲಾ ನಾಟಕ ಮಾಡಿಕೊಂಡು ಬಂದು ಇಲ್ಲಿ ಇರೋದಾ?' ಮುಂತಾಗಿ ಹೀಯಾಳಿಸಿ ಮಾತಾಡ್ತಾರೆ. ಮಧ್ಯರಾತ್ರಿ ಹೆಂಡ್ತಿಯನ್ನು ಎಬ್ಬಿಸಿಕೊಂಡು ಮನೆಯಿಂದ ಹೊರಬಂದ ಸ್ವಾಮಿ ನೇರವಾಗಿ ರೈಲ್ವೆ ನಿಲ್ದಾಣಕ್ಕೆ ಬಂದು ಎರಡು ದಿನ ಅಲ್ಲೇ ತಂಗುತ್ತಾರೆ. ಇದು ಸಮುದಾಯದ ಗೆಳೆಯರಿಗೆ ಗೊತ್ತಾಗುತ್ತದೆ. ಆಮೇಲೊಂದು ಮನೆ ಹುಡುಕಿ, ಅದರಲ್ಲಿ ವಾಸ ಮಾಡಲು ಅನುವು ಮಾಡಿಕೊಡುತ್ತಾರೆ. ನಂತರ ರಾಯಚೂರು ಸಮುದಾಯಕ್ಕೆ 'ಹುತ್ತವ ಬಡಿದರೆ' ನಾಟಕವನ್ನು ನಿರ್ದೇಶನ ಮಾಡುತ್ತಾರೆ. ಈ ನಾಟಕ ಬಹಳ ಯಶಸ್ಸನ್ನು ತಂದುಕೊಡುತ್ತದೆ.

ಕೇಂದ್ರ ಸಮುದಾಯದಿಂದ 'ನೀವು ರಾಯಚೂರಿನಲ್ಲಿ ಸಂಘಟನೆ ಮಾಡಿದ್ದು ಸಾಕು, ಧಾರವಾಡದಲ್ಲಿ ನಿಮ್ಮ ಸಂಘಟನಾ ಕೆಲಸವನ್ನು ಮುಂದುವರಿಸಿ' ಎಂಬ ಬುಲಾವ್ ಬಂತು. ಸರಿ ಸ್ವಾಮಿಯವರು ತಮ್ಮ ಸಾಮಾನುಗಳನ್ನು ಪ್ಯಾಕ್ ಮಾಡಿಕೊಂಡರು. ಈ ಹೊತ್ತಿಗಾಗಲೇ 'ಸಂಘರ್ಷ' ಹುಟ್ಟಿರುತ್ತಾನೆ.

## ಬದ್ಧತೆಯೇ ಗಾಡ್‌ಫಾದರ್

ಧಾರವಾಡಕ್ಕೆ ಬರುತ್ತಾರೆ. ಮೊದಲಿಗಿಂತ ಸಂಸಾರ ದೊಡ್ಡದಾಗಿದೆ. ಇಬ್ಬರು ಮಕ್ಕಳು. ಧಾರವಾಡದಲ್ಲಿ ಇರುವುದು ಎಲ್ಲಿ? ಸರಿ ಗಲ್ಲಿ ಗಲ್ಲಿ ತಿರುಗಿ ಮನೆಯನ್ನು ಹುಡುಕುವುದಕ್ಕೆ ಪ್ರಾರಂಭ ಮಾಡುತ್ತಾರೆ. ಮನೆ ಸಿಗುವುದಿಲ್ಲ. ಸಿಕ್ಕಾಪಟ್ಟೆ ಬಾಡಿಗೆ ದುಬಾರಿ. ದುಬಾರಿ ಬಾಡಿಗೆ ಮನೆಗೆ ಹೋದರೆ ಬಾಡಿಗೆಯನ್ನು ಹೊಂದಿಸುವುದು ಹೇಗೆ? ಮನೆ ಎಲ್ಲೂ ಸಿಗಲಿಲ್ಲ. ಕೊನೆಗೊಬ್ಬರು ಸಪ್ತಾಪುರದಲ್ಲಿ ಕಣಬರಗಿ ಮಠ ಅವರ ಕಾಂಪೌಂಡ್‌ನಲ್ಲಿ ಒಂದು ಮನೆ ಖಾಲಿಯಿದೆ ಹೋಗಿ ವಿಚಾರಿಸಿ ಎಂದು ಸಲಹೆಯನ್ನು ಕೊಡುತ್ತಾರೆ. ಅಲ್ಲಿಗೆ ಹೋಗಿ ನೋಡಿದರೆ ಹತ್ತು ಎಕರೆಯಲ್ಲಿರುವ ಏಕೈಕ ಒಂಟಿ ಮನೆ. ವಿಚಾರಿಸಿದಾಗ ಕಲಾವಿದ ಎಂಬ ಕಾರಣಕ್ಕೆ ಮನೆಯನ್ನು 70 ರೂ. ಬಾಡಿಗೆಗೆ ಕೊಡುತ್ತಾರೆ. ಹತ್ತು ಎಕರೆಯಲ್ಲಿ

ಜೋಳ ಬೆಳೆಯುತ್ತಿದ್ದರು. ಅದರ ಮಧ್ಯದಲ್ಲಿ ಈ ಮನೆ. ಜೋಳ ಬೆಳೆದು ನಿಂತರೆ ಮನೇನೆ ಕಾಣುತ್ತಿರಲಿಲ್ಲ. ಆ ಮನೆಯನ್ನು ದೆವ್ವದ ಮನೆ ಅಂತ ಕರೆಯುತ್ತಿದ್ದರಂತೆ. ಯಾರೋ ಸಪ್ತಾಪುರ ಬಾವಿಯಲ್ಲಿ ಬಿದ್ದು ಅಕಾಲ ಮರಣ ಹೊಂದಿ ದೆವ್ವವಾಗಿ ಈ ಕಣಬರಗಿಮಠ ಮನೆಯಲ್ಲಿ ಸೇರಿಕೊಂಡು ಬಿಟ್ಟಿದೆ ಅಂತ ಜನ ಮಾತಾಡಿಕೊಳ್ಳುತ್ತಿದ್ದರು. ಆ ದೆವ್ವದ ಮನೆಯಲ್ಲಿ ಶೀಲಾ ಮತ್ತು ಚಿಕ್ಕ ಚಿಕ್ಕ ಮಕ್ಕಳನ್ನು ಬಿಟ್ಟು ಇವರು ಬೀದರ್ ಜಾಥಾಕ್ಕೆ ಹೊರಟರು. ಆ ಮನೆಯಲ್ಲಿ ಕರೆಂಟು ಬೇರೆ ಇರಲಿಲ್ಲ. ತಿಂಗಳಾನುಗಟ್ಟಲೆ 'ಜಾಥಾ' ನಾಟಕಗಳನ್ನು ಮಾಡಲು ಸ್ವಾಮಿಗಳು ಹೋದಾಗ ಶೀಲಾರವರು ಅನುಭವಿಸಿದ ಸಂಕಟ ದುಃಖ ಅವರಿಗೇ ಗೊತ್ತು. ಈಗಿನಂತೆ ಮೊಬೈಲಾಗಲಿ, ಫೋನಿನ ಸಂಪರ್ಕವಾಗಲಿ ಇರಲಿಲ್ಲ. ಸ್ವಾಮಿಗಳು ಮಾತ್ರ ಪತ್ರ ಬರೆಯುತ್ತಿದ್ದರು. ಶೀಲಾ ಆ ಪತ್ರಕ್ಕೆ ಉತ್ತರವನ್ನು ಬರೆಯಲು ಸಾಧ್ಯವಾಗುತ್ತಿರಲಿಲ್ಲ. ಕಾರಣ ಯಾವ ವಿಳಾಸಕ್ಕೆ ಪತ್ರ ಬರೆಯಬೇಕು. ಸ್ವಾಮಿ ಇಂದು ಒಂದೂರು ನಾಳೆ ಮುಂದ್ಲೂರು ಅಂತ ಸಂಚಾರ. ಜಾಥಾದ ಮಧ್ಯೆ ಒಂದೆರಡು ಸಾರಿ ಬಂದು ಹೋಗಿದ್ದು ಬಿಟ್ಟರೆ, ಸಂಪರ್ಕವೇ ಇರುತ್ತಿರಲಿಲ್ಲ. ಏನೇ ಕಷ್ಟ ಬಂದರೂ ಅದು ಅವರಿಗೆ ಏನೂ ಅನಿಸುತ್ತಿರಲಿಲ್ಲ. ಅದೊಂದು ಬದುಕಿನ ಭಾಗವಾಗಿತ್ತು. ಅವರ ಸುಪ್ತಪ್ರಜ್ಞೆಯಲ್ಲಿ ರಂಗಭೂಮಿಯಲ್ಲಿರಬೇಕಾದರೆ ಅಥವಾ ವೃತ್ತಿಯಾಗಿ ಸ್ವೀಕರಿಸಿದವರು ಉಪವಾಸ ವನವಾಸ ಅನುಭವಿಸಲೇಬೇಕೆಂದು ಅಡಗಿಕೊಂಡಿತ್ತೇನೋ? ಈ ಇಬ್ಬರಿಗೆ ಯಾರೂ ಗಾಡ್‌ಫಾದರ್‌ಗಳು ಇರಲಿಲ್ಲ, ಆದರೆ 'ಬದ್ಧತೆ'ಯೇ ಇವರಿಬ್ಬರ ಗಾಡ್‌ಫಾದರ್ ಆಗಿತ್ತು.

ಮುಂದೆ ಗಂಗಾಧರಸ್ವಾಮಿಗಳು ಸಮುದಾಯ ಹೊರತು ಪಡಿಸಿ ಅನೇಕ ಸಂಘಟನೆಗಳೊಂದಿಗೆ ನಾಟಕ ಶಿಬಿರಗಳನ್ನು ಮಾಡುವುದರ ಮೂಲಕ ಯುವ ಸಮುದಾಯವನ್ನು ರಂಗಭೂಮಿಯತ್ತ ಮಾಡುವ ಕಾಯಕವನ್ನು ಮಾಡುತ್ತಿದ್ದರು. ಈ ಕಾರ್ಯದಲ್ಲಿ ಶೀಲಾರವರು ಹಿಂದೇಟು ಹಾಕದೇ ಪತಿಯ ಹೆಜ್ಜೆಯೊಂದಿಗೆ ಹೆಜ್ಜೆ ಹಾಕುತ್ತಿದ್ದರು. ಸ್ವಾಮಿಯವರು ಯಾವುದೇ ಊರಿನಲ್ಲಿ ನಾಟಕ ಶಿಬಿರ ಪ್ರಾರಂಭಿಸಿದರೆ ಆ ಊರಿನಲ್ಲಿ ಸ್ತ್ರೀ ಸಂಘಟನೆಯ ಕೆಲಸವನ್ನು ಶೀಲಾರವರು ಮಾಡುತ್ತಿದ್ದರು. ಶೋಷಣೆ, ದಬ್ಬಾಳಿಕೆಯ ವಿರುದ್ಧ ಸ್ತ್ರೀ ಸಮುದಾಯದಲ್ಲಿ ಜಾಗೃತಿ ಉಂಟುಮಾಡುತ್ತಿದ್ದರು. ನಾಟಕಗಳಲ್ಲಿ ಸ್ತ್ರೀ ಪಾತ್ರವನ್ನು ಅಭಿನಯಿಸುವವರ ಕೊರತೆ ಬಂದಾಗಲೆಲ್ಲಾ ಶೀಲಾರವರೇ ಅಭಿನಯವನ್ನು ಮಾಡುತ್ತಿದ್ದರು. ಚಿಕ್ಕ ಮಗು ಸಮತಾಳನ್ನು ಬೆನ್ನಿಗೆ ಕಟ್ಟಿಕೊಂಡು ನಾಟಕದ ತಾಲೀಮಿನಲ್ಲಿ ಅನೇಕ

ಸಂದರ್ಭಗಳಲ್ಲಿ ಪ್ರದರ್ಶನ ನಾಟಕವನ್ನು ಮಾಡುತ್ತಿದ್ದರು. ಅವರು ಕುಬಿ ಮತ್ತು ಇಯಾಲ ನಾಟಕ ಮಾಡುವಾಗ 'ಸಮತಾ' ಶೀಲಾರವರ ಗರ್ಭದಲ್ಲಿ ಬೆಳೆಯುತ್ತಿದ್ದಳು. ಗರ್ಭದಿಂದಾಚೆ ಬಂದ ಮೇಲೆ ತಾಯಿಯ ಬೆನ್ನೇರಿ ಅಂಟಿಕೊಂಡು ಬಿಡುತ್ತಿದ್ದಳು. ನಾನು ಇದನ್ನು ಕಣ್ಣಾರೆ ಕಂಡಿದ್ದೇನೆ. ದಾವಣಗೆರೆಯಲ್ಲಿ ಸ್ವಾಮಿಯವರು 'ಮೆರವಣಿಗೆ' ನಾಟಕವನ್ನು ಮಾಡಿಸಿದ್ದರು. ಕೊನೆಗೆ ನಾಟಕದಲ್ಲಿ ಅಭಿನಯಿಸಬೇಕಾಗಿದ್ದ ನಟಿ ಕೈಕೊಟ್ಟಾಗ ಶೀಲಾರವರು ಆ ಜವಾಬ್ದಾರಿ ಹೊರುತ್ತಾರೆ. ತಾವು ಎಲ್ಲಿಗೋದಲ್ಲಿ ಮಗು ಸಮತಾಳನ್ನು ಜೊತೆಗೆ ಕರೆದುಕೊಂಡು ಹೋಗುತ್ತಿದ್ದರು. ಸಂಘರ್ಷನನ್ನು ತಮ್ಮ ತಾಯಿ ಬಳಿಯಲ್ಲಿ ಬಿಡುತ್ತಿದ್ದರು. ನಾಟಕ ಅಭಿನಯಿಸುವ ಸಂದರ್ಭದಲ್ಲಿ ಮಗುವನ್ನು ಎಲ್ಲಿ ಬಿಡೋದು. ಯಾರು ನೋಡಿಕೊಳ್ಳುತ್ತಾರೆ. ನೋಡಿಕೊಳ್ಳುತ್ತಾರೆ ಅಂದರೂ ಸಮತಾ ಹಠ ಮಾಡುತ್ತಿದ್ದಳು. ಸರಿ ಏನು ಮಾಡುತ್ತಾರೆ ಅಂದರೆ ಮಗುವನ್ನು ಬೆನ್ನಿಗೆ ಕಟ್ಟಿಕೊಂಡು ನಾಟಕದಲ್ಲಿ ಅಭಿನಯಿಸುತ್ತಿದ್ದರು. ಇದು ಇವರ ಬದ್ಧತೆ. ಈ ಇಬ್ಬರೂ ರಂಗಭೂಮಿಯ ಬದ್ಧತೆಗಾಗಿ ಇಡೀ ಜೀವಮಾನವನ್ನೇ ಮುಡುಪಾಗಿಟ್ಟವರು. ಈಗಲೂ ಸಹ ರಂಗಭೂಮಿಯ ಕಾಯಕವನ್ನು ಬಿಟ್ಟು ಬೇರ್‍ಯಾವ ಕೆಲಸವೂ ಈ ದಂಪತಿಗಳಿಗೆ ಗೊತ್ತಿಲ್ಲ.

**'ಸಮುದಾಯ'ದ ಜಾಥಾಗಳು**

ಸಮುದಾಯದ ಸಂಘಟನೆಯು ಸಮಾಜಮುಖಿಯಾಗಿ ಕೆಲಸ ಮಾಡುವುದನ್ನು ಕಂಡು ಸಾವಿರಾರು ಕಾರ್ಯಕರ್ತರು ಆಕರ್ಷಿತರಾಗಿ ಸಮುದಾಯದ ಕಡೆಗೆ ಬಂದರು. ಸಮುದಾಯದ ಧ್ಯೇಯ ವಾಕ್ಯ 'ಕಲೆ ಕಲೆಗಾಗಿ ಅಲ್ಲ ಸಮಾಜಕ್ಕಾಗಿ' ಅಕ್ಷರಶಃ ಬಳಸಿಕೊಂಡಿದ್ದು ತನ್ನ 'ಜಾಥಾ'ಗಳನ್ನು ಸಂಘಟಿಸುವುದರ ಮೂಲಕ. ಇಡೀ ಕರ್ನಾಟಕದಲ್ಲಿ ಜಾಥಾಗಳ ಮೂಲಕ ಸಾಂಸ್ಕೃತಿಕ ಸಂಚಲವನ್ನುಂಟುಮಾಡಿತು. ಜನರ ಆಲೋಚನಾ ಕ್ರಮವನ್ನು ಬದಲಾಯಿಸಿತು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಶೋಷಣೆ, ಅಸಮಾನತೆ, ಅಸಹಿಷ್ಣುತೆ, ರಾಜಕೀಯ ಅಸ್ಥಿರತೆಗಳ ಮೇಲೆ ಸಮುದಾಯದ ಜಾಥಾಗಳು ಚಾಟಿಯೇಟು ಬೀಸಿತ್ತು. ಹೆಚ್ಚಾಗಿ ಯುವಕರನ್ನು ಆಕರ್ಷಿಸಿತ್ತು. ಜಾತ್ಯಾತೀತ, ಪ್ರಗತಿಪರ ಒಲವುಗಳನ್ನು ಯುವಕರಲ್ಲಿ ಬೆಳೆಸಿತ್ತು. ರಂಗಭೂಮಿಯ ಮುಖೇನ ಜನಸಮುದಾಯದಲ್ಲಿ ಜಾಗೃತಿಯನ್ನುಂಟು ಮಾಡುವುದು ಮುಖ್ಯ ಉದ್ದೇಶವಾಗಿತ್ತು. ಈ ಜಾಥಾಗಳಿಂದ ಕರ್ನಾಟಕದಲ್ಲಿ ರಂಗಭೂಮಿಯ ಶಕ್ತಿ ಸಾಮರ್ಥ್ಯಕ್ಕೆ ಹೊಸ ಆಖ್ಯಾನ ಬಂತು. ಅಂದು ಸಮುದಾಯದ ಸಂಘಟನೆಗೆ

ಬಂದಂತವರೇ ಇಂದಿನ ಕನ್ನಡ ರಂಗಭೂಮಿಯಲ್ಲಿ ನಟನಟಿಯರಾಗಿ, ನಿರ್ದೇಶಕ, ಸಂಘಟಕ, ನೇಪಥ್ಯಗಾರರಾಗಿ ಬದ್ಧತೆಯಿಂದ ಕೆಲಸ ಮಾಡುತ್ತಿರುವುದು ಹೆಗ್ಗಳಿಕೆಯ ಮಾತು. ಕನ್ನಡ ರಂಗಭೂಮಿಯ ಮುಂಚೂಣಿಯಲ್ಲಿರುವ ಅನೇಕ ಮಹನೀಯರು ಒಂದಲ್ಲ ಒಂದು ರೀತಿಯಲ್ಲಿ ಸಮುದಾಯದ ಸಂಪರ್ಕಕ್ಕೆ ಬಂದವರೇ ಆಗಿರುತ್ತಾರೆ. ಇವರುಗಳು ಅಭಿನಯಿಸುವ ಅಥವಾ ಸಂಘಟನೆಯ ನಾಟಕದ ಆಯ್ಕೆ ಮತ್ತು ಪ್ರದರ್ಶನದ ಹಿನ್ನೆಲೆಯಲ್ಲಿ ಒಂದು ಸ್ಪಷ್ಟ ಉದ್ದೇಶವನ್ನು ಕಾಣಬಹುದು. ಹೀಗಾಗಿ ಸಮುದಾಯಗಳು ಆಯೋಜಿಸಿದ ಜಾಥಾಗಳು ಕನ್ನಡ ರಂಗಭೂಮಿಯಲ್ಲಿ ಮಹತ್ವದ ತಿರುವನ್ನು ನೀಡಿತ್ತು. ಇದು ಐತಿಹಾಸಿಕವಾಗಿ ದಾಖಲಿಸಬಹುದಾದ ಸಂಗತಿ.

'ಹೊಸ ಮೌಲ್ಯದತ್ತ ಸಮುದಾಯ ಸಾಂಸ್ಕೃತಿಕ ಜಾಗೃತಿ' ಪ್ರಾರಂಭ ವಾಯಿತು. ಬೀದರ್‌ನಿಂದ ಒಂದು ತಂಡ. ಇನ್ನೊಂದು ಕೋಲಾರದಿಂದ ಪ್ರಾರಂಭವಾಯಿತು. ಧಾರವಾಡದಲ್ಲಿ ಸಮಾವೇಶವನ್ನು ಮಾಡಿತ್ತು. ಈ ಜಾಥಾ ತಂಡಗಳು ನಗರ, ಹಳ್ಳಿ ಜಿಲ್ಲೆಗಳಲ್ಲಿ ನಾಟಕಗಳನ್ನು ಪ್ರದರ್ಶನ ಮಾಡುತ್ತ ಬರುತ್ತಿದ್ದವು. ಈ ಜಾಥಾಗಳಿಗೆ ಜನರ ಸ್ಪಂದನೆ ಅದ್ಭುತ. ಬೀದರ್ ತಂಡವನ್ನು ಮುನ್ನಡೆಸಿದ ಪ್ರಮುಖರೆಂದರೆ ಶ್ರೀಯುತರಾದ ಗಂಗಾಧರಸ್ವಾಮಿ, ಸಿಜಿಕೆ, ಬಸವಲಿಂಗಯ್ಯ, ಸನತ್ಕುಮಾರ್ ಮುಂತಾದವರು. ಕೋಲಾರದಿಂದ ಹೊರಟ ತಂಡದ ಪ್ರಮುಖರೆಂದರೆ ಶ್ರೀಯುತರಾದ ಪ್ರಸನ್ನ, ಜನಾರ್ಧನ್ (ಜನ್ನಿ), ಸಿ. ಕೆ. ಗುಂಡಣ್ಣ ಮುಂತಾದವರು.

ಜಾಥಾದಲ್ಲಿ ಬೆಳೆದವರು, ಬೆಲ್ಚಿ, ಭಾಸ್ಕಾ (ಗಣಿ ದುರಂತದ ನಾಟಕ) ಮುಂತಾದ ನಾಟಕಗಳ ಪ್ರದರ್ಶನ. ನಾಟಕದ ಪಾತ್ರ ಮಾಡುವುದು, ಹಾಡು ಹಾಡುವುದು, ಸಂಘಟನೆಯನ್ನು ಮಾಡುವುದು ಸ್ವಾಮಿಯವರ ಕೆಲಸ. ನಾಟಕ ನೋಡಲು ಸಿಕ್ಕಾಪಟ್ಟೆ ಜನ ಸೇರಿದಾಗ ಸಿಜಿಕೆಯವರು ಜನರನ್ನುದ್ದೇಶಿಸಿ ಭಾಷಣವನ್ನು ಮಾಡುತ್ತಿದ್ದರು. ಜನ ಕಮ್ಮಿ ಇದ್ದಾಗ ಗಂಗಾಧರಸ್ವಾಮಿಯವರ ಪಾಲಿಗೆ ಜನರನ್ನುದ್ದೇಶಿಸಿ ಭಾಷಣ ಮಾಡುವ ಅವಕಾಶ ತಾನಾಗಿ ಒದಗಿ ಬರುತ್ತಿತ್ತು. ಆಗ ಸ್ವಾಮಿಗಳು ಜಾಥಾದ ಉದ್ದೇಶ ಜನ ಇಂದಿನ ರಾಜಕೀಯ ಸಂದರ್ಭದಲ್ಲಿ ಹೇಗೆ ಸಂಘಟಿತರಾಗಿ ಕೆಲಸ ಮಾಡಬೇಕೆಂಬುದನ್ನು ಸವಿವರವಾಗಿ ವಿವರಿಸುತ್ತಿದ್ದರು. ಇವರು ಮಾಡುವ ಭಾಷಣದ ತೀವ್ರತೆಯನ್ನು ನಾಟಕಗಳು ಸ್ಪಷ್ಟೀಕರಿಸುತ್ತಿದ್ದವು.

ಜಾಥಾದುದ್ದಕ್ಕೂ ಆಗುತ್ತಿದ್ದ ಅಪಮಾನ, ಅವಮಾನ ಮುಂತಾದ ಅನುಭವಗಳು ಸ್ವಾಮಿಯವರ ಒಳಗಿದ್ದ ನಟ, ಸಂಘಟಕ, ನಿರ್ದೇಶಕನನ್ನು ಮತ್ತಷ್ಟು ಗಟ್ಟಿಗೊಳಿಸಿತ್ತು.

ಜಾಥಾಗಳು ಹಳ್ಳಿಯಲ್ಲಿ ಹೆಚ್ಚಾಗಿ ಪ್ರದರ್ಶನಕ್ಕೆ ಸಹಾಯ ಮಾಡುತ್ತಿದ್ದವರು ಊರ ಗೌಡರು, ಅವರ ಮನೆ ಮುಂದೆಯೇ 'ದೊಡ್ಡ ಗೌಡರ ಬಾಗಿಲಿಗೆ ನಮ್ಮ ಮೂಳೆಯ ತೋರಣ' ಎಂಬ ಹಾಡನ್ನು ಹಾಡುತ್ತಿದ್ದುದು, ನಾಟಕಗಳಲ್ಲಿ ಕಾಂಗ್ರೆಸ್ ನಾಯಕನನ್ನು ಟೀಕಿಸುತ್ತಿದ್ದರೂ ಜಾಥಾಕ್ಕೆ ಕಾಂಗ್ರೆಸ್ ನಾಯಕರು ಬೆಂಬಲವನ್ನು ವ್ಯಕ್ತಪಡಿಸುತ್ತಿದ್ದರು. ಈ ಜಾಥಾದ ಪರಿಣಾಮದಿಂದಾಗಿ ಕರ್ನಾಟಕದಲ್ಲಿ ರಾಜಕೀಯ ಬದಲಾವಣೆ ಸಾಧ್ಯವಾಯಿತು. ಆಗಿನ ಗುಂಡೂರಾವ್‌ರವರ ಸರ್ಕಾರದ ಪತನಕ್ಕೆ ಕಾರಣವಾಗಿತ್ತೆಂದು ರಾಜಕೀಯ ವಿಮರ್ಶಕರು ವಿಶ್ಲೇಷಣೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ಸಮುದಾಯ ತನ್ನ ಧ್ಯೇಯ ವಾಕ್ಯವಾದ 'ಕಲೆ ಕಲೆಗಾಗಿ ಅಲ್ಲ ಕಲೆ ಸಮುದಾಯಕ್ಕಾಗಿ' ಎಂಬುದನ್ನು ಸಾಬೀತು ಪಡಿಸಿಕೊಂಡಿತ್ತು. ಸಮುದಾಯದ ಜಾಥಾದ ಪರಿಣಾಮದಿಂದಾಗಿ ರಾಜ್ಯದಾದ್ಯಂತ ವೈಚಾರಿಕ ಸಂಘಟನೆಗಳು ಹುಟ್ಟಿಕೊಂಡವು. ವೈಚಾರಿಕ ಪ್ರಜ್ಞೆಯನ್ನು ಜನಸಮುದಾಯದಲ್ಲಿ ಬೆಳೆಸಲು ಕಾರಣವಾಯಿತು.

❑

# ರಂಗಶಿಬಿರಗಳ ಹಲವು ಮೊದಲುಗಳ ಮೊದಲಿಗರು

ಇದು ನಾನು ಹೇಳುವ ಮಾತಲ್ಲ ಅಥವಾ ಬಿರುದಲ್ಲ. ಕನ್ನಡ ರಂಗಭೂಮಿಯಲ್ಲಿ ಕೆಲಸ ಮಾಡುವವರೆಲ್ಲ ಪ್ರೀತಿಯಿಂದ ಕರೆದ ಬಿರುದು. ನಮ್ಮಲ್ಲಿ ಹಲವರು ಏನೇ ಮಾಡಿದರೂ ಅದಕ್ಕೊಂದು 'ಪ್ರಚಾರ' ಸಿಕ್ಕುವಂತೆ ಮಾಡಿಕೊಳ್ಳುವುದು ಅಘೋಷಿತ ಸಿದ್ಧಾಂತ. ಆದರೆ ನಮ್ಮ ಸ್ವಾಮಿಗಳು ಮಾಡಿದ ಕೆಲಸ ನಮ್ಮ ರಂಗಭೂಮಿಯ ಅನೇಕ ದಿಗ್ಗಜರಿಗೆ ತಿಳಿದೇ ಇಲ್ಲ ಎಂದರೂ ನನ್ನ ಮಾತು ತಪ್ಪಾಗಲಾರದು. ಸದ್ದುಪದ್ದು ಇಲ್ಲದೇ ಸಾಧನೆ ಮಾಡಿದ ಸಾಧಕರು ಇವರು.

ರಂಗಭೂಮಿ ಕರ್ನಾಟಕದ ಮಹಾ ನಗರಗಳಲ್ಲಿ ಕೇಂದ್ರೀಕೃತವಾಗಿದ್ದ ಕಾಲದಲ್ಲಿ, ಮಹಾನಗರಗಳಲ್ಲಿ ನಾಟಕವನ್ನು ಮಾಡಿಸುವುದು ಅಷ್ಟೊಂದು ತ್ರಾಸದಾಯಕವಾದ ಸ್ಥಿತಿಯಾಗಿರಲಿಲ್ಲ. ನಗರಗಳಲ್ಲಿ ಎಲ್ಲಾ ಲಭ್ಯವಾಗುತ್ತಿತ್ತು. ಹೀಗಾಗಿ ನಮ್ಮ ಹೆಸರಾಂತ ನಿರ್ದೇಶಕರು ತಮ್ಮ ನಾಟಕಗಳನ್ನು ಹೆಚ್ಚಾಗಿ ನಿರ್ದೇಶನವನ್ನು ಮಾಡುತ್ತಿದ್ದುದು ಮಹಾನಗರಗಳಲ್ಲಿ ಅಥವಾ ಎಲ್ಲಾ ಸುಲಭವಾಗಿ ಸಿಗಬಹುದಾದಂತ ಊರುಗಳಲ್ಲಿ. ಆದರೆ ನಮ್ಮ ಸ್ವಾಮಿಯವರು ಹೆಗಲಿಗೆ ಚೀಲ ಹಾಕಿಕೊಂಡು ಹೊರಟಿದ್ದು ಏನೂ ಸಿಗದಿದ್ದ ಊರುಗಳಿಗೆ, ಹಳ್ಳಿಗಳಿಗೆ. ಆಧುನಿಕ ನಾಟಕಗಳ, ವೈಚಾರಿಕ ನಾಟಕದ ಗಂಧಗಾಳಿ ಗೊತ್ತಿರದ ಪ್ರದೇಶಗಳಿಗೆ.

ಸಮುದಾಯದ ಮೊದಲ ಪೂರ್ಣಾವಧಿ ಕಾರ್ಯಕರ್ತರು ಇವರು. ನಾಟಕ ಮಾಡಿಸಲು ಬೇಕಾದ್ದೆಲ್ಲ ಸಿಕ್ಕ ಕಡೆ ನಾಟಕವನ್ನು ಮಾಡಿಸುವುದು, ಸೈ ಅನ್ನಿಸಿಕೊಳ್ಳುವುದು ಬಹಳ ಸುಲಭ. ಏನೂ ಇಲ್ಲದ ಕಡೆ ನಾಟಕ ಮಾಡಿಸುವುದು ಇದೆಯಲ್ಲ ಅದು ದೊಡ್ಡ ಕೆಲಸ ಎಂದು ನನ್ನ ಭಾವನೆ. ಏನೂ ಇಲ್ಲದ ಕಡೆಯಲ್ಲಿ ನಾಟಕ ಮಾಡಿಸುವುದರಲ್ಲಿ ಯಾವಾಗಲೂ ನಮ್ಮ ಸ್ವಾಮಿಗಳು ಸದಾ ಮುಂದಡಿಯನ್ನಿಡುತ್ತಿದ್ದರು.

ಸಂಘಟನೆ ಇಲ್ಲವಾ? ಇವರು ಹೋದೆಡೆಯಲ್ಲಿ ವೈಚಾರಿಕ ಮನೋಭಾವದವರನ್ನು ಸೇರಿಕೊಂಡು, ಎಡಪಂಥೀಯ ಒಲವುಳ್ಳವರನ್ನು ಒಗ್ಗೂಡಿಸಿ ಸಂಘಟನೆಯನ್ನು ಮಾಡುತ್ತಿದ್ದರು. ದಿನನಿತ್ಯ ಎಲ್ಲರನ್ನೂ ಸೇರಿಸಿ ನಾವು ಯಾಕೆ ಸಂಘಟನೆಯನ್ನು ಕಾಪಾಡಿಕೊಳ್ಳಬೇಕು. ಸಂಘಟನೆಗಳು ಯಾಕೆ

ಸಮಾಜಕ್ಕೆ ಮುಖ್ಯ. ಸಮಾಜಕ್ಕಾಗಿ ಸಂಘಟನೆಗಳು ಹೇಗೆ ಕೆಲಸ ಮಾಡಬೇಕು? ಎಂಬುದನ್ನು ಚರ್ಚಿಸುತ್ತಾ ವಿಚಾರ ಕಮ್ಮಟಗಳನ್ನು ಏರ್ಪಡಿಸುತ್ತಾ ವ್ಯಕ್ತಿಯನ್ನು ಸಮಾಜಮುಖಿಯಾಗಿ ಮಾಡುತ್ತಿದ್ದರು. ಹೀಗಾಗಿ ಇವರು ಪ್ರಾರಂಭಿಸಿದ ಅನೇಕ ಸಂಘಟನೆಗಳು ರಂಗಭೂಮಿಯಲ್ಲಿ ಕೆಲಸ ಮಾಡುತ್ತಿವೆ. ವೈಚಾರಿಕ ಯಾತ್ರೆಯಲ್ಲಿ ಪಾಲ್ಗೊಳ್ಳುತ್ತಿವೆ.

ನಟ-ನಟಿಯರು ಇಲ್ಲವಾ? ಸ್ವಾಮಿಗಳು ನಿರ್ದೇಶನ ಮಾಡುವ ನಾಟಕಗಳಲ್ಲಿ ಅರಿತ ನಟರಾಗಲಿ ನುರಿತ ನಟರಾಗಲಿ ಬೇಕಾಗಿರಲಿಲ್ಲ. ಆಸಕ್ತಿಯಿರುವ ವ್ಯಕ್ತಿಗಳು ಜೊತೆಗೂಡಿ ಬಂದರೆ ಸಾಕು. ಅವರಿಗೆ ಅಭಿನಯದ ಪಾಠಗಳನ್ನು ಹೇಳಿಕೊಡುತ್ತಾ, ಅವರಲ್ಲಿರುವ ಕೀಳರಿಮೆ ಹೋಗಲಾಡಿಸುತ್ತಾ, ಅವರಲ್ಲಿ ರಂಗಭೂಮಿಯ ಬಗ್ಗೆ ಪ್ರೀತಿಯನ್ನು ಹುಟ್ಟಿಸುತ್ತಾ ಒಗ್ಗೂಡಿ ಕೆಲಸ ಮಾಡುವ ಸಿದ್ಧಾಂತಗಳನ್ನು ಹೇಳಿಕೊಡುತ್ತಾ ನಾಟಕದಲ್ಲಿ ಭಾಗವಹಿಸುವಂತೆ ಮಾಡುತ್ತಿದ್ದರು. ಇದರಿಂದಾಗಿ ನಟ ನಟಿಯರಲ್ಲಿ ರಂಗಭೂಮಿ ಒಂದು 'ಬದ್ಧತೆ' ಯಾಗಿ ರೂಪುಗೊಳ್ಳುತ್ತಿತ್ತು. ಇವರ ನಾಟಕಗಳಿಂದ ರಂಗಪ್ರವೇಶವನ್ನು ಪಡೆದುಕೊಂಡವರು ಇಂದು ಕೂಡ ರಂಗಕಾಯಕವನ್ನು ಮಾಡುತ್ತಾರೆ, ಪ್ರೀತಿಸುತ್ತಾರೆ ಅಷ್ಟೇ ಅಲ್ಲ ಅನೇಕರು ಸಂಘಟನೆ, ನಟ, ನಟಿ, ನಾಟಕಕಾರ, ನೇಪಥ್ಯಗಾರರಾಗಿದ್ದಾರೆ.

ಒಂದು ವೇಳೆ ನಾಟಕ ಮಾಡಿಸಲು ಹೋದಲ್ಲಿ ನಟರು ಅಥವಾ ಆಸಕ್ತಿಯಿರುವ ವ್ಯಕ್ತಿಗಳು ಸಿಗಲಿಲ್ಲವೇ, ಇವರೇ ಅನೇಕರನ್ನು ಪರಿಚಯ ಮಾಡಿಕೊಂಡು, ಅವರ ಮನೆಗಳಿಗೆ ಆಕಸ್ಮಿಕ ಭೇಟಿಯನ್ನು ಕೊಟ್ಟು, ಅವರ ಮನೆಯಲ್ಲಿ ಚಾ, ಪಾನೀ ಕುಡಿದು ಊಟ ಮಾಡಿ ಅವರಲ್ಲಿ ರಂಗಭೂಮಿ ಬಗ್ಗೆ ಪ್ರೀತಿಯನ್ನು ಹುಟ್ಟಿಸಿ, ಇದೊಂದು ಉತ್ತಮ ಕೆಲಸ ಎಂಬ ನಂಬಿಕೆಯನ್ನು ಬೆಳೆಸಿ ರಂಗಭೂಮಿಯತ್ತ ಕರೆ ತಂದು ನಾಟಕವನ್ನು ಮಾಡಿಸುತ್ತಿದ್ದರು.

ನಾಟಕಗಳಲ್ಲಿ ಅಭಿನಯಿಸಲು ನಟಿಯರ ಕೊರತೆ ಇಂದಿಗೂ ಇದ್ದೇ ಇದೆ. ನಗರ ಪ್ರದೇಶಗಳಲ್ಲಿ ಈ ಸಮಸ್ಯೆ ಇನ್ನೂ ಅಗಾಧವಾಗಿದೆ. ಇನ್ನು ರಂಗಭೂಮಿಯೇ ಗೊತ್ತಿರದ ಆ ಕಾಲದಲ್ಲಿ ಹೇಗಿರಬಹುದು, ಊಹಿಸಿಕೊಳ್ಳಲು ಅಸಾಧ್ಯ. ಸಾಮಾನ್ಯವಾಗಿ ವೃತ್ತಿ ನಟಿಯರನ್ನೇ ಆಧುನಿಕ ನಾಟಕಗಳಲ್ಲಿ ಅಭಿನಯಿಸುವಂತೆ ವೀಳ್ಯ ಕೊಟ್ಟು ನಾಟಕಾಭಿನಯವನ್ನು ಮಾಡುತ್ತಿದ್ದರು. ಸ್ವಾಮಿಯವರು ಅಂತ ಪಾಠಕ್ಕೆ ಜೋತು ಬೀಳದೆ ಯಾವುದೇ ಊರಿಗೆ

ಹೋದರೂ ಅಲ್ಲಿಯ ತಮ್ಮ ಸ್ನೇಹಿತರ ಮನೆಯ ಹೆಣ್ಣುಮಕ್ಕಳನ್ನು ರಂಗಭೂಮಿಗೆ ಓಲೈಸಿ ಕರೆತಂದು ನಾಟಕದ ಪ್ರದರ್ಶನಗಳನ್ನು ಮಾಡುತ್ತಿದ್ದರು.

ನೇಪಥ್ಯಗಾರರಿಲ್ಲವೇ? ಸ್ವಾಮಿಯವರು 'ಒನ್ ಮ್ಯಾನ್ ಆರ್ಮಿ' ಅಂತಾರಲ್ಲ ಹಾಗೆ. ನೇಪಥ್ಯದ ಎಲ್ಲಾ ವಿಭಾಗಗಳು ಅವರಿಗೆ ಗೊತ್ತಿದ್ದವು. ಹೀಗಾಗಿ ನಾಟಕದ ತಾಲೀಮು ನಡೆಯುವಾಗಲೇ ನೇಪಥ್ಯ ಕೆಲಸ ಮಾಡಲು ಆಸಕ್ತಿಯಿರುವವರನ್ನು ಗುರುತಿಸಿ ಅವರಿಗೆ ತರಬೇತಿ, ಮಾಹಿತಿ ನೀಡಿ ಪ್ರದರ್ಶನಕ್ಕೆ ಸಜ್ಜುಗೊಳಿಸುತ್ತಿದ್ದರು. ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳಿಗೆ ಸ್ವಾಮಿಯವರು ಅವಕಾಶ ಮಾಡಿಕೊಟ್ಟು ನಾಟಕದಲ್ಲಿ ಮತ್ತು ಸಂಘಟನೆಯಲ್ಲಿ ಉಳಿಯುವಂತೆ ಮಾಡುತ್ತಿದ್ದರು. ನುರಿತ, ಪರಿಣಿತ, ವೃತ್ತಿಪರ ನೇಪಥ್ಯಗಾರರು ನನ್ನ ನಾಟಕಕ್ಕೆ ಬೇಕೆ ಬೇಕು ಎಂದು ಹಠ ಹಿಡಿದವರಲ್ಲ, ಸಂಘಟಕರೊಂದಿಗೆ ಮುನಿಸಿಕೊಂಡು ಧರಣಿ ಕೂತವರಲ್ಲ. ಅವರ ಮನೋಭಾವದಲ್ಲಿ ಹೊಂದಾಣಿಕೆ ಪ್ರಧಾನವಾಗಿರುತ್ತದೆ. ಹಾಗೆ ರಂಗಭೂಮಿಯ ಹೊಂದಾಣಿಕೆ ಮೂಲಕವೇ ಮುನ್ನಡೆಯುವಂತದ್ದು. ಅಲ್ಲವೇ?

ನಾಟಕ ಮಾಡಿಸಲು ಹಣವಿಲ್ಲವೇ? ಚಿಂತೆಯಿಲ್ಲ, ಬರಿಗೈ ಸಂತನಿಗೆ ಚಿಂತೆ ಯಾಕೆ? ನಾಟಕದ ತಾಲೀಮು ಮುಗಿಸಿಕೊಂಡು ಸ್ನೇಹಿತರನ್ನೂ ಕಟ್ಟಿಕೊಂಡು ಊರಿನಲ್ಲಿರುವ ಆಸಕ್ತರನ್ನು ಗುರುತಿಸಿಕೊಂಡು ಅವರ ಬಳಿಯಲ್ಲಿ ಹೋಗಿ 'ಚಂದಾ' ಎತ್ತಿ, ಮುಂಗಡ ಟಿಕೇಟು ಮಾರಿ ನಾಟಕವನ್ನು ಅಭಿನಯಿಸಿ, ತಂಡಕ್ಕೆ ನಷ್ಟವಾಗದ ಹಾಗೆ ನಾಟಕದ ಪ್ರಕ್ರಿಯೆಯನ್ನು ಜನರಿಗೆ ಮುಟ್ಟಿಸುತ್ತಿದ್ದರು.

❑

# ರಂಗತಂಡಗಳ ಉಗಮಕ್ಕೆ ಅಡಿಪಾಯ

ರಾಜ್ಯದ ಸಮುದಾಯ ತಂಡಗಳಿಗೆ: ಬೆಂಗಳೂರು ಸಮುದಾಯಕ್ಕೆ – ಕೊಂದು ಕೂಗಿತ್ತು ನೋಡಾ; ತುಮಕೂರು – ಮೆರವಣಿಗೆ, ಬೆಳೆದವರು, ಚಿಕ್ಕದೇವಭೂಪ; ಕುಂದಾಪುರ ಮತ್ತು ಮೈಸೂರು – ಮೆರವಣಿಗೆ; ದಾವಣಗೆರೆ – ಚಿಕ್ಕದೇವಭೂಪ, ಮೆರವಣಿಗೆ; ಕುಷ್ಟಗಿ – ದೊಡ್ಡಪ್ಪ; ಸಿಂಧನೂರು – ಷಾಪುರದ ಶೀನಿಂಗಿ ಸತ್ಯ; ರಾಯಚೂರು – ಕತ್ತಲೆ ದಾರಿ ದೂರ, ಹುತ್ತವ ಬಡಿದರೆ, ಚಿಕ್ಕದೇವಭೂಪ; ಕುಲಬರ್ಗಿ – ಕತ್ತಲೆ ದಾರಿ ದೂರ, ಹೊಸಪೇಟೆ – ಕತ್ತಲೆ ದಾರಿ ದೂರ, ಬೆಲ್ಚಿ; ಗಂಗಾವತಿ – ಬೆಲ್ಚಿ; ಧಾರವಾಡ – ಬೆಳೆದವರು, ಪಂಚಮ, ಕತ್ತಲೆ ದಾರಿ ದೂರ, ಬೆಲ್ಚಿ, ಮುಂತಾಗಿ....

ಸಮುದಾಯಗಳನ್ನು ಹೊರತು ಪಡಿಸಿ ರಾಜ್ಯದ ಅನೇಕ ರಂಗತಂಡಗಳ ಉಗಮಕ್ಕೆ ಸ್ವಾಮಿಗಳು ಅಡಿಪಾಯ ಹಾಕಿರುವುದಲ್ಲದೆ ರಂಗತರಬೇತಿ ಶಿಬಿರಗಳನ್ನು ನಡೆಸಿದ್ದಾರೆ. ನಾಟಕಗಳನ್ನು ನಿರ್ದೇಶನ ಮಾಡಿದ್ದಾರೆ. ಅವುಗಳ ಒಂದು ಪಕ್ಷಿನೋಟ ನಿಮ್ಮ ಮುಂದೆ ಇಡುತ್ತೇನೆ.

ಬಾಗಲಕೋಟೆಯ ಸೃಜನವೇದಿಕೆ ತಂಡಕ್ಕೆ ದೊಡ್ಡಪ್ಪ, ರಂಗಾಪುರದ ರಾಮಾಯಣ; ಇಳಲ್‌ನ ಸ್ನೇಹರಂಗ ತಂಡಕ್ಕೆ ಹಾವು ತುಳಿದೇನ ಮಾನಿನಿ; ಸಿಂದಗಿಯ ಗೆಳೆಯರ ಬಳಗ ತಂಡಕ್ಕೆ ಚೋರ ಚರಣದಾಸ, ಮೆರವಣಿಗೆ; ಹೊಸಪೇಟೆಯ ಮಾಧ್ಯಮ ತಂಡಕ್ಕೆ ನಾವು, ಚೋರಚರಣದಾಸ; ಗದಗಿನ ಮರಾಠಿ ವಾಗ್ಮೀಯ ಮಂಡಳಿ ತಂಡಕ್ಕೆ ಚೋರ ಚರಣದಾಸ; ಚಿಗಟೇರಿಯ ನಾರದಮುನಿ ಕಲಾಸಂಘಕ್ಕೆ ದೊಡ್ಡಪ್ಪ; ಮರಿಯಮ್ಮನ ಹಳ್ಳಿ ಕಲಾವಿದರ ತಂಡಕ್ಕೆ ಬೆನಕನ ಕೆರೆ, ಅಜ್ಞಾತ ಪರ್ವ; ಹರಪನಹಳ್ಳಿಯಲ್ಲಿ ಕುರಿ; ಮೈಸೂರಿನ ಅಮರಕಲಾ ಸಂಘಕ್ಕೆ ಗೌತಮಬುದ್ಧ, ಜೈಸಿದನಾಯಕ; ರಂಗನಿರಂತರ ತಂಡಕ್ಕೆ ಮೆರವಣಿಗೆ; ಜೆ. ಎಸ್. ಎಸ್. ಕಲಾಮಂಟಪಕ್ಕೆ ದಿವ್ಯಚೇತನ, ಮೃಚ್ಛಕಟಿಕ; ಕಿನಾರ (ಕಿರಿಯರ ನಾಟಕ ರಂಗಕ್ಕೆ) ಅಂದು ಇಂದು ಎಂದೆಂದೂ; ಸುರುಚಿ ರಂಗತಂಡಕ್ಕೆ ಗಟ್ಟಿಗಿತ್ತಿ; ಮಂಡ್ಯದ ಜನದನಿ ತಂಡಕ್ಕೆ ಪಾದುಕಾ ಕಿರೀಟಿ; ಹೆಗ್ಗೋಡಿನ ನೀನಾಸಂ ತಂಡಕ್ಕೆ ಕತ್ತಲೆ ದಾರಿ ದೂರ. ಸಾಣೇಹಳ್ಳಿಯ ಶಿವಸಂಚಾರ ತಂಡಕ್ಕೆ ಚಿಕ್ಕದೇವಭೂಪ; ಹೊನ್ನಾವರದ ಕಲಾತಂಡಕ್ಕೆ ತುಟಿಯುಬ್ಬಿಸಿ ಶಿಳ್ಳೆಹಾಕು;

ಚಾಮರಾಜನಗರ ಶಾಂತಲಾ ಕಲಾವಿದರು ತಂಡಕ್ಕೆ ಅರಹಂತ; ಮಂಡ್ಯದ ಸದ್ವಿದ್ಯಾ ಶಾಲೆಗೆ ಜಲಗಾರ – ಹೀಗೆ ಬೆಳೆಯುತ್ತಾ ಹೋಗುತ್ತದೆ ಇವರ ನಿರ್ದೇಶನದ ಪಟ್ಟಿ. ಇನ್ನು ನೂರಾರು ಬೀದಿ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಎಷ್ಟು ಬೀದಿನಾಟಕಗಳನ್ನು ನಿರ್ದೇಶನ ಮಾಡಿದ್ದಾರೆ ಎಷ್ಟು ಬೀದಿ ನಾಟಕಗಳಲ್ಲಿ ಅಭಿನಯಿಸಿದ್ದಾರೆ ಎಂಬುದು ಅವರಿಗೇ ಗೊತ್ತಿಲ್ಲ.

ಮೇಲಿನ ಪಕ್ಷಿನೋಟದ ಪಟ್ಟಿಯನ್ನು ನೋಡಿದರೆ ಒಂದು ವಿಷಯವಂತೂ ಸ್ಪಷ್ಟವಾಗುತ್ತದೆ. ಬೀದರ್‌ನಿಂದ ಚಾಮರಾಜನಗರದ ತನಕ, ಗದಗಿನಿಂದ ಹೊನ್ನಾವರದವರೆಗೆ ಕರ್ನಾಟಕವನ್ನು ಇಷ್ಟೊಂದು ಸುತ್ತಾಡಿ ನಾಟಕ ನಿರ್ದೇಶನ ಮಾಡುತ್ತಾ ರಂಗಕಾಯಕವನ್ನು ಮಾಡಿದ ನಿಷ್ಠಾವಂತ ರಂಗಕರ್ಮಿ ಬೇರೊಬ್ಬರು ಇಲ್ಲ.

ಗಂಗಾಧರಸ್ವಾಮಿಗಳಿಗೆ ಯಾವಾಗಲೂ ಯುವಕರು ರಂಗಭೂಮಿಗೆ ಬರಬೇಕು, ಯುವಕರು ರಂಗಭೂಮಿಗೆ ಬಂದರೆ ಮಾತ್ರ ನಮ್ಮ ರಂಗಭೂಮಿ ಹೆಚ್ಚು ಕ್ರಿಯಾಶೀಲವಾಗಿರುವುದಕ್ಕೆ ಸಾಧ್ಯವೆಂಬ ಅಭಿಲಾಷೆ ಇತ್ತು. ಅದಕ್ಕಾಗಿ ಸ್ವಪ್ರಯತ್ನದಿಂದ ತಾವು ರಂಗಶಿಬಿರದ ನಿರ್ದೇಶಕರಾಗಿ ಹೋದೆಡೆಯಲ್ಲಿ ಕಾಲೇಜುಗಳ ಪ್ರಾಂಶುಪಾಲರನ್ನು ಸಂಪರ್ಕ ಮಾಡಿ ವಿದ್ಯಾರ್ಥಿಗಳಿಗಾಗಿ ರಂಗತರಬೇತಿ ಶಿಬಿರಗಳನ್ನು ಕಾಲೇಜುಗಳಲ್ಲಿ ಮಾಡುತ್ತಿದ್ದರು.

ಈ ದೀರ್ಘಕಾಲದ ರಂಗಪಯಣದಲ್ಲಿ ಸ್ವಾಮಿಗಳು ಅನೇಕ ಹೊಸ ಪ್ರಯತ್ನದಲ್ಲಿ ಇವರು ಮೊದಲಿಗರಾಗಿದ್ದಾರೆ. ಅದರ ಒಂದು ಜಲಕ್ ನಿಮ್ಮ ಮುಂದೆ ತರುತ್ತೇನೆ.

ಅ. **ಬೆಂಗಳೂರು ವಿಶ್ವವಿದ್ಯಾಲಯ ಪ್ರಾರಂಭ ಮಾಡಿದ ಡ್ರಾಮಾ ಸ್ಕೂಲಿನ ಮೊದಲ ಬ್ಯಾಚಿನ ಮೊದಲ ವಿದ್ಯಾರ್ಥಿ.**

- ರಾಜ್ಯ ಸಮುದಾಯ ಸಾಂಸ್ಕೃತಿಕ ಸಂಘಟನೆಯ ಮೊದಲ ಪೂರ್ಣಾವಧಿ ಕಾರ್ಯಕರ್ತ.

- ಶ್ರೀರಂಗರು ನಡೆಸಿದ 'ರಂಗ ಕಾರ್ಯಾಗಾರ' ಕಾರ್ಯಾಗಾರಗಳ ನಂತರದಲ್ಲಿ ಉತ್ತರ ಕರ್ನಾಟಕದಲ್ಲಿ ಪೂರ್ಣಾವಧಿ ರಂಗಕಾರ್ಯಾಗಾರಗಳನ್ನು ನಡೆಸಿ ಶಿಬಿರಾರ್ಥಿಗಳಿಗೆ ನಾಟಕವನ್ನು ನಿರ್ದೇಶನ ಮಾಡಿದವರಲ್ಲಿ ಇವರೇ ಮೊದಲಿಗರು.

- ಇವರ ಸಮಕಾಲೀನರಿಗೆ ಬೇರೆ ವೃತ್ತಿ ಇದ್ದು, ಆಧುನಿಕ ರಂಗಭೂಮಿಯಲ್ಲಿ ಕೆಲಸ ಮಾಡುತ್ತಿದ್ದರು. ಒಂದು ರೀತಿಯಲ್ಲಿ ಅರೆವೃತ್ತಿಯಾಗಿ ಸ್ವೀಕಾರ ಮಾಡಿಕೊಂಡು ರಂಗಪಯಣದಲ್ಲಿ ಬಂದವರುಂಟು. ಆದರೆ ಆಧುನಿಕ ರಂಗಭೂಮಿಯ ಕಾಯಕವನ್ನು ವೃತ್ತಿಯಾಗಿ ಸ್ವೀಕಾರ ಮಾಡಿಕೊಂಡು ನಿರಂತರವಾಗಿ ವಿಮುಖರಾಗದೇ ದುಡಿದವರಲ್ಲಿ ಇವರೇ ಮೊದಲಿಗರು.

- ಆದರ್ಶ ಫಿಲಂ ಇನ್‌ಸ್ಟಿಟ್ಯೂಟ್‌ನಲ್ಲಿ ಅಭಿನಯದ ಪ್ರಾಧ್ಯಾಪಕರಾಗಿದ್ದಾಗ, ಸಿನಿಮಾ ಕಲಿಯುವ ವಿದ್ಯಾರ್ಥಿಗಳು ನಾಟಕವನ್ನು ಕಲಿಯಲೇಬೇಕೆಂದು, ವಿದ್ಯಾರ್ಥಿಗಳಿಗೆ ನಾಟಕದಲ್ಲಿ ಅಭಿನಯಿಸಲು ಅವಕಾಶ ಮಾಡಿಕೊಟ್ಟ ಮೊದಲಿಗರು.

- ಮೊಟ್ಟ ಮೊದಲ ಮಹಿಳಾ ರಂಗ ತರಬೇತಿ ಶಿಬಿರ

- ಆಧುನಿಕ ರಂಗಭೂಮಿಗೆ ಮಹಿಳೆಯರ ಆಗಮನ ಈಗಲೂ ಅಷ್ಟಕ್ಕಷ್ಟೇ. ಆ ಸಂದರ್ಭದಲ್ಲಿ ಹೇಗಿರಬಹುದು ಊಹಿಸಿಕೊಳ್ಳಲೂ ಅಸಾಧ್ಯ. ಆ ಸಂದರ್ಭದಲ್ಲಿ ಹಗರಿಬೊಮ್ಮನಹಳ್ಳಿಯಲ್ಲಿ ಮಹಿಳೆಯರಿಗಾಗಿ ರಂಗ ತರಬೇತಿ ಶಿಬರವನ್ನು ಆಯೋಜನೆ ಮಾಡುತ್ತಾರೆ. ಇದರಲ್ಲಿ ಶಾಲಾ ಅಧ್ಯಾಪಕಿಯರು, ವೃತ್ತಿ ನಿರತ ಕಲಾವಿದೆಯರು, ಮತ್ತು ಹವ್ಯಾಸಿಗಳು ಭಾಗವಹಿಸುತ್ತಾರೆ. ಶಿಬಿರ ಯಶಸ್ವಿಯಾಗಿ ನಡೆಯುತ್ತದೆ. ಅಂತ್ಯದಲ್ಲಿ 'ಅಜ್ಞಾತ ಪರ್ವ' ಎಂಬ ನಾಟಕ ಪ್ರದರ್ಶನವನ್ನು ಮಾಡುತ್ತಾರೆ. ಮಹಿಳಾ ಕಲಾವಿದೆಯರಿಗಾಗಿ ರಂಗ ಕಾರ್ಯಾಗಾರವನ್ನು ನಡೆಸಿದ ಮೊದಲಿಗರು ಇವರು.

- ದೊಡ್ಡಾಟವನ್ನು ಆಧುನಿಕ ರಂಗಭೂಮಿಗೆ ತಂದ ಮೊದಲಿಗರು.

ಕನ್ನಡ ರಂಗಭೂಮಿಯಲ್ಲಿ ಜಾನಪದ ಪ್ರಕಾರಗಳನ್ನು ಆಧುನಿಕ ರಂಗಭೂಮಿಗೆ ಅಳವಡಿಸಿಕೊಂಡು ನಾಟಕಗಳನ್ನು ಕಟ್ಟುವ ಒಂದು ಶಕೆ ಪ್ರಾರಂಭವಾಯಿತು. ಬಹುಶಃ ಇದಕ್ಕೆ ಮೊದಲಿಗರು ಶ್ರೀ ಬಿ. ವಿ. ಕಾರಂತರೇ ಮೊದಲಿಗರು ಎಂದರೆ ತಪ್ಪಾಗಲಾರದು. ದೊಡ್ಡಾಟವು ಯಕ್ಷಗಾನದ ಒಂದು ಪ್ರಕಾರ. ಕರಾವಳಿಯಲ್ಲಿ ಬುದ್ಧಿವಂತ ಮತ್ತು

ಮೇಲ್ವರ್ಗದವರ ಪ್ರವೇಶದಿಂದಾಗಿ ಅನೇಕ ಮಾರ್ಪಾಡುಗಳೊಂದಿಗೆ ಯಕ್ಷಗಾನ ಜಾನಪದದ ರಾಜ್ಯ ಕಲೆಯಾಗುತ್ತದೆ. ಆ ಬಗ್ಗೆ ನಮಗೆ ಹೆಮ್ಮೆ ಇದೆ. ಅದನ್ನು ಬೆಳೆಸಿದವರ ಬಗ್ಗೆ ಗೌರವವಿದೆ. ಆದರೆ ಅಷ್ಟೇ ಸಮರ್ಥವಾದ ದೊಡ್ಡಾಟ ಯಕ್ಷಗಾನ ತನ್ನ ಶೈಶವ ಸ್ಥಿತಿಯಿಂದ ಸ್ಥಿತಿಯಿಂದ ಆಚೆ ಬರಲೇ ಇಲ್ಲ. ಅದಕ್ಕೆ ಸಾಮಾಜಿಕ, ಧಾರ್ಮಿಕ, ಆರ್ಥಿಕ ಕಾರಣಗಳಿವೆ. ದೊಡ್ಡಾಟವನ್ನು ಮುಂಚೂಣಿಗೆ ತರಲೇಬೇಕೆಂದು ಹಪಹಪಿಸಿದ ಹಲವಾರು ಜೀವಗಳು ಈ ಕರ್ನಾಟಕದಲ್ಲಿದೆ. ಅದರಲ್ಲಿ ಮೊದಲಿಗರು ಶ್ರೀ ಪಿ. ಗಂಗಾಧರಸ್ವಾಮಿಗಳು, ಶ್ರೀ ಸೊಲಬಕ್ಕನವರ್, ಸಿ. ಬಸವಲಿಂಗಯ್ಯ ಮತ್ತು ನಾನು ಹಾಗೂ ಇನ್ನೂ ಹಲವರು. ಹೇಗಾದರೂ ಮಾಡಿ ದೊಡ್ಡಾಟವನ್ನು ಮುಂಚೂಣಿಗೆ ತರಬೇಕು, ಅದರಲ್ಲಿ ಸುಧಾರಣೆ ಮಾಡಬೇಕು ಅಂತ ಸ್ವಾಮಿಗಳು ರಾಜ್ಯ ಸಮುದಾಯ ಘಟಕದ ಕಾರ್ಯದರ್ಶಿಗಳಾಗಿದ್ದಾಗ ದಾವಣಗೆರೆ ಜಿಲ್ಲೆ ಕೊಂಡಜ್ಜಿಯಲ್ಲಿ ರಾಜ್ಯ ಮಟ್ಟದ 'ದೊಡ್ಡಾಟ ತರಬೇತಿ ಶಿಬಿರ'ವನ್ನು ಆಯೋಜನೆ ಮಾಡುತ್ತಾರೆ. ರಾಜ್ಯಾದ್ಯಂತ ಕಲಾವಿದರು ಈ ಶಿಬಿರದಲ್ಲಿ ಭಾಗವಹಿಸುತ್ತಾರೆ. ಶ್ರೀ ಮುದೇನೂರು ಸಂಗಣ್ಣ, ಬಸವರಾಜ ಮಲ್ಲಶೆಟ್ಟಿ, ಸೊಲಬಕ್ಕನವರ್, ಸಿದ್ದಲಿಂಗಯ್ಯ ಕಂಬಾಳು, ಶ್ರೀ ಕೃಷ್ಣಯ್ಯ (ಉಡುಪಿ ಯಕ್ಷಗಾನ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದರು) ಮುಂತಾದ ಹಿರಿಯ ವಿದ್ವಾಂಸರು ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸುತ್ತಾರೆ. ಈ ಶಿಬಿರದಲ್ಲಿ 'ಸುಂದೋಪಸುಂದ' ಎಂಬ ದೊಡ್ಡಾಟ ಪ್ರಕಾರದಲ್ಲಿ ಆಧುನಿಕ ನಾಟಕ ಸಿದ್ಧಗೊಳ್ಳುತ್ತದೆ. ಭಾಷೆ, ಅಭಿನಯ, ತಂತ್ರಗಾರಿಕೆ, ರಂಗವಿನ್ಯಾಸ ಮುಂತಾದ ವಿಷಯಗಳಲ್ಲಿ ಭಿನ್ನತೆಯನ್ನು ಸಾಧಿಸಿದ ನಾಟಕವಿದು. ಹೀಗಾಗಿ ದೊಡ್ಡಾಟವನ್ನು ಆಧುನಿಕ ರಂಗಭೂಮಿಗೆ ತಂದವರಲ್ಲಿ ಇವರೇ ಮೊದಲಿಗರು. ನಂತರ ನಾನು ಭಾಸನ ಮಧ್ಯಮ ವ್ಯಾಯೋಗ, ಅಂಧಯುಗ, ನಾಟಕವನ್ನು ದೊಡ್ಡಾಟ ಪ್ರಕಾರದಲ್ಲಿ ಆಧುನಿಕ ನಾಟಕ ಕಟ್ಟಿದೆ. ನಂತರ ಸಿ. ಬಸವಲಿಂಗಯ್ಯನವರು ಏಕಲವ್ಯ, ಅಂಧಯುಗ ನಾಟಕಕ್ಕೆ ದೊಡ್ಡಾಟದ ಚಲನೆಗಳನ್ನು ಬಳಸಿಕೊಂಡಿದ್ದರು.

ದೊಡ್ಡಾಟ ಮತ್ತು ಬಯಲಾಟದಂತ ಪ್ರಕಾರಗಳಲ್ಲಿ ಅಪಾರವಾದ ಆಸಕ್ತಿಯನ್ನು ಹೊಂದಿದ ಸ್ವಾಮಿಗಳು ರಂಗಾಯಣ ರೆಪರ್ಟರಿ ಕಂಪನಿಗೆ ದೊಡ್ಡಾಟದ ವಸ್ತ್ರವಿನ್ಯಾಸ, ಅಭಿನಯ ಶೈಲಿಯನ್ನು ಬಳಸಿಕೊಂಡು

ದೊಡ್ಡಾಟದ ಪ್ರಕಾರದಲ್ಲಿ 'ಸಿರಿಸಂಪಿಗೆ' ನಾಟಕವನ್ನು ನಿರ್ದೇಶನ ಮಾಡುತ್ತಾರೆ. ಈ ನಾಟಕ ಯಶಸ್ಸು ಕಂಡು ಹಲವಾರು ಪ್ರದರ್ಶನಗಳನ್ನು ಕಾಣುತ್ತದೆ.

ದೊಡ್ಡಾಟ ಪ್ರಕಾರವನ್ನು ಪರಿಷ್ಕರಣೆ ಮಾಡಬೇಕು ಅದನ್ನು ಮುಖ್ಯವಾಹಿನಿಗೆ ತರಬೇಕು ಎಂದು ಆಲೋಚಿಸಿ ಪ್ರಯತ್ನ ಪಟ್ಟವರಲ್ಲಿ ಶ್ರೀ ಗಂಗಾಧರಸ್ವಾಮಿಯವರು ಮೊದಲಿಗರು. ನಂತರ ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡವರು ಶ್ರೀ ಸೊಲಬಕ್ಕನವರು. ಇವರು ನಮ್ಮ ರಾಷ್ಟ್ರ ಕಂಡ ಅದ್ಭುತವಾದ ಚಿತ್ರಕಲೆಗಾರ. ದಾವಣಗೆರೆಯ ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಉಪನ್ಯಾಸಕರಾಗಿದ್ದವರು. ದೊಡ್ಡಾಟವನ್ನು ಜೀರ್ಣೋದ್ಧಾರ ಮಾಡಬೇಕೆಂಬ ಉತ್ಕಟವಾದ ಬಯಕೆಯಿಂದ ವೃತ್ತಿಯನ್ನು ಬಿಟ್ಟು ಹುಲಸೋಗಿಯಲ್ಲಿ 'ದೊಡ್ಡಾಟದ ಗುಂಪು' ಎಂಬ ರೆಪರ್ಟರಿಯನ್ನು ಪ್ರಾರಂಭ ಮಾಡುತ್ತಾರೆ. ದೊಡ್ಡಾಟವನ್ನು ಸರ್ವತೋಮುಖ ಸುಧಾರಣೆಯನ್ನು ಮಾಡುವ ಕೈಂಕರ್ಯವನ್ನು ಕೈಗೊಳ್ಳುತ್ತಾರೆ. ಈ ಹೊತ್ತಿಗೆ ಶ್ರೀ ಗಂಗಾಧರಸ್ವಾಮಿಗಳು ರಂಗಾಯಣದಲ್ಲಿ ನೇಪಥ್ಯ ಪ್ರಶಿಕ್ಷರಾಗಿ ಕಲಸ ಮಾಡುತ್ತಿರುತ್ತಾರೆ (1994). ದೊಡ್ಡಾಟದ ಮೇಲಿನ ಪ್ರೀತಿಯಿಂದಾಗಿ ಸ್ವಾಮಿಗಳು ರಂಗಾಯಣದ ಪ್ರಶಿಕ್ಷಕ ಹುದ್ದೆಗೆ ದೀರ್ಘ ರಜೆ ಹಾಕಿ ಸೊಲಬಕ್ಕನವರೊಂದಿಗೆ ಕೈಜೋಡಿಸಿ ಅವರೊಂದಿಗೆ ಕೆಲಸ ಮಾಡುತ್ತಾರೆ. ಅಷ್ಟೇ ಅಲ್ಲ, 'ದೊಡ್ಡಾಟಗಳ ಅಡ್ಡಾಟ' ವೆಂಬ ಸಂಚಾರಿ ಘಟಕವನ್ನು ಪ್ರಾರಂಭಿಸಿ ರಾಜ್ಯಾದ್ಯಂತ ಸಂಸ್ಕರಣಗೊಂಡ ದೊಡ್ಡಾಟ ಪ್ರದರ್ಶನಗಳನ್ನು ಮಾಡುತ್ತಾರೆ. ಸ್ವಾಮಿಯವರು ನಾಟಕಗಳನ್ನು ನಿರ್ದೇಶನ ಮಾಡುತ್ತಾರೆ. ಅಲ್ಲದೇ ದೊಡ್ಡಾಟ ಅಡ್ಡಾಟದೊಂದಿಗೆ ಸಂಚಾರವನ್ನು ಮಾಡುತ್ತಾರೆ.

- ವೃತ್ತಿರಂಗಭೂಮಿಯ ಸುಧಾರಣೆಗೆ ಸಂಕಲ್ಪಿಸಿದವರಲ್ಲಿ ಸ್ವಾಮಿಗಳೇ ಮೊದಲಿಗರು

ಕನ್ನಡ ರಂಗಭೂಮಿಯ ವೈಭವ, ಯಕ್ಷಗಾನದ ಶ್ರೀಮಂತಿಕೆಯನ್ನು ನೋಡಿಯೇ 'ಮರಾಠಿ ರಂಗಭೂಮಿ' ಬೆಳೆಯಿತು ಅಂತ ರಂಗ ಇತಿಹಾಸಕಾರರು ಉಲ್ಲೇಖಿಸುತ್ತಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಏಕೈಕ ಮನೋರಂಜನೆ ಮಾಧ್ಯಮವಾಗಿದ್ದ ವೃತ್ತಿರಂಗಭೂಮಿ ಚಿತ್ರೋದ್ಯಮ ಪ್ರಗತಿಗೆ ಬಂದಂತೆ,

ವೃತ್ತಿರಂಗಭೂಮಿ ತನ್ನ ಪಾವಿತ್ರ್ಯತೆಯನ್ನು ಕಳೆದುಕೊಂಡು ಮನೋರಂಜನೆಯ ಮಾರ್ಗಗಳಿಗೆ ಶರಣಾಗಿ ಪ್ರೇಕ್ಷಕರನ್ನು ತನ್ನತ್ತ ಆಕರ್ಷಣೆ ಮಾಡಲು ಮುಂದಾಯಿತು. ಹೀಗಾಗಿ ವೃತ್ತಿರಂಗಭೂಮಿ ಅನೇಕ ಅತಿರೇಕಗಳಿಗೆ ಶರಣಾಗಿತ್ತು. ಇಂತಹದ್ದೇ ಸ್ಥಿತಿ ಮರಾಠಿ ರಂಗಭೂಮಿಯಲ್ಲಿಯೂ ಆಯಿತು. ಆದರೆ ಮರಾಠಿಯ ಪ್ರಬುದ್ಧ ಆಧುನಿಕ ಸಾಹಿತ್ಯದ ಲೇಖಕರು ವೃತ್ತಿರಂಗಭೂಮಿಯಲ್ಲಾಗುತ್ತಿದ್ದ ಅತಿರೇಕಗಳನ್ನು ಟೀಕಿಸದೆ ಅದರ ಸುಧಾರಣೆಗಾಗಿ ವೃತ್ತಿರಂಗಭೂಮಿಯ ಪ್ರವೇಶ ಮಾಡಿದರು. ಅದರ ಅಗತ್ಯಕ್ಕೆ ತಕ್ಕಂತೆ ವೃತ್ತಿರಂಗಭೂಮಿಯ ನಾಟಕಗಳನ್ನು ಪರಿಶೀಲನೆ ಮಾಡಿದರು. ಹೊಸದಾಗಿ ನಾಟಕಗಳನ್ನು ಬರೆದರು. ಹೀಗಾಗಿ ಮಹಾರಾಷ್ಟ್ರದಲ್ಲಿ ವೃತ್ತಿರಂಗಭೂಮಿಯ ನಾಟಕಗಳನ್ನು ಪರಿಶೀಲನೆ ಮಾಡಿದರು. ಹೊಸದಾಗಿ ನಾಟಕಗಳನ್ನು ಬರೆದರು. ಹೀಗಾಗಿ ಮಹಾರಾಷ್ಟ್ರದಲ್ಲಿ ವೃತ್ತಿರಂಗಭೂಮಿಯ ಶೈಲಿ ಇನ್ನೂ ಜೀವಂತವಾಗಿದೆ. ಮಹತ್ವದ ಪ್ರಯೋಗಗಳನ್ನು ಮಾಡುತ್ತಿದೆ. ನಮ್ಮಲ್ಲಿ ಹಾಗೆ ಆಗಲಿಲ್ಲ. ಸುಧಾರಣೆಯನ್ನು ಮಾಡುವ ಸಲುವಾಗಿ ವೃತ್ತಿರಂಗಭೂಮಿಗೆ ಯಾರೂಪ್ರವೇಶ ಮಾಡಲಿಲ್ಲ. ಬದಲಿಗೆ ವೃತ್ತಿರಂಗಭೂಮಿಯಲ್ಲಿ ಆಗುತ್ತಿದ್ದ ಅತಿರೇಕಗಳನ್ನು ಬಲವಾಗಿ ಟೀಕಿಸಿದರು. ವೃತ್ತಿರಂಗಭೂಮಿಯನ್ನು ಅಣಕಿಸಿ ನಾಟಕಗಳನ್ನು ಬರೆದು ಪ್ರದರ್ಶನ ಮಾಡಿದರು. ಶ್ರೀ ಬಿ. ವಿ. ಕಾರಂತರಿಗೆ ವೃತ್ತಿರಂಗಭೂಮಿಯ ವೃತ್ತಿಪರತೆ ಬಗ್ಗೆ ಒಲವಿತ್ತೇ ವಿನಃ ಆ ಕಾಲದಲ್ಲಿ ಅದನ್ನು ಸುಧಾರಣೆ ಮಾಡಬೇಕು, ಮುಖ್ಯವಾಹಿನಿಯಲ್ಲಿ ಪ್ರಬುದ್ಧವಾಗಿ ನಿಲ್ಲಿಸಬೇಕೆಂಬ ಇಚ್ಛೆ ಇರಲಿಲ್ಲವೇನೋ!? ಆದರೆ ಇಂತಹದೊಂದು ಬಯಕೆ ಅವರ ಸುಪ್ತಪ್ರಜ್ಞೆಯಲ್ಲಿ ಕಾಡಿದ್ದುಂಟು, ಅದಕ್ಕಾಗಿ ಅವರು ಆಂಧ್ರದ ಸುರಭೀ ವೃತ್ತಿ ಕಂಪನಿಗೆ ಚಾಂಡಾಲಿಕಾ ಎಂಬ ನಾಟಕವನ್ನು ನಿರ್ದೇಶನ ಮಾಡುತ್ತಾರೆ. ಅದು ಎಷ್ಟರಮಟ್ಟಿಗೆ ಯಶಸ್ಸಾಯಿತು ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ. ನಮ್ಮ ಸ್ವಾಮಿಯವರಿಗೆ ವೃತ್ತಿರಂಗಭೂಮಿಯಲ್ಲಿ ಸುಧಾರಣೆಯನ್ನು ತರಬೇಕು, ವೃತ್ತಿರಂಗಭೂಮಿ ಮತ್ತು ಆಧುನಿಕ ರಂಗಭೂಮಿ ಒಟ್ಟೊಟ್ಟಿಗೆ ಕೆಲಸ ಮಾಡಬೇಕೆಂದು ಸಂಕಲ್ಪಿಸಿದವರಲ್ಲಿ ಇವರೇ ಮೊದಲಿಗರು. ನೀನಾಸಂ ಸಂಸ್ಥೆ ಹೆಗ್ಗೋಡು 1979ರಲ್ಲಿ ಆಧುನಿಕ ರಂಗಭೂಮಿಯಲ್ಲಿ 'ರಂಗಶಿಕ್ಷಣ'ದ ಮಹತ್ವವನ್ನರಿತು 'ನೀನಾಸಂ ರಂಗಶಿಕ್ಷಣ ಕೇಂದ್ರ'ವನ್ನು ಪ್ರಾರಂಭ ಮಾಡುತ್ತದೆ. ಇದರ ಆರಂಭಿಕ ಮೊದಲ ಕಾರ್ಯನಿರತ ಪ್ರಾಂಶುಪಾಲರಾಗಿ ನೇಮಕಗೊಂಡು ವಿದ್ಯಾರ್ಥಿಗಳಿಗೆ ಅಭಿನಯ ಪಾಠಗಳನ್ನು ಹೇಳಿಕೊಡಲು ಪ್ರಾರಂಭಿಸುತ್ತಾರೆ. ಈ ಸಂದರ್ಭದಲ್ಲಿ ಇವರು ಯೋಜಿಸಿದ

ಯೋಜನೆ 'ವೃತ್ತಿ ರಂಗಭೂಮಿ ಮತ್ತು ಆಧುನಿಕ ರಂಗಭೂಮಿಯ ಅಭಿನಯ ಅನುಸಂಧಾನ'. ಈ ಮೊದಲ ವರ್ಷದ ಬ್ಯಾಚಿನಲ್ಲಿ ಆಧುನಿಕ ರಂಗಭೂಮಿಯಲ್ಲಿ ಖ್ಯಾತಿಯನ್ನು ಗಳಿಸಿರುವ ಶ್ರೀ ಏಣಗಿ ನಟರಾಜ, ಮೋಹನಚಂದ್ರ, ರಾಮು, ವಿಶ್ವನಾಥ (ವಿಶ್ವಣ್ಣ), ಕೆ. ಜೆ. ಮಹಾಬಲೇಶ್ವರ ರಾವ್ (ಮುಂದೆ ಇವರು ನೀನಾಸಂ ರಂಗಶಾಲೆಯ ಪ್ರಾಂಶುಪಾಲರಾಗುತ್ತಾರೆ) ಮುಂತಾದವರು ಇದ್ದರು. ಹಳಿಯಾಳದಲ್ಲಿ ಶ್ರೀ ಏಣಗಿ ಬಾಳಪ್ಪನವರ ಕಂಪನಿ ಮೊಕ್ಕಾಂ ಮಾಡಿ ನಾಟಕ ಪ್ರದರ್ಶನವನ್ನು ಮಾಡುತ್ತಾ ಇರುತ್ತದೆ. ಸ್ವಾಮಿಯವರು ಶ್ರೀ ಕೆ. ವಿ. ಸುಬ್ಬಣ್ಣನವರೊಂದಿಗೆ ಚರ್ಚಿಸಿ, ಏಣಗಿ ಬಾಳಪ್ಪನವರ ಕಂಪನಿಗೆ ನೀನಾಸಂ ರಂಗಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಿ ಮೊಕ್ಕಾಂ ಮಾಡಿಸಿ, ವೃತ್ತಿ ರಂಗಭೂಮಿಯ ಅಭಿನಯ ಪದ್ಧತಿಗಳನ್ನು ವಿದ್ಯಾರ್ಥಿಗಳಿಗೆ ಅಭ್ಯಸಿಸಿ 'ಬಸವೇಶ್ವರ' ಎಂಬ ನಾಟಕವನ್ನು ಅಭಿನಯಿಸುವಂತೆ ಮಾಡಿದ ಕನ್ನಡ ರಂಗಭೂಮಿಯ ಮೊದಲಿಗರು ಇವರು.

## ವೃತ್ತಿಗೆ ಬೆಳಕು ಬೀರಿದ ಮೊದಲಿಗರು

ಈ ವಿಷಯದ ವಿಸ್ತೃತತೆ ಎಂಬಂತೆ ಹಂಸಲೇಖಾರವರ ತಂಡ ಅಭಿನಯಿಸುತ್ತಿದ್ದ 'ರೈತಜೀವಿ' ಎಂಬ ನಾಟಕಕ್ಕೆ ಆಧುನಿಕ ರಂಗಭೂಮಿಯ ಬೆಳಕಿನ ವಿನ್ಯಾಸವನ್ನು ಮಾಡುತ್ತಾರೆ. ಈ ವಿನ್ಯಾಸ ಮತ್ತು ಹಂಸಲೇಖರವರು ಸಂಯೋಜಿಸಿದ ಸಂಗೀತ, ದೃಶ್ಯ ವಿನ್ಯಾಸ, ಪರಿಕರ, ವಸ್ತ್ರವಿನ್ಯಾಸ ಮುಂತಾದವುಗಳಿಂದ ನಾಟಕ ಪ್ರಾರಂಭವಾದ ಇಪ್ಪತ್ತು ನಿಮಿಷ ಒಂದು ಹೊಸ ಅನುಭವದ ಲೋಕಕ್ಕೆ ಪ್ರೇಕ್ಷಕರನ್ನು ಕರೆದುಕೊಂಡು ಹೋಗಿ ಮಂತ್ರಮುಗ್ಧರನ್ನಾಗಿಸುತ್ತಿತ್ತು. ಒಂದು ವೃತ್ತಿ ರಂಗಭೂಮಿಯ ನಾಟಕಕ್ಕೆ ಆಧುನಿಕ ಬೆಳಕಿನ ವಿನ್ಯಾಸ ಮಾಡಿದವರಲ್ಲಿ ಇವರೇ ಮೊದಲಿಗರು.

ಆಧುನಿಕ ರಂಗಭೂಮಿಯ ರಂಗ ವಿದ್ಯಾರ್ಥಿಗಳಿಗೆ ವೃತ್ತಿ ರಂಗಭೂಮಿಯ ನಾಟಕವನ್ನು ಕಲಿಸಿದ್ದಾಯಿತು. ಇನ್ನು ವೃತ್ತಿ ರಂಗಭೂಮಿಯವರಿಗೆ ಆಧುನಿಕ ನಾಟಕವನ್ನು ಕಲಿಸುತ್ತಾ, ಅಭಿನಯದ ಹೊಸ ಸಾಧ್ಯತೆಗಳನ್ನು ಕಲಿಸಿಕೊಟ್ಟರೆ ಹೇಗೆ ಎಂಬ ಆಲೋಚನೆಯಿಂದಾಗಿ ಶ್ರೀ ಯೋಗಾನರಸಿಂಹರವರ ಕಂಪನಿಗೆ 'ಹುತ್ತವ ಬಡಿದರೆ' ನಾಟಕವನ್ನು ಮಾಡಿಸಲು ಸನ್ನದ್ಧರಾಗುತ್ತಾರೆ. ಆದರೆ ಅದು ಕೈಗೂಡುವುದಿಲ್ಲ. ಈ ಸಂಕಲ್ಪ ಕಮರುವುದಿಲ್ಲ. ಮುಂದೆ ಕಡಪಟ್ಟಿ ಕಂಪನಿಗೆ 'ಒಂದು ವಠಾರದ ಕಥೆ' ಎಂಬ ನಾಟಕವನ್ನು ಹೆಚ್. ಎನ್. ಹೂಗಾರ್‌ರವರಿಂದ

ಬರೆಸಿ ಅದರ ಪ್ರಯೋಗವನ್ನು ಮಾಡಲು ಮುಂದಾಗುತ್ತಾರೆ. ಅದು ಕೂಡ ಅರ್ಧಕ್ಕೆ ನಿಂತು ಹೋಗುತ್ತದೆ.

ಮರಳಿ ಯತ್ನವ ಮಾಡುವ ಅನ್ನುವ ಮಾತಿನಂತೆ ಕದಡಿದ ನೀರು ನಾಟಕವನ್ನು ಶ್ರೀಪಾದರಾವ್‌ರಿಂದ ಕಂಪನಿಗೆ ಹೊಂದಿಕೊಳ್ಳುವಂತೆ ಪರಿಷ್ಕರಿಸಿ, ಶ್ರೀ ಗೋಪಾಲ ವಾಜಪೇಯಿ ಅವರಿಂದ ಹಾಡುಗಳನ್ನು ಬರೆಸಿ, ಶ್ರೀ ಜಿ. ಬಿ. ಜೋಶಿಯವರು ಮೆಚ್ಚಿಕೊಳ್ಳುವಂತೆ ಕದಡಿದ ನೀರು ನಾಟಕವನ್ನು ಕಂಪನಿಯ ಕಲಾವಿದರೊಂದಿಗೆ ನಾಟಕವನ್ನು ಮಾಡಿಸಿ ಯಶಸ್ವಿಯಾಗುತ್ತಾರೆ.

ಶ್ರೀ ಆರ್. ನಾಗೇಶ್‌ರವರು ಚಿಂದೋಡಿ ಕಂಪನಿಗೆ ಹೊಂದಿಕೊಳ್ಳುವಂತೆ ಕಂಪನಿಗೆ 'ಕುರುಡು ಕಾಂಚಾಣ' ನಾಟಕವನ್ನು ಮಾಡಿಸಲು ಮುಂದಾಗುತ್ತಾರೆ. ಅದು ಸಾಧ್ಯವಾಗುವುದಿಲ್ಲ. ಅದೇ ರೀತಿಯಲ್ಲಿ ಏಣಗಿ ಬಾಳಪ್ಪನವರು ಆಧುನಿಕ ಹವ್ಯಾಸಿ ರಂಗ ತಂಡಕ್ಕೆ ನಾಟಕವನ್ನು ನಿರ್ದೇಶನ ಮಾಡುವುದಿತ್ತು, ಅದೂ ಸಾಧ್ಯವಾಗುವುದಿಲ್ಲ. ಶ್ರೀ ಯೋಗಾನರಸಿಂಹರವರು ತಮ್ಮ ಕಂಪನಿಗೆ ತುಘಲಕ್ ನಾಟಕವನ್ನು ಮಾಡಿಸುವ ಮೂಲಕ ಸ್ವಲ್ಪ ಮಟ್ಟಿಗೆ ಯಶಸ್ಸು ಕಾಣುತ್ತಾರೆ.

ಈ ಆಧುನಿಕ ರಂಗಭೂಮಿಗೆ ವೃತ್ತಿ ರಂಗಭೂಮಿಯ ಉತ್ತಮ ಅಂಶಗಳನ್ನು, ವೃತ್ತಿರಂಗಭೂಮಿಗೆ ಆಧುನಿಕ ರಂಗಭೂಮಿಯ ಉತ್ತಮ ಅಂಶಗಳನ್ನು ಬೆಸೆಯುವ ಕೈಂಕರ್ಯವನ್ನು ಸ್ವಾಮಿಗಳು ತಮ್ಮ ರಂಗಪಯಣದ ಉದ್ದಕ್ಕೂ ಮಾಡಿಕೊಂಡು ಬಂದಿದ್ದಾರೆ. ಒಂದೆರೆಡು ಉದಾಹರಣೆಗಳನ್ನು ನಿಮಗೆ ನೀಡ್ತೇನೆ. 1983ರಲ್ಲಿ ದಾವಣಗೆರೆಯ ಸಮುದಾಯಕ್ಕೆ 'ಚಿಕ್ಕದೇವಭೂಪ' ನಾಟಕವನ್ನು ಮಾಡಿಸುತ್ತಾರೆ. ಈ ನಾಟಕದಲ್ಲಿ ಪ್ರವೇಶ ಮತ್ತು ನಿರ್ಗಮನ ಪದ್ಧತಿಗಳು ವೃತ್ತಿ ರಂಗಭೂಮಿಯ ಮಾದರಿಯಲ್ಲಿದ್ದು, ರಂಗವಿನ್ಯಾಸ ಆಧುನಿಕ ರಂಗಭೂಮಿಯದ್ದಾಗಿತ್ತು. ಸಂಗೀತಕ್ಕೆ ವೃತ್ತಿರಂಗಭೂಮಿಯಲ್ಲಿ ಬಳಸುತ್ತಿದ್ದ ವಾದ್ಯಗಳನ್ನು ಬಳಸಲಾಗಿತ್ತು. (ಉದಾ: ಲೆಗ್ ಹಾರ್ಮೋನಿಯಂ, ವಾಯ್‌ಲಿನ್, ತಬಲಾ, ಮುಂತಾದವು) ಹಾಡುಗಾರಿಕೆಯಲ್ಲಿ ಎರಡು ಬಗೆಯ ಮಟ್ಟುಗಳನ್ನು ಬಳಸಿಕೊಂಡು ಹೊಸ ಬಗೆಯ ಸಂಗೀತ ವಿನ್ಯಾಸವನ್ನು ಮಾಡಲಾಗಿತ್ತು. ಇದು ಪ್ರೇಕ್ಷಕರಿಗೆ ಒಂದು ಹೊಸ ಅನುಭವ ನೀಡಿದ ನಾಟಕ.

ಈ ಮಾದರಿ ಪ್ರದರ್ಶನವನ್ನು ರಾಯಚೂರಿನ ಸಮುದಾಯಕ್ಕೆ ಸಿದ್ಧಪಡಿಸಿ

ಪ್ರದರ್ಶನ ಮಾಡುತ್ತಾರೆ. ಶಿವಸಂಚಾರ (ಸಾಣೆಹಳ್ಳಿ) ತಂಡಕ್ಕೆ ನಿರ್ದೇಶನ ಮಾಡುತ್ತಾರೆ. ಈ ನಾಟಕ ಕರ್ನಾಟಕದ ತುಂಬಾ ಹಲವು ಪ್ರದರ್ಶನವನ್ನು ಕಾಣುತ್ತದೆ.

2016ರಲ್ಲಿ ಇದೇ ಮಾದರಿಯಲ್ಲಿ ಮಂಡ್ಯದ ಜನದನಿ ತಂಡಕ್ಕೆ 'ಪಾದುಕಾ ಕಿರೀಟಿ' ನಾಟಕವನ್ನು ಕಟ್ಟುತ್ತಾರೆ. ವೃತ್ತಿ ರಂಗಭೂಮಿಯ ಉತ್ತಮ ಅಂಶಗಳನ್ನು ಇದರಲ್ಲಿ ಬಳಸಲಾಗುತ್ತದೆ. ಪೌರಾಣಿಕ ನಾಟಕವನ್ನು ಭಿನ್ನವಾಗಿ ಕಟ್ಟಲಾಗಿದೆ. ಇದೊಂದು ಹೊಸ ರೀತಿಯ ಪ್ರಯೋಗ.

❑

# ರಂಗಾಯಣ ರೆಪರ್ಟರಿ ಕಂಪನಿಯಲ್ಲಿ ರಂಗಸೇವೆ

ರಂಗಜಂಗಮರಾಗಿದ್ದ ಸ್ವಾಮಿಗಳು ಮಕ್ಕಳ ಭವಿಷ್ಯಕ್ಕಾಗಿ ಸಂಸಾರದ ರಥ ಸರಾಗವಾಗಿ ಸಾಗಲಿಕ್ಕಾಗಿ ಅನಿವಾರ್ಯವಾಗಿ ಆರಿಸಿಕೊಂಡಿದ್ದು ರಂಗಾಯಣದಲ್ಲಿ ನೇಪಥ್ಯ ಪ್ರಶಿಕ್ಷಕ ಸೇವೆ. ಬದುಕಿನ ಅನಿವಾರ್ಯತೆ ಸ್ಥಾವರವನ್ನು ಬಯಸಿದರೆ ಮನಸ್ಸು ಸದಾ ಜಂಗಮತ್ವವನ್ನೇ ಬಯಸುತ್ತಿತ್ತು. ಆಗಿನ ರಂಗ ಸಮಾಜದ ಸದಸ್ಯ ಕಾರ್ಯದರ್ಶಿಯಾಗಿದ್ದ ಐ. ಎಂ. ವಿಠ್ಠಲ ಮೂರ್ತಿ ಅವರ ಒತ್ತಾಯದ ಮೇರೆಗೆ ರಂಗಪ್ರಮುಖ ಹುದ್ದೆಗೆ ಒಲ್ಲದ ಮನಸ್ಸಿನಿಂದ ಅರ್ಜಿಸಲ್ಲಿಸಿದರು. ಆದರೆ ಸ್ವಾಮಿಯವರಿಗೆ ಬೆಂಗಳೂರಿನ ಆದರ್ಶ ಫಿಲಂ ಇನ್‌ಸ್ಟಿಟ್ಯೂಟ್‌ನಲ್ಲಿ ರಂಗಾಯಣ ಕೊಡುವುದಕ್ಕಿಂತ ಹೆಚ್ಚಿಗೆ ಸಂಬಳ ಬರುತ್ತಿತ್ತು. ಅರ್ಜಿ ಸಲ್ಲಿಸಿದ್ದು ರಂಗಪ್ರಮುಖ ಹುದ್ದೆಗೆ ಆದರೆ ಕೆಲಸ ದೊರಕಿದ್ದು ನೇಪಥ್ಯ ರಂಗಪ್ರಶಿಕ್ಷಕರಾಗಿ. ಹೆಸರಿಗೆ ಮಾತ್ರ 'ನೇಪಥ್ಯ ಪ್ರಶಿಕ್ಷಕ' ಮಾಡಿದ್ದು ರಂಗಾಯಣವನ್ನು ಕಟ್ಟುವ ಕೆಲಸ. 1989ರಲ್ಲಿ ರಂಗಾಯಣ ಪ್ರಾರಂಭವಾಯಿತು. ಆಯ್ಕೆಗೊಂಡ ಅಭ್ಯರ್ಥಿಗಳನ್ನು ಕಲಾವಿದರನ್ನಾಗಿ ರೂಪಿಸುವ ಕಾರ್ಯ ಎಲ್ಲರೆದುರಿನಲ್ಲಿತ್ತು. ಅಭಿನಯ ಶಿಕ್ಷಕರಾಗಿದ್ದ ಶ್ರೀ ರಘುನಂದನ್, ರಂಗಪ್ರಮುಖರಾಗಿದ್ದ ಶ್ರೀ ಸಿ. ಬಸವಲಿಂಗಯ್ಯ, ಆಡಳಿತಾಧಿಕಾರಿಯಾಗಿದ್ದ ಶ್ರೀ ಜಯತೀರ್ಥ ಜೋಶಿಯವರು ಇವರೆಲ್ಲ ಮುಂಚೂಣಿಯಲ್ಲಿದ್ದರು ಸಾರಥಿಯಾಗಿ ಶ್ರೀ ಬಿ. ವಿ. ಕಾರಂತರು. ಶ್ರೀ ಬಿ. ವಿ. ಕಾರಂತರ ಆಶಯದಂತೆ ಸತತ ಮೂರು ವರ್ಷಗಳ ಕಾಲ ಅಭಿನಯ ತರಬೇತಿಯನ್ನು ನೀಡಲಾಯಿತು ಸ್ವಾಮಿಯವರು ಕಲಾವಿದರಿಗೆ ಅಭಿನಯ ಪಾಠಗಳನ್ನು ಹೇಳಿ ಕೊಡುತ್ತಿದ್ದಲ್ಲದೆ ಮೈಸೂರು ರಂಗಾಯಣದ ನಂತರ ಮೊದಲ ಶಾಖೆ ಧಾರವಾಡದಲ್ಲಿ ಪ್ರಾರಂಭವಾದಾಗ ಸ್ವಾಮಿಯವರೇ ಮುಖ್ಯಸ್ಥ. ಕೆಲಸ ಮಾಡಿದ 2 ವರ್ಷ ಕಟ್ಟುವ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಾರೆ. ಇದು ಅವರಿಗೆ ತುಂಬಾ ತೃಪ್ತಿಯನ್ನು ನೀಡಿದೆ.

**ಈ ತೃಪ್ತಿಯನ್ನು ಅವರು ನನ್ನೊಂದಿಗೆ ಹಂಚಿಕೊಂಡಿದ್ದು ಹೀಗೆ:**

ನನ್ನ ಮದುವೆ ನವೆಂಬರ್ 1976ರ ನವೆಂಬರ್ 6 ರಂದು. ನವೆಂಬರ್ 4 ರಂದು ಹೆಗ್ಗೋಡಿನಲ್ಲಿ ನಾಟಕದ ಪ್ರದರ್ಶನ ಮುಗಿಸಿ 5 ರಂದು ನನ್ನೂರು

ಮುಂಡರಗಿಗೆ ಹೋಗಿ, 6 ರಂದು ಮದುವೆ, ಮೆರವಣಿಗೆ ಮುಗಿಸಿಕೊಂಡು, 7 ರಂದು ವಾಪಸ್ ಆದ ಮೇಲೆ ನಮ್ಮಿಬ್ಬರ ರಂಗಪಯಣ ಪ್ರಾರಂಭವಾಯಿತು. ಧಾರವಾಡದಿಂದ ಪ್ರಾರಂಭವಾದ ನಮ್ಮ ಪಯಣ 1984ರ ವರೆಗೆ ಹಾಗೆಯೇ ಮುಂದುವರಿಯಿತು.

ಮಧ್ಯದಲ್ಲಿ ಕರ್ನಾಟಕ ಸಮುದಾಯ ಸಮನ್ವಯ ಸಮಿತಿಗೆ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಗೊಂಡೆ. ಇದರಿಂದಾಗಿ ಬೆಂಗಳೂರಿನಲ್ಲಿ ಇರುವುದು, ಇದ್ದುಕೊಂಡು ಪ್ರವಾಸ ಮಾಡುವುದು ಅನಿವಾರ್ಯವಾಯಿತು. ಮಕ್ಕಳು ಶಾಲೆಗೆ ಹೋಗುವ ವಯಸ್ಸಿನವರಾಗಿದ್ದರು, ಆದ್ದರಿಂದ ಬೆಂಗಳೂರಿನಲ್ಲಿ ಮನೆ ಮಾಡಿದೆ. ಮಾಮೂಲಿ ಹಣದ ಕೊರತೆ.... ಅದಕ್ಕಾಗಿ ಕರೆಬಂದಕಡೆ ನಾಟಕದ ವರ್ಕ್‌ಶಾಪ್ ಮಾಡುವುದು, ನಾಟಕ ಆಡಿಸುವುದು ನಡೆದೇ ಇತ್ತು. 1984 ಮೇ ಅಂತ ಕಾಣುತ್ತೆ, ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಚಲನಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ ಅವರು ಸಿಕ್ಕು, 'ಏನು ಸ್ವಾಮಿ ಆದರ್ಶ ಫಿಲಂ ಇನ್‌ಸ್ಟಿಟ್ಯೂಟ್‌ನಲ್ಲಿ ಕೆಲಸ ಮಾಡುತ್ತೀರಾ' ಎಂದರು. ಅವರು ಆಗ ಇನ್‌ಸ್ಟಿಟ್ಯೂಟ್‌ನ ಪ್ರಿನ್ಸಿಪಾಲ್ ಆಗಿದ್ದರು. ಇನ್‌ಸ್ಟಿಟ್ಯೂಟ್‌ಗೆ ಕರೆದುಕೊಂಡು ಹೋಗಿ ಅರ್ಜಿ ಬರೆಸಿಕೊಂಡರು. ಮುಂದೆ ಒಂದು ತಿಂಗಳ ಕಾಲ ಸುದ್ದಿಯೇ ಇಲ್ಲ. ಇದ್ದಕ್ಕಿದ್ದಂತೆ ಒಂದು ದಿನ ಗಿರೀಶ್ ಅವರಿಗೆ ಫೋನ್ ಮಾಡಿ ಕೇಳಿದೆ. 'ಎಲ್ಲಿದ್ದೀರಿ' ಎಂದರು, 'ಶ್ರೀನಗರದಲ್ಲಿ ಇದ್ದೇನೆ, ಇಂದು ರಾತ್ರಿ ಗುಲ್ಬರ್ಗಕ್ಕೆ ಹೋಗುತ್ತಿದ್ದೇನೆ, ಅಲ್ಲಿ ಒಂದು ನಾಟಕ ಮಾಡಿಸಬೇಕಿದೆ' ಎಂದೆ, 'ಕೂಡಲೇ ಇನ್‌ಸ್ಟಿಟ್ಯೂಟ್‌ಗೆ ಬನ್ನಿ; ಉಪನ್ಯಾಸಕರ ಹುದ್ದೆಗೆ ಸಂದರ್ಶನ ನಡೆಯುತ್ತಿದೆ; ಆಟೋದಲ್ಲಿ ಬನ್ನಿ; ನಾನೇ ದುಡ್ಡುಕೊಡ್ತೀನಿ' ಎಂದರು.

ಇನ್‌ಸ್ಟಿಟ್ಯೂಟ್‌ಗೆ ಹೊರಟೆ, ಅಲ್ಲಿ ಸಂದರ್ಶನ ನಡೆಯುತ್ತಿತ್ತು, ಅಭ್ಯರ್ಥಿಗಳು ಇಬ್ಬರೇ, ಒಳಗಡೆ ಶ್ರೀ ಚಂದ್ರಶೇಖರ ಕಂಬಾರರು, ಆಗಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಶ್ರೀ ನಾ. ನಾ. ಕಠಾವಿ, ಇನ್‌ಸ್ಟಿಟ್ಯೂಟ್‌ನ ವ್ಯವಸ್ಥಾಪಕ ನಿರ್ದೇಶಕ ಶ್ರೀ ಬಿ.ಆರ್. ಪಿ. ಸ್ವಾಮಿ ಹಾಗೂ ಗಿರೀಶ್ ಕಾಸರವಳ್ಳಿ ಇದ್ದರು. (ಕೆಲಸಕ್ಕಾಗಿ ಇದು ನನ್ನ ಎರಡನೆಯ ಸಂದರ್ಶನ, ಮೊದಲನೆಯದು ಬಸವೇಶ್ವರ ಹೈಸ್ಕೂಲಿನಲ್ಲಿ ಕ್ಲರ್ಕ್ ಹುದ್ದೆಗೆ. ಅದು ಸಿಕ್ಕಿದ್ದರೆ ಕ್ಲರ್ಕ್ ಆಗಿರುತ್ತಿದ್ದೆ.) ನಾನು ಒಳಗೆ ಹೋದೆ, ನನ್ನ ಸಂದರ್ಶನ–

ನಾ. ನಾ. ಕಠಾವಿ: ಏನು ನಿಮ್ಮ ಅನುಭವ?

ಚಂದ್ರಶೇಖರ ಕಂಬಾರ: ಏ, ಅವರು ತುಂಬಾ ಚೆನ್ನಾಗಿ ಕೆಲಸ ಮಾಡುತ್ತಾರೆ, ಈಗಾಗಲೇ ರಂಗಭೂಮಿಯಲ್ಲಿ ತುಂಬಾ ಹೆಸರು ಮಾಡಿದ್ದಾರೆ.

ಬಿ. ಆರ್. ಪಿ. ಸ್ವಾಮಿ: ಇದು ಫಿಲ್ಮ್ ಇನ್‌ಸ್ಟಿಟ್ಯೂಟ್....

ಚಂದ್ರಶೇಖರ ಕಂಬಾರ: ಇವರು ತುಂಬಾ ಒಳ್ಳೆ ನಟ, ಒಳ್ಳೇ ತರಬೇತುದಾರ.

ಬಿ. ಆರ್. ಪಿ. ಸ್ವಾಮಿ: ಇಲ್ಲಿ ಬಂದೋರು ಹೆಚ್ಚು ದಿನ ಇರೋದಿಲ್ಲ ಮತ್ತೆ ಮತ್ತೆ ಹೊಸಬರನ್ನ ಹುಡುಕಬೇಕಾಗುತ್ತೆ. ನೀವು ಹೆಚ್ಚು ದಿನ ಇಲ್ಲಿ ಉಳಿಯುವುದಾದರೆ....

ಗಿರೀಶ್ ಕಾಸರವಳ್ಳಿ: ಇಲ್ಲಾ, ಇರ್ತಾರೆ.... ಇರ್ತಾರೆ.

ನಾ. ನಾ. ಕಠಾವಿ: ಸರಿ, ನೀವು ಹೋಗಬಹುದು.

ನಾನು ಹೊರ ಬಂದೆ.

* * * *

ಗುಲಬರ್ಗಾದಿಂದ ಫೋನ್ ಮೇಲೆ ಫೋನು.... ನನಗೆ ಆತಂಕ

ಗಿರೀಶ್ ಅವರಿಗೆ ಮತ್ತೆ ಫೋನ್ ಮಾಡಿದೆ.

ಗಿರೀಶ್ ಅದೇ ಧಾಟಿಯಲ್ಲಿ

ಎಲ್ಲಿದ್ದೀರಿ?

ಶ್ರೀನಗರದಲ್ಲಿ

ಕೂಡಲೇ ಇನ್‌ಸ್ಟಿಟ್ಯೂಟ್‌ಗೆ ಬನ್ನಿ.

ಸಾರ್....

ನಾನೇ ದುಡ್ಡು ಕೊಡ್ತೇನೆ, ಆಟೋದಲ್ಲಿ ಬನ್ನಿ.

ಹೋದೆ....

ಅಲ್ಲಿ ಸ್ಟಾಫ್ ಮೀಟಿಂಗ್ ನಡೆಯುತ್ತಿತ್ತು. ನಾನು ಉಪನ್ಯಾಸಕನಾಗಿ

ಆಯ್ಕೆ ಆಗಿದ್ದೆ. ಅಷ್ಟೊತ್ತಿಗೆ ಶ್ರೀಮತಿ ಎಸ್. ಮಾಲತಿ, ಶ್ರೀಮತಿ ಪ್ರೇಮಾ ಕಾರಂತ್, ಶ್ರೀಮತಿ ಬಿ. ಜಯಶ್ರೀಯವರು ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದರು.

(ಮಂಜಾ ಅಂದ್ರೆ, ಇಂಟರ್‌ವ್ಯೂ ಕಾರ್ಡ್ ಆಗಲಿ ಅಪಾಯಿಂಟ್‌ಮೆಂಟ್ ಲೆಟರ್ ಆಗಲಿ ನನಗೆ ತಲುಪಿರಲಿಲ್ಲ.... ಸ್ವಾರಸ್ಯವೆಂದರೆ ಅದು ಪೋಸ್ಟೇ ಆಗಿರಲಿಲ್ಲ. ಆಮೇಲೆ ನನಗೆ ತಿಳಿದ ವಿಷಯವೆಂದರೆ ಅಲ್ಲಿಯ ಗುಮಾಸ್ತ ಮತ್ತು ಇನ್ನೊಬ್ಬ ಅಭ್ಯರ್ಥಿಯ ಕೈವಾಡ ಇದರಲ್ಲಿತ್ತು ಎಂಬುದು.)

ಜೀವನದಲ್ಲಿ ಮೊದಲಬಾರಿಗೆ ಒಪ್ಪಿಕೊಂಡ ಕೆಲಸ ತಪ್ಪಿಸಿ, ಗುಲಬರ್ಗಾಗೆ ಹೋಗದೆ ಕೈಕೊಟ್ಟೆ. ಬೆಂಗಳೂರಿನಲ್ಲಿ ಸೆಟಲ್ ಆದೆ. ಆದರೂ ಅವಕಾಶ ಸಿಕ್ಕಾಗಲೆಲ್ಲಾ ಹೊಸಪೇಟೆ, ಸಿಂಧನೂರು, ಸಿಂಧಗಿ, ಬಾಗಲಕೋಟೆ, ದಾವಣಗೆರೆ.... ಹೀಗೆ ರಂಗಭೂಮಿಯ ಕೆಲಸವನ್ನು ಮುಂದುವರೆಸಿದೆ.

1989 ಫೆಬ್ರವರಿ, 13ರ ವರೆಗೆ, ಅಲ್ಲಿ ಕೆಲಸಮಾಡಿ ಅಲ್ಲಿಯ ವಿದ್ಯಾರ್ಥಿಗಳಿಂದ 'ದೊಡ್ಡಪ್ಪ', 'ಕತ್ತಲೆ ದಾರಿ ದೂರ', 'ಮೆರವಣಿಗೆ', ಮುಂತಾದ ನಾಟಕಗಳನ್ನು ತಯಾರಿಸಿ, ನನ್ನ ಸ್ವಂತ ಖರ್ಚಿನಲ್ಲಿ ಬೇರೆಬೇರೆ ಕಡೆ ಪ್ರದರ್ಶನ ಏರ್ಪಡಿಸುತ್ತಿದ್ದೆ. (ಮ್ಯಾನೇಜ್‌ಮೆಂಟ್‌ನವರು ಏನಾದರೂ ಮಾಡು, ಆದರೆ ಹಣ ಮಾತ್ರ ಕೇಳಬೇಡ ಅನ್ನುತ್ತಿದ್ದರು.)

1989 ಫೆಬ್ರವರಿ 13ರ ಸಂಜೆ 4 ಗಂಟೆವರೆಗೆ ಅಲ್ಲಿ ಕೆಲಸಮಾಡಿ, 1989 ಫೆಬ್ರವರಿ 14ರ ಬೆಳಿಗ್ಗೆ 10 ಗಂಟೆಯಿಂದ ರಂಗಾಯಣದಲ್ಲಿ ಕೆಲಸ ಪ್ರಾರಂಭಿಸಿದೆ.

**ರಂಗಾಯಣಕ್ಕೆ ಬಂದದ್ದೂ ಸಹ ಒಂದು ಕತೆ:**

ಈ ಮಧ್ಯೆ ಆದರ್ಶ ಫಿಲಂ ಇನ್‌ಸ್ಟಿಟ್ಯೂಟ್‌ನಲ್ಲಿ ಏನೇನೋ ನಡೆಯಿತು. ಗಿರೀಶ್ ಕಾಸರವಳ್ಳಿ ರಾಜಿನಾಮೆ ಕೊಟ್ಟರು, ವಿದ್ಯಾರ್ಥಿಗಳು ಸ್ಟ್ರೈಕ್ ಮಾಡಿದರು.... ಮಾಲತಿ ಬಾಂಬೆಗೆ ಹೋದರು.

ಪ್ರೇಮಾ ಕೆಲಸ ಬಿಟ್ಟರು. ನಾನೂ ಕೆಲಸ ಬಿಡುವವನಿದ್ದೆ, ಸ್ವಲ್ಪ ದಿನ ಕೆಲಸಕ್ಕೆ ಹೋಗಲಿಲ್ಲ. ಪ್ರಸನ್ನರವರನ್ನು ಭೇಟಿಯಾದಾಗ, 'ಕೆಲಸ ಬಿಡಬೇಡಿ' ಎಂದು ಉಪದೇಶಿಸಿದರು. ಯೋಚನೆ ಮಾಡಿ ಕೆಲಸಕ್ಕೆ

ಹೋದೆ. ಇನ್‌ಸ್ಟಿಟ್ಯೂಟ್‌ನವರಿಗೂ ಅನಿವಾರ್ಯ.... ನನಗೂ ಅನಿವಾರ್ಯವಾಗಿತ್ತು.

ಒಂದು ದಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಶ್ರೀ ಐ. ಎಂ. ವಿಠಲ ಮೂರ್ತಿ ಅವರು ಕರೆಮಾಡಿ ಅವರನ್ನು ಭೇಟಿ ಮಾಡಲು ತಿಳಿಸಿದರು. ಭೇಟಿಯಾದಾಗ, ಮೈಸೂರಿನಲ್ಲಿ ರಂಗಾಯಣ ಪ್ರಾರಂಭ ಆಗುವ ಬಗ್ಗೆ, ಅದರ ಕಾರ್ಯವಿಧಾನದ ಬಗ್ಗೆ ಮುಂತಾಗಿ ಎಲ್ಲವನ್ನೂ ವಿವರಿಸಿ; ರಂಗಪ್ರಮುಖ, ಪ್ರಶಿಕ್ಷಕ ಹುದ್ದೆಗಳ ಬಗ್ಗೆ ತಿಳಿಸಿ, ಅರ್ಜಿ ಹಾಕು ಎಂದರು. ಯೋಚನೆ ಮಾಡುತ್ತೇನೆ ಎಂದು ಹೇಳಿ ಬಂದೆ. ಮುಂದೆ ಒಂದೆರೆಡು ದಿನದ ನಂತರ ಪೇಪರ್‌ನಲ್ಲಿ ಸದರಿ ಹುದ್ದೆಯ ಬಗ್ಗೆ ಜಾಹಿರಾತು ಬಂದಿತ್ತು. ಹೋಗಿ ನಾನೇ ಭೇಟಿಯಾಗಿ 'ಈಗಾಗಲೇ ಜಾಹಿರಾತಿನಲ್ಲಿ ಕಾಣಿಸಿದ ಸಂಬಳಕ್ಕಿಂತ ಹೆಚ್ಚು ಸಂಬಳ ಸಿಗುತ್ತಿದೆ, ಆದರೂ ರಂಗಪ್ರಮುಖ ಹುದ್ದೆಗೆ ಅರ್ಜಿ ಹಾಕುತ್ತೇನೆ' ಎಂದೆ. ಯಾಕೋ ಏನೋ ರಂಗಪ್ರಮುಖ, ಪ್ರಶಿಕ್ಷಕ (ಅಭಿನಯ), ಪ್ರಶಿಕ್ಷಕ (ನೇಪಥ್ಯ) ಮೂರೂ ಹುದ್ದೆಗೆ ಅರ್ಜಿಹಾಕಿ ಎಂದರು. ಅರ್ಜಿ ಹಾಕಿದೆ. ಸಂದರ್ಶನ ಕರೆ ಬಂತು. ಸಂದರ್ಶನಕ್ಕೆ ಹೋದರೆ.... ಅಲ್ಲಿ ಗೋಪಾಲಕೃಷ್ಣ ನಾಯರಿ, ರಘುನಂದನ್, ಜನ್ನಿ, ಬಸವಲಿಂಗಯ್ಯ, ಜಯರಾಂ ತಾತಾಚಾರ್ ಮುಂತಾಗಿ ಒಂದು ಹಿಂಡೇ ಅಲ್ಲಿತ್ತು. ಎಲ್ಲಾ ಎನ್. ಎಸ್. ಡಿ ಪಾಸಾದವರು.

ಇಂಟರ್‌ವ್ಯೂ ಕಮಿಟಿಯಲ್ಲಿ ಶ್ರೀ ಗಿರಡ್ಡಿ ಗೋವಿಂದರಾಜು, ಶ್ರೀ ಜಯತೀರ್ಥ ಜೋಶಿ ಮುಂತಾದವರಿದ್ದರು.

ಗಿರಡ್ಡಿ ಅವರು ಅಲ್ಲಿ ಕೇಳಿದ ಒಂದು ಪ್ರಶ್ನೆ: ಭಾರತದ ನಂ. 1 ಲೈಟಿಂಗ್ ಡಿಸೈನರ್ ಯಾರು? ನಾನು: 'ತಪನ್ ಸೇನ್' ಅಂದೆ.

ಗಿರಡ್ಡಿಯವರು ರಾಮಮೂರ್ತಿ ಅಂತಾರೆ ಅಂದ್ಕೊಂಡಿದ್ದೆ, ಅಂದ್ರು, ಹೊರಬಂದೆ....ಏನೋ ಆತಂಕ.... ಬೆಂಗಳೂರಿಗೆ ವಾಪಸ್ ಬಂದೆ.... ಪ್ರಶಿಕ್ಷಕ (ನೇಪಥ್ಯ) ಹುದ್ದೆಗೆ ಅಪಾಯಿಂಟ್‌ಮೆಂಟ್ ಲೆಟರ್ ಬಂತು.

ನಮ್ಮ ಆದರ್ಶದಲ್ಲಿ ಈ ಎಲ್ಲ ವಿಷಯಗಳನ್ನು ಗೋಪ್ಯವಾಗಿ

ಇಟ್ಟಿದ್ದೆ. 1989 ಫೆಬ್ರವರಿ 13 ರಂದು ಸಂಜೆ 4 ಗಂಟೆಗೆ ಎಲ್ಲರಿಗೂ ಸ್ವೀಟ್ ಕೊಟ್ಟು 'ಹೋಗಿಬರುವೆ' ಅಂದೆ, ಎಲ್ಲರಿಗೂ ಶಾಕ್. ನಮ್ಮ ಎಂ. ಡಿ 'ಏನಪ್ಪ ಇದು ಹೀಗೆ ಬಿಟ್ರೆ ಹೇಗೆ' ಅಂದ್ರು, ಆದರೂ ಕರ್ತವ್ಯ ಪ್ರಜ್ಞೆ 'ಇಲ್ಲಾ ಸರ, ಈ ವರ್ಷದ ಬ್ಯಾಚ್‌ನವರಿಗೆ ಏನೂ ತೊಂದರೆ ಆಗದ ರೀತಿ ಆಗಾಗ ಬಂದು ಪಾಠ ಮಾಡುತ್ತೇನೆ' ಎಂದು ಹೇಳಿ ಎಲ್ಲರಿಗೂ ವಿದಾಯ ಹೇಳಿ 1989, 14 ರಂದು ಬೆಳಿಗ್ಗೆ 10 ಗಂಟೆಗೆ ರಂಗಾಯಣದಲ್ಲಿ ಇದ್ದೆ.

ಇಲ್ಲಿ ಬಂದ ಮೇಲೆ ತಿಳಿದದ್ದು, ಶ್ರೀ ವಿಠಲ ಮೂರ್ತಿ ಅವರು ಶ್ರೀ ರಘುನಂದನ್ ಅವರಿಗೆ, ಬಸವಲಿಂಗಯ್ಯನವರಿಗೆ ಅವರೇ ಹೇಳಿ ಅರ್ಜಿ ಹಾಕಿಸಿದ್ದರಂತೆ. ನನಗೆ ದಕ್ಕಿದ್ದು ಪ್ರಶಿಕ್ಷಕ(ನೇಪಥ್ಯ) ಹುದ್ದೆ. ಹೊಸ ಜೀವನ... ಇಲ್ಲಿ ಅದು ನನ್ನ ಜವಾಬ್ದಾರಿ ಆಗಿರಲಿ ಆಗಿರದೇ ಇರಲಿ ಎಲ್ಲ ಕೆಲಸಗಳನ್ನು ತಲೆಮೇಲೆ ಹೊತ್ತು ಕೆಲಸ ಮಾಡಿದ ತೃಪ್ತಿ.

ಅಲ್ಲಿಂದ....

ಶ್ರೀ ಬಿ. ವಿ. ಕಾರಂತ, ಶ್ರೀ ಬಸವಲಿಂಗಯ್ಯ, ಪ್ರಸನ್ನ, ಚಿದಂಬರರಾವ್ ಜಂಬೆ, ಕಾ. ತ. ಚಿಕ್ಕಣ್ಣ – ಇವರುಗಳ ಜೊತೆ ಏಗಾಟ....

ಪ್ರಸನ್ನ ಇದ್ದಾಗಲೇ ಧಾರವಾಡ ರಂಗಾಯಣದ ಪ್ರಸ್ತಾಪ, ಕೆಲಸವೂ ಪ್ರಾರಂಭವಾಗಿತ್ತು. ಮಧ್ಯದಲ್ಲಿಯೇ ಅವರು ಬಿಟ್ಟು ಹೋದರು.

ಜಂಬೆ ಬಂದ್ರು... ಧಾರವಾಡ ರಂಗಾಯಣಕ್ಕೆ ಮತ್ತೆ ಚಾಲನೆ. ನನ್ನನ್ನು 'ವ್ಯವಸ್ಥಾಪಕ' ಎಂದು ಅಲ್ಲಿಗೆ ಹೋಗಲು ತಿಳಿಸಿದರು. ನಾನು ನಿರಾಕರಣೆ ಮಾಡಿದೆ. ಮತ್ತೆ ಸ್ವಲ್ಪ ದಿನ ಶಾಂತವಾಯಿತು. ಯಾಕೋ ಏನೋ ಮತ್ತೆ ನನ್ನನ್ನ ಕೇಳಿದರು, ವ್ಯವಸ್ಥಾಪಕ ಎಂದು ಹೋಗಲು ಒಪ್ಪಲೇ ಇಲ್ಲ. ಅವರೇ ಮತ್ತೆ 'ಮುಖ್ಯಸ್ಥರು' ಎಂದು ಹೆಸರಿಸಿ ನನ್ನನ್ನು ಅಲ್ಲಿಗೆ ಕಳಿಸಲು ಒಪ್ಪಿ 'ರಂಗಕಿಶೋರ'ವನ್ನು ಅಲ್ಲಿಗೆ ಸ್ಥಳಾಂತರ ಮಾಡಿದರು.

ಈಗಾಗಲೇ ಹಲವಾರು ಸಂಸ್ಥೆಗಳಲ್ಲಿ ಮೊದಲಿಗನಾಗಿ ಕೆಲಸ ನಿರ್ವಹಿಸಿದ ನನಗೆ ಇದೇನೂ ಕಷ್ಟಕರ ಅನ್ನಿಸಲಿಲ್ಲ. ಆದರೂ ಹಲವು

ಕಷ್ಟಗಳನ್ನು ನಾನೇ ಮೈಮೇಲೆ ಎಳೆದುಕೊಂಡು ಸಿಕ್ಕ ಅವಕಾಶವನ್ನು ಇದ್ದ ಮಿತಿಯಲ್ಲೇ ಬಳಸಿಕೊಂಡು ಕೆಲಸ ಮಾಡಿದ ತೃಪ್ತಿ.....

'ನೀನು ನಿವೃತ್ತನಾಗಿದ್ದೀಯ' ಎಂದು ಒಂದು ಕಾಗದವನ್ನೂ ಕೊಡದೇ ಕಳಿಸಿದರು.

ಈಗ ಎಂಟು ವರ್ಷಗಳಿಂದ ರಂಗಾಯಣದಿಂದ ನಿವೃತ್ತ ಜೀವನ.....

ರಂಗಭೂಮಿಯಿಂದಲ್ಲ.....

ಹಲವು ಸೋಲು, ಗೆಲವುಗಳನ್ನು ಕಂಡಿರುವ ಪಿ. ಗಂಗಾಧರಸ್ವಾಮಿ ಇಂದೂ, ಸೃಜನಶೀಲರಾಗಿ ರಂಗಭೂಮಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇಟ್ಟ ಹೆಜ್ಜೆಗಿಂತ ಇಡಬೇಕಾದ ಹೆಜ್ಜೆಗಳು ಇನ್ನೂ ಇವೆ ಎನ್ನುವ ವಾಸ್ತವದ ಅರಿವಿನ ಆದರ್ಶವನ್ನೂ ಕಾಯ್ದಿಟ್ಟುಕೊಂಡಿದ್ದಾರೆ. ಅವರ ಮುಂದಿನ ರಂಗಹೆಜ್ಜೆಯನ್ನು, ನಿಮ್ಮೊಂದಿಗೆ ನಾನೂ ನಿರೀಕ್ಷಿಸುತ್ತಿದ್ದೇನೆ.

❑

## ಅನುಬಂಧ-1

# ಸಂದರ್ಶನಗಳ ಆಯ್ದ ಭಾಗಗಳು

ಕನ್ನಡದ ಹಲವು ಪ್ರಮುಖ ಪತ್ರಿಕೆಗಳು ಪಿ. ಗಂಗಾಧರಸ್ವಾಮಿ ಅವರ ಬದುಕು ಮತ್ತು ಸಾಧನೆಯ ಬಗ್ಗೆ ಲೇಖನಗಳನ್ನು ಪ್ರಕಟಿಸಿವೆ. ಹಾಗೆಯೇ ಅವರ ಅಭಿಪ್ರಾಯಗಳನ್ನು ಸಂದರ್ಶನಗಳ ಮೂಲಕ ದಾಖಲಿಸಿದೆ. ಅಂತಹ ಸಂದರ್ಶನಗಳಲ್ಲಿನ ಆಯ್ದ ಕೆಲವು ಭಾಗಗಳು.

## ರಂಗಪರಿಚಾರಕ ಪಿ. ಗಂಗಾಧರಸ್ವಾಮಿ

ಗಂಗಾಧರಸ್ವಾಮಿ ಹವ್ಯಾಸಿ ತಂಡಗಳ ಜೊತೆ ನಿಕಟ ಸಂಪರ್ಕವನ್ನಿಟ್ಟು ಕೊಂಡವರು. ಅವುಗಳಲ್ಲಿ – ಹೊಸಪೇಟೆ ಮಾಧ್ಯಮದ ಚೋರ ಚರಣದಾಸ, ಮೈಸೂರಿನ ಅಮರ ಕಲಾಸಂಘದ ಗೌತಮಬುದ್ಧ ಮತ್ತು ಜೈಸಿದನಾಯ್ಕ, ಬಾಗಲಕೋಟೆ ಸೃಜನ ವೇದಿಕೆಯ ದೊಡ್ಡಪ್ಪ, ಇಲಕಲ್ಲಿನ ಸ್ನೇಹರಂಗದ ಹಾವುತುಳಿದೇನ ಮಾನಿನಿ, ಚಾಮರಾಜನಗರದ ಶಾಕುಂತಲಾ ಕಲಾವಿದರ ಅರಹಂತ, ಮೈಸೂರಿನ ಜೆ. ಎಸ್. ಎಸ್. ಕಲಾಮಂಟಪದ ಬಸವೇಶ್ವರ ಇತ್ಯಾದಿ ಮುಖ್ಯವಾದವು. ಜಾನಪದ ರಂಗಭೂಮಿ ಅದರಲ್ಲೂ ಮುಖ್ಯವಾಗಿ ದೊಡ್ಡಾಟದ ವೈಶಿಷ್ಟ್ಯಗಳನ್ನು ತಮ್ಮ ನಾಟಕಗಳ ಮುಖ್ಯ ದ್ರವ್ಯವನ್ನಾಗಿ ಬಳಸಿಕೊಂಡಿದ್ದಾರೆ. ಅವರ ಈ ಪ್ರಯೋಗಗಳ ಕುರಿತು ಕಾಲಕಾಲಕ್ಕೆ ಬಂದ ಪತ್ರಿಕಾ ವಿಮರ್ಶೆಗಳು ಗಂಗಾಧರ ಸ್ವಾಮಿಯವರ ಪ್ರತಿಭೆಯನ್ನು ಒರೆಗೆಹಚ್ಚಿ ನೋಡಿವೆ.

ವಿಶಾಲವಾದ ಹಣೆ, ಅರ್ಧ ಬೊಕ್ಕತಲೆ, ಹಿಂದೆ ಸರಿಸಿ ಬಾಚಿದ ಬಿಳಿಕೂದಲು, ದುಂಡನೆಯ ಮುಖದ ತೋರ ಮೈ; ದೊಗಳೆಯಾದ ಉದ್ದದ ಸರಳ ಜುಬ್ಬಧಾರಿಯಾದ ಗಂಗಾಧರಸ್ವಾಮಿ ರಂಗಭೂಮಿಯ ಯಾವ ಕೆಲಸವನ್ನಾದರೂ ನಿಷ್ಠೆಯಿಂದ ಮಾಡುವ; ಅಸಹನೆ, ಕೋಪಗಳನ್ನು ಅನಗತ್ಯವಾಗಿ ಹರಿಯಬಿಡದಿರುವ; ನಿಧಾನ ಮತ್ತು ತಾಳ್ಮೆಯ ಪ್ರವೃತ್ತಿಯ ಸ್ನೇಹಜೀವಿ.

ರಂಗಭೂಮಿಯನ್ನೇ ಬದುಕಿನ ಆಸರೆಯಾಗಿ ಆರಿಸಿಕೊಂಡಿರುವ ಗಂಗಾಧರಸ್ವಾಮಿಗೆ ಅದರ ಬಗ್ಗೆ ಯಾವ ಬೇಸರವೂ ಇಲ್ಲ. ಆರ್ಥಿಕವಾಗಿ

ಕಷ್ಟಗಳನ್ನು ಅನುಭವಿಸಿದರೂ ರಂಗಭೂಮಿ ಒದಗಿಸಿಕೊಟ್ಟಿರುವ ಸಮೃದ್ಧ ಅನುಭವಕ್ಕೆ ಅವರು ಋಣಿಯಾಗಿದ್ದಾರೆ. ವ್ಯಾಪಕವಾದ ಕಾರ್ಯಕ್ಷೇತ್ರವನ್ನು, ರಂಗಗೆಳೆಯರನ್ನು ಹೊಂದಿರುವ ಗಂಗಾಧರಸ್ವಾಮಿ ತಮ್ಮ ಕೊಡುಗೆ ಅಪಾರ, ಶ್ರೇಷ್ಠ ಎಂದು ಎಂದೂ ಬೀಗಿದವರಲ್ಲ. ಬಂದದ್ದನ್ನು ಬಂದ ಹಾಗೆಯೇ ಸ್ವೀಕರಿಸುವ ಸ್ವಭಾವದ ಗಂಗಾಧರಸ್ವಾಮಿ ಬೆಳೆಯುವವರಿಗೆಲ್ಲ ಅಣ್ಣನಾಗಿ, ಬೆಳೆದವರಿಗೆ ತಮ್ಮನಾಗಿ ತನ್ನ ರಂಗಕೈಂಕರ್ಯವನ್ನು ಪ್ರಾಮಾಣಿಕವಾಗಿ ಮಾಡುತ್ತಲಿರುವ ಕಷ್ಟಸಹಿಷ್ಣು ಸಹೃದಯಿ.

ಬಿ. ವಿ. ಕಾರಂತ, ಪ್ರಸನ್ನ, ಚಿದಂಬರರಾವ್ ಜಂಬೆ, ಸಿಜಿಕೆ, ಬಸವಲಿಂಗಯ್ಯ ಮುಂತಾದ ಕನ್ನಡದ ದಿಗ್ಗಜರೊಂದಿಗೆ ಆತ್ಮೀಯ ಒಡನಾಟವನ್ನು; ಹೊರಗಿನ ರಂಗತಜ್ಞರೊಂದಿಗೆ ಕಾರ್ಯನಿರ್ವಹಿಸಿದ ಅನುಭವ ಶ್ರೀಮಂತಿಕೆಯನ್ನು ಗಂಗಾಧರ ಸ್ವಾಮಿ ಹೊಂದಿದ್ದಾರೆ. 1963 ರಲ್ಲಿ ನಾಟಕ ಅಕಾಡೆಮಿ ಗಂಗಾಧರಸ್ವಾಮಿಯವರಿಗೆ ಪ್ರಶಸ್ತಿ ನೀಡಿ ಗೌರವಿಸಿದೆ. ಪ್ರಸನ್ನ, ಸಿಜಿಕೆಯ ನಂತರ ಇದೀಗ ಕರ್ನಾಟಕದ ಅತ್ಯಂತ ಪ್ರತಿಷ್ಠಿತ 'ಶ್ರೀ ಶಿವಕುಮಾರ' ಪ್ರಶಸ್ತಿ ಹುಡುಕಿಕೊಂಡು ಬಂದಿರುವುದು ನಿಜಕ್ಕೂ ಗಂಗಾಧರಸ್ವಾಮಿಯವರ ರಂಗಕಾಯಕಕ್ಕೆ ಹಿಡಿದ ಕನ್ನಡಿಯಾಗಿದೆ.

–ಎಚ್. ಎಸ್. ಉಮೇಶ

◆

## ಸಮಾಜ ಪರಿವರ್ತನೆಗೆ ನಾಟಕ ಶಿಬಿರ

ರಂಗಭೂಮಿ ಬಗ್ಗೆ ಜನರ ಧೋರಣೆಯನ್ನು ಬದಲಾಯಿಸುವ ಒಲವನ್ನು ಗಳಿಸುವ ಹಾಗೂ ಹೊಸ ಪ್ರತಿಭೆಯನ್ನು ಹುಡುಕುವ ಪ್ರಯತ್ನವಾದ ನಾಟಕ ಶಿಬಿರಗಳನ್ನು ಕರ್ನಾಟಕ ನಾಟಕ ಅಕಾಡೆಮಿ ಮತ್ತು ಹವ್ಯಾಸಿ ತಂಡಗಳು ರಾಜ್ಯದ ನಾನಾ ಕಡೆಗಳಲ್ಲಿ ನಡೆಸಿಕೊಂಡು ಬರುತ್ತಿವೆ. ನಿರ್ದೇಶಕರು ಮತ್ತು ರಂಗಭೂಮಿಯ ಕಾರ್ಯಕರ್ತರು ಇಂಥ ಶಿಬಿರಗಳನ್ನು ನಡೆಸುತ್ತಿದ್ದಾರೆ. ನಾಟಕ ಶಿಬಿರ ಎಂದ ತಕ್ಷಣ ನೆನಪಾಗುವ ಹೆಸರು ಗಂಗಾಧರಸ್ವಾಮಿಯವರದು. ಅತಿ ಹೆಚ್ಚು ನಾಟಕ ಶಿಬಿರಗಳನ್ನು ನಡೆಸಿರುವ ಗಂಗಾಧರಸ್ವಾಮಿಯವರನ್ನು ರಂಗಭೂಮಿ ವಲಯಗಳಲ್ಲಿ ಪ್ರೀತಿಯಿಂದ 'ಶಿಬಿರ ಚಕ್ರವರ್ತಿ' ಎಂದು ಚುಡಾಯಿಸುವುದೂ ಉಂಟು.

ಮೂರು ವರ್ಷ ಭರತ ನಾಟ್ಯ ಕಲಿತಿರುವ, ಬೆಂಗಳೂರು ವಿಶ್ವವಿದ್ಯಾನಿಲಯದ ಸಂಗೀತ ನೃತ್ಯ ನಾಟಕಗಳನ್ನು ಕಲಿತು ಪದವೀಧರರಾಗಿರುವ ಗಂಗಾಧರಸ್ವಾಮಿಯವರ ಮೊದಲ ಒಲವು ನಾಟಕ ಶಿಬಿರ. ಕಂಪನಿ ನಾಟಗಳಲ್ಲೂ ಪಾತ್ರ ಮಾಡುತ್ತಿದ್ದ ಇವರಿಗೆ ಶಿಬಿರಗಳನ್ನು ನಡೆಸಲು ಪ್ರೇರಣೆಯಾದದ್ದು ರಂಗಭೂಮಿಯಲ್ಲಿ ದುಡಿಯುವ ನಟ-ನಟಿಯರ ಬಗ್ಗೆ ಸಮಾಜದ ವಕ್ರ ಧೋರಣೆಯ ಬಿಸಿ ತಾಕಿದಾಗ. ರಂಗಭೂಮಿ ಬಗ್ಗೆ, ರಂಗಭೂಮಿ ಕಲಾವಿದರ ಬಗ್ಗೆ ಜನರಲ್ಲಿ ಸದ್ಭಾವನೆ ಮೂಡಿಸಲು ನಾಟಕ ಶಿಬಿರಗಳನ್ನು ನಡೆಸಲು ನಿರ್ಧರಿಸಿದರು. ಈವರೆಗೆ 227 ಕ್ಕೂ ಹೆಚ್ಚು ನಾಟಕ ಶಿಬಿರಗಳನ್ನು ನಡೆಸಿರುವ ಗಂಗಾಧರಸ್ವಾಮಿಯವರಿಗೆ ತಮ್ಮ ನಂಬಿಕೆ ಹುಸಿಯಾಗಿಲ್ಲ ಅನ್ನುವ ತೃಪ್ತಿ ಇದೆ.

**ಜಿ. ಎನ್. ರಂಗನಾಥರಾವ್**

4-9-1983, ಪ್ರಜಾವಾಣಿ

◆

## ಗೇಲಿ ಮಾಡುವುದು ರಾಜಕೀಯ ನಾಟಕವಲ್ಲ

**ವೃತ್ತಿ ರಂಗಭೂಮಿಗೆ ಪರ್ಯಾಯ ರಂಗಭೂಮಿ ಕಟ್ಟಬಯಸುವ ದಕ್ಷ ನಿರ್ದೇಶಕ - ಗಂಗಾಧರಸ್ವಾಮಿ**

ಕರ್ನಾಟಕದ ಹೆಸರಾಂತ ನಾಟಕ ನಿರ್ದೇಶಕರಲ್ಲಿ ಒಬ್ಬರಾದ ಗಂಗಾಧರಸ್ವಾಮಿಯವರು ಒಂದು ಕಾಲದಲ್ಲಿ ಬೆಂಗಳೂರಿನ ಓಣಿಗಳಲ್ಲಿ ಸೈಕಲ್ ಮೇಲೆ ಅಡ್ಡಾಡಿ ಸೀರೆ ಮಾರುತ್ತಿದ್ದರೆಂದರೆ ಮೋಜೆನಿಸುವುದಿಲ್ಲವೆ? ಬದುಕಿನ ನಾನಾ ಬಗೆಯ ಕಷ್ಟಕೋಟಲೆಗಳ ಕುಲುಮೆಯಲ್ಲಿ ಕುದಿದು ಅಂಜಿ ಅಳುಕದೆ, ಉಂಟಾದ ಅನುಭವಗಳಿಂದ ಒಂದು ರುಜು ಮಾರ್ಗವನ್ನು ಕಂಡುಕೊಳ್ಳಬಲ್ಲ ವ್ಯಕ್ತಿ ಮಾತ್ರ ತನಗಾಗಿ ಮತ್ತು ಸಮಾಜಕ್ಕಾಗಿ ದುಡಿದು ಹೊಸದೇನನ್ನಾದರೂ ಕೊಡಬಲ್ಲ. ಗಂಗಾಧರಸ್ವಾಮಿಯವರು ಈ ರೀತಿಯಲ್ಲಿ ರೂಪುಗೊಂಡವರು.

**ಸಂದರ್ಶಕ:** ನೀವು ಸ್ವತಂತ್ರವಾಗಿ ನಾಟಕ ನಿರ್ದೇಶನ ಮತ್ತು ವರ್ಕ್‌ಶಾಪ್‌ಗಳನ್ನು ಮಾಡಬಹುದಿತ್ತಲ್ಲ? ಸಮುದಾಯಕ್ಕೆ ಯಾಕೆ ಸೇರಿದಿರಿ? ಏನು ಆಕರ್ಷಣೆ ಅವರಲ್ಲಿ ಕಂಡುಬಂತು? ಪ್ರಸನ್ನರ ಪರಿಚಯದಿಂದ ಪ್ರಭಾವಿತರಾದಿರೋ?

**ಸ್ವಾಮಿ:** ಮೊದಲು ಸಮುದಾಯದಲ್ಲಿ ಕೆಲಸಗಾರನಾಗಿ, ನಟನಾಗಿ ಸೇರಿದೆ, ಬರಬರುತ್ತಾ, ಆ ಸಂಸ್ಥೆಯ ತತ್ವಗಳು ನನಗೆ ಹಿಡಿಸಿದವು. ಅಲ್ಲದೇ ನಾನು

ಬೆಳೆದು ಬಂದ ಪರಿಸರವೂ ಇದಕ್ಕೆ ಕಾರಣವಾಯಿತು. ಸಮುದಾಯಕ್ಕೆ ಸೇರುವ ಮುನ್ನ ನಾನು ಎದುರಿಸಿದ ಘಟನೆಗಳೆಲ್ಲ ಏನೋ 'ಚಾನ್ಸ್' ಹೀಗೆ ಆಕಸ್ಮಿಕ ಎಂದು ತಿಳಿದಿದ್ದೆ. ಆದರೆ ಸಮುದಾಯದ ಸಂಪರ್ಕದಿಂದ ಇವು ಚಾನ್ಸ್ ಅಲ್ಲ; ಈ ಘಟನೆಗಳಿಗೆ ನಿಶ್ಚಿತವಾದ ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ ಕಾರಣಗಳಿವೆ ಎಂದು ತಿಳಿಯಿತಲ್ಲದೆ, ಅವುಗಳ ಪರಿಹಾರದ ಮಾರ್ಗವೂ ಕಂಡುಕೊಳ್ಳಲು ಸಾಧ್ಯವೆಂದು ವೇದ್ಯವಾಯಿತು. ನನಗೆ ಹಿಡಿಸಿದ ಇನ್ನೊಂದು ಮಾತೆಂದರೆ, ಜನರ ಹತ್ತಿರ ಹೋಗುವ, ಅವರ ಸಮಸ್ಯೆಗಳನ್ನು ಅರಿಯುವ ಮತ್ತು ನಾಟಕ ಮಾಧ್ಯಮದಿಂದ ಅವರಲ್ಲಿ ಸಮಕಾಲೀನ ಪ್ರಜ್ಞೆ ತಂದುಕೊಡುವ ಈ ಸಂಸ್ಥೆಯ ಕಾರ್ಯಚಟುವಟಿಕೆ. ನಮ್ಮ ಸಮುದಾಯ ಜಾಥಾಗಳು ಈ ಕೆಲಸವನ್ನು ಸಮರ್ಥವಾಗಿ ಮಾಡಿದುವೆಂದೇ ನನ್ನ ತಿಳಿವಳಿಕೆ.

ಉತ್ತರ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕದಲ್ಲಿ ಸಮುದಾಯ ಜಾಥಾ ಹೊರಟಾಗ ನಾನೂ (ಸಂದರ್ಶಕ) ಅದರಲ್ಲಿ ಭಾಗಿಯಾಗಿದ್ದೆ. ಸ್ವಾಮಿಯವರು ಆ ಜಾಥಾದಲ್ಲಿ ಮನಮುಟ್ಟಿ ತನುಮುಟ್ಟಿ ಕೆಲಸಮಾಡುತ್ತಿದ್ದರು. ಆ ಜಾಥಾಗಳು ತುಂಬಾ ಪರಿಣಾಮಕಾರಿಯಾಗಿದ್ದವು.

**ಸಂದರ್ಶಕ:** ರಾಜಕೀಯ ನಾಟಕಗಳೆಂದರೇನು?

**ಸ್ವಾಮಿ:** ರಾಜಕಾರಣಿಗಳನ್ನು ಬೈಯುವುದಾಗಲೀ ಅಥವಾ ಗೇಲಿ ಮಾಡುವುದಾಗಲೀ ರಾಜಕೀಯ ನಾಟಕಗಳಲ್ಲ, ಒಳ್ಳೆಯ ರಾಜಕೀಯ ನಾಟಕಗಳಲ್ಲ. ಒಳ್ಳೆಯ ಮತ್ತು ಕೆಟ್ಟ ರಾಜಕಾರಣವನ್ನು ಸೂಚ್ಯವಾಗಿ ತೋರಿಸುವುದು, ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸುವುದು, ಸಮಕಾಲೀನ ರಾಜಕೀಯದ ಯಥಾವತ್ತಾದ ಆದರೂ ಕಲಾತ್ಮಕವಾದ ಚಿತ್ರಣ ಕೊಡುವುದು ರಾಜಕೀಯ ನಾಟಕಗಳ ಉದ್ದೇಶವಾಗಿರಬೇಕು. ಇತ್ತೀಚೆಗೆ ಕನ್ನಡದಲ್ಲಿ ಒಳ್ಳೆಯ ನಾಟಕಗಳು ಬಂದಿಲ್ಲ. ಸೃಜನಶೀಲತೆಯ ಕೊರತೆಯೇ ಇದಕ್ಕೆ ಕಾರಣವೆನಿಸುತ್ತದೆ. ಒಂದು ದೃಷ್ಟಿಯಿಂದ ಷೇಕ್ಸ್‌ಪಿಯರ್ ನಾಟಕಗಳು ಪ್ರಸ್ತುತವೆನಿಸುತ್ತದೆ.

**ಸಂದರ್ಶಕ:** ಮೂರನೆಯ ರಂಗಭೂಮಿ ಎಂದರೇನು? ತಿಳಿಸುವಿರಾ?

**ಸ್ವಾಮಿ:** ಇದು ಬಾದಲ್ ಸರ್ಕಾರ್ ಅವರಿಂದ ಪ್ರಾರಂಭವಾಯಿತು. ಶಿಷ್ಟ ಮತ್ತು ಜಾನಪದ ರಂಗಭೂಮಿ ಮೊದಲನೆಯ ರಂಗಭೂಮಿ. ವಿದೇಶಿ ಪ್ರಭಾವದ ರಂಗಭೂಮಿ ಎರಡನೆಯ ರಂಗಭೂಮಿ. ಇವುಗಳಿಂದ ಭಿನ್ನವಾದ, ಆದರೆ ಮೊದಲನೆಯ ರಂಗಭೂಮಿಯ ಆಶಯ ಹೊತ್ತು, ಎರಡನೆಯ ರಂಗಭೂಮಿ

ತಂತ್ರ ಬಳಸಿ ಹೆಚ್ಚು ಸೌಕರ್ಯ ಬೇಕಿಲ್ಲದೆ, ಹೆಚ್ಚುಹೆಚ್ಚಾಗಿ ಮನುಷ್ಯ ದೇಹವನ್ನೇ ಅವಲಂಬಿಸಿದ ಪರ್ಯಾಯ ರಂಗಭೂಮಿಯೇ ಮೂರನೆಯ ರಂಗಭೂಮಿ. ಟಿ. ವಿ., ಚಲನಚಿತ್ರ ಮುಂತಾದ ಸ್ರೀಮಂತ ಮಾಧ್ಯಮಗಳನ್ನು ಇದು ತಿರಸ್ಕರಿಸುತ್ತದೆ. ಮನುಷ್ಯ ದೇಹ, ಉಸಿರು ಮತ್ತು ಅಂತರಿಕ ಪ್ರೇರಣೆಗಳಲ್ಲಿ ಪ್ರತಿಮೆಯಾಗಿ ರೂಪುಗೊಳ್ಳುತ್ತದೆ. ಸಾಮಾಜಿಕ ವ್ಯವಸ್ಥೆಯ ಬೇರುಗಳೊಂದಿಗೆ ಇದರ ಘರ್ಷಣೆ. ಪ್ರೀತಿಯನ್ನು ಪ್ರೇರೇಪಿಸುವ ಮಾನವೀಯ ಮೌಲ್ಯವುಳ್ಳದ್ದು. ಎಲ್ಲಕ್ಕೂ ಮಿಗಿಲಾಗಿ ಶ್ರೀಮಂತ ರಂಗಪರಿಕರಗಳನ್ನು ಧಿಕ್ಕರಿಸಿ ಪರಿಸರಕ್ಕೆ ಹೊಂದಿ ದೊರಕುವ ಸರಳ ಸುಲಭ ವಸ್ತುಗಳಿಂದ ಜನರ ಮಧ್ಯದಲ್ಲಿ ಏರ್ಪಡುವ ರಂಗಭೂಮಿ ಇದು.

**ಸಂದರ್ಶಕ: ಶಾಂತರಸ**
ತರಂಗ, 7 ಜುಲೈ, 1985

♦

## ಶಿಬಿರ ಚಕ್ರವರ್ತಿ–(ಜನ) ಸಮುದಾಯ ಕೊಟ್ಟ ಬಿರುದು

**• ನಿಮ್ಮ ವೈವಾಹಿಕ ಬದುಕು ಶುರುವಾದದ್ದು ಹೇಗೆ?**

ಇಂತಾ ಬಣ್ಣದ ದಿನಗಳಲ್ಲೇ ಶೀಲಾಳ ಜೊತೆ Love ಬೆಳೆದಿತ್ತು. 1976 ರಲ್ಲಿ Registered Marriage ಮಾಡ್ಕೊಂಡೆ.... ಆದರೆ ಮನೆಯಲ್ಲಿ ಹೇಳಿರಲಿಲ್ಲ. ಒಂದು ದಿನ ನಾನು ನಮ್ಮ ಊರು ಮುಂಡರಗಿಗೆ ಹೋದೆ.... ನಮ್ಮ ಮಾಗುಂಡಯ್ಯ 'ಆಜಾದ್ ಹಿಂದ್ ಫೌಜ್' ದಲ್ಲಿದ್ದವರಲ್ಲ? ಬಾಳ ಸ್ಟ್ರಿಕ್ಟು. ಬರ್ಮಾ, ಸಿಲೋನ್‌ನಲ್ಲೆಲ್ಲಾ ಮಿಲ್ಟ್ರಿ ಶಿಸ್ತಿನ ಶಿಪಾಯಿಯಾಗಿ ಕೆಲಸ ಮಾಡಿದವರು. ನಾನ್ಬೇರೆ ಮದುವೆಯಾದದ್ದು ಹೇಳಿರಲಿಲ್ಲ. ಒಂದಿನಾ.... ಲಕ್ಷ್ಮೇಶ್ವರದ ಕಲ್ಮಠದವರ ಹುಡುಗೀನ್ನ ನೋಡೋದಕ್ಕೆ ಕರ್ಕೊಂಡು ಹೋದ್ರು. ಹುಡುಗಿ ತಂದೆ ಹೀಗೆ ಲೋಕಾಭಿರಾಮವಾಗಿ ಅದೂ.... ಇದೂ ಮಾತಾಡ್ತಾ 'ಅಂದ್ಹಾಗೆ ಇನ್ಮುಂದ ಏನ್ಮಾಡ್ತೀಯಪ್ಪಾ...?' ಅಂದ್ರು.... ನಾನು 'ನಂದೂ Drama Degree ಆಗೇದ.... ನಾಟಕ ಕಟ್ತೀನಿ, ನಾಟಕ ಬರೀತೀನಿ, ನಾಟಕ ಆಡಿಸ್ತೀನಿ ಅಂದೆ. ಹುಡುಗಿ ತಂದಿ ಚಟಕ್ಕನೆ ಎದ್ದು ಹೋಗಿ ಚಹಾ ತಂದವರನ್ನ ಹೊಳ್ಳಿ ಒಳಗ ಕರ್ಕೊಂಡು ಹೋದ್ರು. ಮುಂದ ಬಸ್‌ಸ್ಟ್ಯಾಂಡಿನಾಗ ನಮ್ಮಪ್ಪ ಬೆಂಗಳೂರಿಗೆ ಎಷ್ಟದ ಚಾರ್ಜು? ನಾನು ರೂ. 83/– ಅಂದೆ. ಅವರು ಕಿಸೆಯಿಂದ ರೂ. 83ನ್ನೇ ತಗದು....

ಇನ್ನ ಮ್ಯಾಲ ಮುಂಡರಗಿ ಮುಖ ನೋಡ್ಬೇಡ ಅಂತ 83ರೂಪಾಯಿಯನ್ನು ನನ್ನ ಕೈಯಾಗ ತರುಕಿ – ಕೆಕ್ಕರಿಸಿ... ಬೆನ್ನ ಮಾಡಿದ್ರು, ಅಂದಿನಿಂದ ಇಂದಿನತನ ನಾನು ರಂಗಭೂಮಿಗೆ ವಿಮುಖನಾಗಿಲ್ಲ. ಹಿಂದಕ್ಕ ಹೆಜ್ಜೆ ಇಟ್ಟಿಲ್ಲ. ಮುಂದ ಮುಂದ ಓಡೋದು ಬಿಟ್ಟಿಲ್ಲ.... ವಯಸ್ಸಾತು ಮೊದಲಿನ ಕಸುವು, ಊಟ, ಓಟ, ಕಣ್ಣೋಟ ಹ್ಯಂಗಿರ್ತದ?

- **ಹೌದು ಬದುಕಿನ ಓಟ ನಿರಂತರವಾಗಿದ್ರೂ.... ಕಷ್ಟ–ಸುಖ, ದುಃಖ ದುಮ್ಮಾನದಿಂದ ಕೂಡಿದ್ರೂ ನಿಮ್ಮ ನಾಟಕಗಳಲ್ಲಿ ಒಂದು Phylosophy ಅಂತಿರ್ತದ.... Clarity ಅಂತಿರ್ತದ.... ಬದುಕಿನ ಕಾಳಜಿ ಅಂತಿರ್ತದ.... ಇವುಗಳನ್ನ ನೀವು ಹೆಂಗ ಮೈಗೂಡಿಸಿಕೊಂಡ್ರಿ...?**

ಮದುವ್ಯಾದ ಹೊಸದರಲ್ಲಿ ನನಗೆ ಕೆಲಸನೇ ಇರಲಿಲ್ಲ ಅಂತ ಹೇಳಿದ್ನಲ್ಲಾ? ನಾಟಕ ಓದೋದು, ನಾಟಕ ಮಾಡೋದು... ಯಾರಾದ್ರೂ ತೋರಿಸಿದ್ರೆ ನಾಟಕ ನೋಡೋದು.... ಇದು ಬಿಟ್ರೆ ಬೇರೆ ಕೆಲಸಿರಲಿಲ್ಲ. ಕೈಯಲ್ಲಿ ದುಡ್ಡೂ ಇರ್ತಿರಲಿಲ್ಲ. ಪ್ರಸನ್ನ ಅವರ ಜೊತೆ ಸಖ್ಯ ಬೆಳೆದಿತ್ತು.... ಅವರು ಯಾರ ಯಾರ್ನೊ ಮನೆಗೆ ಕರ್ಕೊಂಡು ಹೋಗೋರು.... ಅಲ್ಲಿ ಚರ್ಚೆ, ಚರ್ಚೆ, ಚರ್ಚೆ... ಎಂ. ಕೆ. ಭಟ್ಟ ಅವರು CPI(M) ಸೆಕ್ರೆಟರಿ, ಗಿ. ಉ. ಏ ನಾಯರ್, ಸೂರಿ ಇವರೆಲ್ಲ ಒಂದು Leftist Phylosophy ಹೇಳ್ತಿದ್ರು.... ಆಗ ಗೊತ್ತಾಯ್ತು.... ಸಮುದಾಯದಂತ ಸಂಘಟನೆಯ ಮೌಲ್ಯ, ರಂಗ ಬದ್ಧತೆಗಳ ಬಗ್ಗೆ ಕುತೂಹಲ ಇದ್ದಿದ್ದರಿಂದ್ಲೊ ಅಥವಾ ಅಂದಿನ ಚರ್ಚೆಗಳು.... Covnince ಆಗಿದ್ರಿಂದ್ಲೂ.... ನಾನೂ 'ಸಮುದಾಯ' ಸಂಘಟನೆಯಲ್ಲಿ ಪೂರ್ಣಾವಧಿ ಕಾರ್ಯಕರ್ತ ಅಂತ ಕೆಲಸಾ ಮಾಡೋಕೆ ಶುರುಮಾಡ್ದೆ. ಆಗ ನನಗೆ ತಿಂಗಳಿಗೆ 500/–ಕೊಡ್ಬೇಕು ಅಂತ ತೀರ್ಮಾನ ಆಗಿತ್ತು (ಇದು Central Committee ತೀರ್ಮಾನ) ಆದ್ರೆ ಸಂಬಳ ಸರಿಯಾಗಿ ಸಿಗ್ತಿರಲಿಲ್ಲ.

- **ನಿಮ್ಮ ನೆನಪಿನಲ್ಲಿ ಅಚ್ಚಳಿಯದೇ ಉಳಿದ ಕಾರ್ಯಾಗಾರ ಮತ್ತು ನಾಟಕಗಳು ಯಾವುವು?**

ನನ್ನ ಬದುಕಿನ ನಿರಂತತೆಯೇ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ರಂಗಕಾರ್ಯಾಗಾರ ಮಾಡುವುದಾಗಿತ್ತು, ಯಾಕಂದ್ರೆ.... ಒಂದು ಊರಲ್ಲಿ ಮಾಡುವ ರಂಗಕಾರ್ಯಾಗಾರದ ಜವಾಬ್ದಾರಿ ಮತ್ತು ನಿರ್ದೇಶನ ಸಂಭಾವನೆ – ಆಯಾ ಊರಿನವರೇ ಕೊಡಬೇಕಾದ್ದರಿಂದ – ನನ್ನ ಬದುಕಿನ ಚಲನೆ

ತೊಂದರೆ ಇಲ್ಲದೆ ನಡೀತಿತ್ತು ಅನಕೊಂಡಿದ್ದೆ. ಆದ್ರೆ.... ಎಲ್ಲಾ ಯೂನಿಟ್‌ಗಳಲ್ಲಿ ಸಮಸ್ಯೆಗಳೇ ಕಗ್ಗಂಟಾಗಿರ್ತಿದ್ದವು.

ಹಾವೇರಿ, ಧಾರವಾಡ, ಬಳ್ಳಾರಿ, ಬಾಗಲಕೋಟೆ, ಕೊಪ್ಪಳ, ಸಿಂಧನೂರು, ರಾಚಯೂರು, ಗುಲ್ಬರ್ಗಾ – ಹೀಗೆ ಒಂದಾದ ಮೇಲೋಂದು.... ಒಂದಾದ ಮೇಲೊಂದು.... ಕಾರ್ಯಾಗಾರ ಮಾಡ್ತಾ ಬಂದೆ. ಬಹಳ ತ್ರಾಸಿನಿಂದ ಕಟ್ಟಿದೆ. ಒಮ್ಮೊಮ್ಮೆ ನನ್ನ ರೂಮಿನ ಬಾಡಿಗೆ ಕಟ್ಟೊಕ್ಕೂ ಆಗದೆ.... ಕಾರ್ಯಾಗಾರ ನಿಲ್ಲಿಸಿ, ಮತ್ತೆ ಪ್ರಾರಂಭ ಮಾಡಿದ ದಿನಗಳು.... ನನ್ನ ಅನುಭವದ ಗಟ್ಟಿ ಹೆಜ್ಜೆಗಳನ್ನು ಸಾಕ್ಷಿಕರಸ್ತವೆ. ಇರಲಿ.... ನನ್ನ ಹಾಗೆ ನನ್ನ ಹೆಂಡತಿ ಶೀಲಾ ಸ್ವಾಮಿಯೂ ಸಂಘಟನೆಗೆ ಬಹಳ ದುಡಿದಿದ್ದಾಳೆ. ನಾನು ಸಮುದಾಯ ಅಂದ್ರೆ ಅವಳೂ ಸಮುದಾಯ ಅಲ್ವೆ? ನನ್ನ ಹೆಚ್ಚಿನ ನಾಟಕಗಳಿಗೆ Backstage ಅಂದ್ರೆ.... ರಂಗದ ಹಿಂದಿನ ಕೆಲಸಕ್ಕೆ ಸಹಾಯವಾಗ್ತಿದ್ಲು. 'ದೊಡ್ಡಪ್ಪ', 'ಹಾವು ತುಳಿದೇನ ಮಾನಿನಿ', 'ಚಿಕ್ಕದೇವಭೂಪ', 'ಕತ್ತಲೆ ದಾರಿ ದೂರ', 'ಚೋರ ಚರಣದಾಸ', 'ಶಾಪುರ ಸೀನಿಂಗಿ ಸತ್ಯ', 'ಮೆರವಣಿಗೆ', 'ಕೊಂದು ಕೂಗಿತ್ತು ನೋಡಾ', 'ಹುತ್ತವ ಬಡಿದರೆ', 'ಗವಿಸಿದ್ದೇಶ್ವರ', ಅಲ್ಲದೆ ಸೊಲಬಕ್ಕನವರ ಅವರ ಜೊತೆ 'ಕಿತ್ತೂರು ಚೆನ್ನಮ್ಮ', ಮತ್ತು 'ಏಳು ಕೋಟಿ ಎಲ್ಲಮ್ಮ' ಎರಡೂ ನಾಟಕಗಳನ್ನ ದೊಡ್ಡಾಟದ ಶೈಲಿಯಲ್ಲಿ ಮಾಡಿಸಿದ ಹೊಸ ಪ್ರಯೋಗಗಳು ನನ್ನ ಮನದಲ್ಲಿ ಅಚ್ಚಳಿಯದೇ ಉಳಿದ ಕಾರ್ಯಾಗಾರದ ನಾಟಕಗಳು.

ನಂತರ NSD ಮುಗಿಸಿ ಡಿಗ್ರಿ ಪಡೆದ ಬಸು ಬಂದು ನಾನೆಲ್ಲೆಲ್ಲಿ ಕಾರ್ಯಾಗಾರಗಳನ್ನ ಮಾಡಿದೆನೋ ಅಲ್ಲೆಲ್ಲ 2ನೇ ಸುತ್ತಿನ ಕಾರ್ಯಾಗಾರ ಮಾಡಿ, ಸಮುದಾಯ ಗುಣಗಳನ್ನ ಗಟ್ಟಿಗೊಳಸ್ತಾ ಬಂದು ಸಮುದಾಯ ಸಾಂಸ್ಕೃತಿಕ ಚಲನಶೀಲತೆಗೆ ಕಾರಣರಾದ್ರು. ಸಿ. ಬಸವಲಿಂಗಯ್ಯನವರ ಕೆಲಸವೂ ಚಾರಿತ್ರಿಕವಾದದ್ದು.

- **ನೀವು ನೀನಾಸಂ ಹೆಗ್ಗೋಡಿನ ನಾಟಕ ಶಾಲೆಗೆ ಪ್ರಿನ್ಸಿಪಲ್ ಆಗಿದ್ರಿ ಅಂತ ಕೇಳಿದ್ದೆ....**

ಹೌದು... 1982 ಅಥವಾ 1983ರಲ್ಲಿ ಸುಬ್ಬಣ್ಣ ಅವರು ನೀನಾಸಂಗೆ ಒಂದು ನಾಟಕ ನಿರ್ದೇಶನ ಮಾಡಲು ಆಹ್ವಾನಿಸಿದ್ದರು. ಆಗ ಸುಬ್ಬಣ್ಣನವರೇ... 'ಸುಮ್ಮನೆ ಅಲ್ಲಿ ಇಲ್ಲಿ ಯಾಕೆ ಅಲೆದಾಡ್ತೀರಿ, ನಮ್ಮ ನಾಟಕ ಶಾಲೆಯ Prinicipal ಆಗಿ ಕೆಲಸ ಮಾಡಬಹುದಲ್ಲಾ? ನಮ್ಮ ಸ್ಕೂಲಿಗೂ ಒಂದು ಸಹಾಯ ಆಗುತ್ತೆ'

ಅಂದ್ರು, 2ವರ್ಷ ಪ್ರಿನ್ಸಿಪಾಲ್ ಅಂತ ಕೆಲಸ ಮಾಡಿದೆ ಆದ್ರೆ... ಅಲ್ಲೂ ನನಗೆ ನಿಗದಿತ ಪಗಾರ ಇರಲಿಲ್ಲ. ಆಗ ಏಣಗಿ ನಟರಾಜ, ಮೋಹನಚಂದ್ರ, ಕೆ. ಜಿ. ಕೃಷ್ಣಮೂರ್ತಿ ಇವರೆಲ್ಲ ಮೊದಲ ಬ್ಯಾಚಿನ ವಿದ್ಯಾರ್ಥಿಗಳು. ಎರಡನೇ ಬ್ಯಾಚಿಗೆ ಇಕ್ಬಾಲ್ ಅಹಮದ್, ಸುರೇಶ ಆನಗಳ್ಳಿ ಇವರೆಲ್ಲ ಇದ್ರು... ಇನ್ನೇನು ಹೆಗ್ಗೋಡಿನಲ್ಲಿ ಮನೆ ಮಾಡೋಣ ಅನಕೊಂಡಾಗ ಶ್ರೀ ಚಿದಂಬರರಾವ್ ಜಂಬೆ ಅವರು ಓಖಅ ಪದವಿ ಪಡಕೊಂಡ ಬಂದ ಮೇಲೆ ಅವರೇ ಪ್ರಿನ್ಸಿಪಾಲರಾದರು. ಸುಬ್ಬಣ್ಣನವರು ನನಗೆ 'ಶ್ರೀಯುತ ಗಂಗಾಧರಸ್ವಾಮಿ ನೀನಾಸಂ ನಾಟಕ ಶಾಲೆಗೆ 2ವರ್ಷ ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿದ್ದಾರೆ' ಅಂತ ಲೆಟರ್ ಕೊಟ್ರು, 1984 ರಲ್ಲಿ ನಾನು ಆದರ್ಶ ಫಿಲಂ ಇನ್‌ಸ್ಟಿಟ್ಯೂಟ್‌ನಲ್ಲಿ Acting Teacher ಅಂತ ಅಪಾಯಿಂಟ್‌ಮೆಂಟಾದೆ. ಆಗ ನನ್ನ ಮೊದಲ ಸಂಬಳ ರೂ. 1600/– ಇದು ಬದುಕಿನ ನನ್ನ ವೃತ್ತಿಯಲ್ಲಿ ನಿಗದಿಯಾದ ಮೊದಲ ಸಂಬಳ. 1984ರಿಂದ ನನ್ನ ಅಲೆಮಾರಿ ಜೀವನಕ್ಕೆ ತೆರೆಬಿದ್ದಂತಾಯ್ತು.... ಸಂಬಳ ಅಂತ ಶುರುವಾದ ಮೇಲೆ Duty ಅನ್ನೋ ಉದ್ಯೋಗ ಪ್ರಾರಂಭವಾಯ್ತು.... ಆದ್ರೆ ಸಮುದಾಯದಲ್ಲಿದ್ದಾಗ ಬೆಳಿಗ್ಗೆಯಿಂದ ಸಂಜೆತನ ನನ್ನ ಉದ್ಯೋಗವೇ ಅದೇ ಆಗಿತ್ತಲ್ಲ? 1984ರಿಂದ 1989ರವರೆಗೂ Acting Teacher ಆಗಿ ಕೆಲಸ ಮಾಡಿದ ಮೇಲೆ 1989ರಲ್ಲಿ ಬಿ. ವಿ. ಕಾರಂತ ಅವರು ಮೈಸೂರಿನಲ್ಲಿ ರಂಗಾಯಣಕ್ಕೆ Lecturer ಅಂತ ಆಯ್ಕೆ ಮಾಡಿದರು. ನಂತರ 2007ರಲ್ಲಿ ಪ್ರಸನ್ನ ರಂಗಾಯಣದ ನಿರ್ದೇಶಕರಾದಾಗ, ಧಾರವಾಡ ರಂಗಾಯಣ ಪ್ರಾರಂಭವಾಗಿತ್ತು. ಅಲ್ಲಿಗೆ Repertory Chief ಆಗಿ 2007ರಿಂದ 2009ರವರೆಗೂ ಸೇವೆ ಸಲ್ಲಿಸಿದೆ. 2009ರಲ್ಲಿ ರಂಗಾಯಣದ ನೌಕರಿಯಿಂದ ನಿವೃತ್ತನಾದೆ.

**– ಶಂಕರಯ್ಯಾ ಆರ್. ಘಂಟಿ**

ಈಮಾಸ ನಾಟಕ, ಜೂನ್ 2016

◆

## ರಂಗಜಂಗಮಗೆ ಶರಣೆಂದೇವು

### ಸಮಾಜ ಪರಿವರ್ತನೆಗೆ ದೂರದೃಷ್ಟಿ ರಂಗ ಭೂಮಿ....

ಹೀಗಂತ ನಂಬಿದವರು ಗಂಗಾಧರಸ್ವಾಮಿ ಪ್ರಭಯ್ಯನ ಮಠ. ಹೀಗೆಂದು ಹೇಳಿದರೆ ಯಾರಿಗೂ ಅರ್ಥವಾಗುವುದಿಲ್ಲ. ಆದರೆ ಪಿ. ಗಂಗಾಧರಸ್ವಾಮಿ

ಏಂದರೆ ಥಟ್ಟನೆ ಅರ್ಥವಾಗುತ್ತದೆ. ರಂಗಭೂಮಿಯ ಪರಿಣಾಮ ತಕ್ಷಣ ಕಾಣುವುದಿಲ್ಲ. ಅದು ದೂರಗಾಮಿ ಎಂದು ನಾಡಿನ ಉದ್ದಗಲಕ್ಕೂ ಸಂಚರಿಸಿ ರಂಗತರಬೇತಿ ಶಿಬಿರಗಳನ್ನು ನಡೆಸಿ, ನಾಟಕ ಪ್ರದರ್ಶಿಸುವ ಮೂಲಕ ಹೊಸ ಕಲಾವಿದರನ್ನು ಮತ್ತು ತಂತ್ರಜ್ಞರನ್ನು ಹುಟ್ಟು ಹಾಕಿದ ಹೆಗ್ಗಳಿಕೆ ಅವರದು.

**– ಗಣೇಶ ಅಮೀನಗಡ**

ಮೆಟ್ರೋ, ಪ್ರಜಾವಾಣಿ (ಹುಬ್ಬಳ್ಳಿ–ಧಾರವಾಡ)

❐

## ಅನುಬಂಧ–2

# ಪಿ. ಗಂಗಾಧರಸ್ವಾಮಿ ಅವರ ಕೆಲವು ವಿವರಗಳು

**ಅನುಭವ:** 1969 ರಿಂದ ಕರ್ನಾಟಕ ರಂಗಭೂಮಿ ಚಳುವಳಿಯಲ್ಲಿ ಎಲ್ಲ ವಿಭಾಗದಲ್ಲಿ ರಾಜ್ಯಾದ್ಯಂತ ನಿರಂತರವಾಗಿ ಸಕ್ರಿಯ ಭಾಗವಹಿಸುವಿಕೆ.

**ಅನುಭವ:** 1989ರಿಂದ ರಂಗಾಯಣ, ಮೈಸೂರು ಇಲ್ಲಿ ಪ್ರಶಿಕ್ಷಕ ನಂತರ ರಂಗಾಯಣ ಧಾರವಾಡ ಘಟಕದ ಮುಖ್ಯಸ್ಥರಾಗಿ ಜುಲೈ 2007 ರಿಂದ ಏಪ್ರಿಲ್ 2009ರ ವರೆಗೆ ಸೇವೆ. ನಂತರ ವಯೋನಿವೃತ್ತಿ. ಪ್ರಸ್ತುತ ಮೈಸೂರು ವಿಶ್ವವಿದ್ಯಾನಿಲಯದ ಗುಬ್ಬಿ ವೀರಣ್ಣ ಪೀಠದ ರಂಗತಜ್ಞರಾಗಿ ಸೇವೆ. ರಾಜ್ಯಾದ್ಯಂತ ರಂಗಸಂಸ್ಥೆಗಳಿಗೆ ಮಾರ್ಗದರ್ಶಕರಾಗಿ, ತರಬೇತುದಾರರಾಗಿ ಹಾಗೂ ರಂಗಶಿಕ್ಷಣದಲ್ಲಿ ಸೇವೆ.

**ಸಂಘಟನೆ:** ಸಮುದಾಯ ಸಾಂಸ್ಕೃತಿಕ ಸಂಘಟನೆಯ ಪ್ರಾರಂಭಿಕ ಸದಸ್ಯ. ಸಮುದಾಯ ರಾಜ್ಯ ಸಮಿತಿಯ ಉಪಾಧ್ಯಕ್ಷನಾಗಿ, ಕಾರ್ಯದರ್ಶಿಯಾಗಿ ಕೆಲಸ ನಿರ್ವಹಣೆ. ರಾಜ್ಯಾದ್ಯಂತ ಸುತ್ತಿ ಸಮುದಾಯದ ಧಾರವಾಡ, ಗುಲ್ಬರ್ಗ, ಸಿಂಧನೂರು, ಬೀದರ್, ರಾಯಚೂರು, ಕುಷ್ಠಗಿ ಮುಂತಾದ ಅನೇಕ ಘಟಕಗಳನ್ನು ಪ್ರಾರಂಭಿಸಿ ಕಾರ್ಯಾಗಾರಗಳನ್ನು ನಡೆಸಿ ಸಕ್ರಿಯವಾಗಿ ತರಬೇತುದಾರನಾಗಿ ಕೆಲಸ ನಿರ್ವಹಣೆ. ರಾಜ್ಯದ ರಾಜಕೀಯ ದಿಕ್ಕನ್ನೇ ಬದಲಿಸಿದ ಸಮುದಾಯ ಸಂಘಟಿಸಿದ ರಾಜ್ಯ ಮಟ್ಟದ ಜಾಥಾಗಳಲ್ಲಿ ಸಂಘಟಕನಾಗಿ, ನಾಟಕ ನಿರ್ದೇಶಕನಾಗಿ, ತರಬೇತುದಾರನಾಗಿ, ನಟನಾಗಿ ಕೆಲಸ ನಿರ್ವಹಣೆ.

ಕರ್ನಾಟಕ ಪ್ರಾಚೀನ ಕಲೆಯಾದ ದೊಡ್ಡಾಟವನ್ನು ಪುನರುಜ್ಜೀವನಗೊಳಿಸುವ ಉದ್ದೇಶದಿಂದ ಕೊಂಡಜ್ಜಿಯಲ್ಲಿ

ರಾಜ್ಯ ಮಟ್ಟದ ದೊಡ್ಡಾಟ ತರಬೇತಿ ಕಾರ್ಯಾಗಾರ ನಡೆಸಿ 'ಸಂದೋಪಸುಂದ' ದೊಡ್ಡಾಟವನ್ನು ಹಲವು ಹತ್ತು ಕಡೆ ಪ್ರದರ್ಶನಕ್ಕೆ ಸಂಘಟಿಸಿ ದೊಡ್ಡಾಟಕ್ಕೆ ಒಂದು ಹೊಸ ಆಯಾಮ ನೀಡುವ ನಿಟ್ಟಿನಲ್ಲಿ ಕಾರ್ಯನಿರ್ವಹಣೆ.

ಹಾವೇರಿ ಜಿಲ್ಲೆಯ ಶಿಗ್ಗಾಂವ್ ತಾಲ್ಲೂಕಿನ ಹುಲಸೋಗಿಯ ದೊಡ್ಡಾಟ ಟ್ರಸ್ಟ್ ಆಶ್ರಯದಲ್ಲಿ 'ಏಳುಕೊಳ್ಳದ ಎಲ್ಲಮ್ಮ', 'ಕಿತ್ತೂರು ಚೆನ್ನಮ್ಮ' 'ದೊಡ್ಡಾಟದ ಪ್ರಸಂಗಗಳನ್ನು ಸಿದ್ದಪಡಿಸಿ 'ದೊಡ್ಡಾಟಗಳ ಅಡ್ಡಾಟ' (A Folk Theatre Repertory) ಕಾರ್‍ಯಕ್ರಮದ ಅಡಿಯಲ್ಲಿ ರಾಜ್ಯಾದ್ಯಂತ ನೂರಾರು ಪ್ರದರ್ಶನಗಳಾಗುವಂತೆ ಸಂಘಟಿಸಿ ಯಶಸ್ವಿಯಾಗಿ ಕಾರ್ಯನಿರ್ವಹಣೆ.

**ರಂಗಾಯಣದಲ್ಲಿ:** 1989 ರಿಂದ ಪ್ರಶಿಕ್ಷಕ (ನೇಪಥ್ಯ) ಹುದ್ದೆ ಚಿಣ್ಣರ ಮೇಳ, ಅಕ್ಕ, ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದಲ್ಲಿ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಣೆ ಮತ್ತು ಭಾರತೀಯ ರಂಗಶಿಕ್ಷಣ ಸಂಸ್ಥೆಯಡಿಯಲ್ಲಿ ಅನೇಕ ತರಬೇತಿ ಕಾರ್ಯಾಗಾರ ನಿರ್ವಹಣೆ.

**ಆಡಳಿತಗಾರರಾಗಿ ಅನುಭವ:** ರಂಗಾಯಣದ ರಂಗಕಿಶೋರ-ಸೀಡಾ ಮತ್ತು ಸ್ವೀಡಿನ್ ಐಟಿಐ ಸಹಯೋಗದೊಂದಿಗೆ ನಡೆದ ಶಿಕ್ಷಣದಲ್ಲಿ ರಂಗಭೂಮಿ ಯೋಜನೆಯ ಸಂಯೋಜಕನಾಗಿ ಅನುಭವ. ರಂಗಾಯಣದ ಮೊದಲ ನಿರ್ದೇಶಕರಾದ ಶ್ರೀ ಬಿ.ವಿ. ಕಾರಂತರಲ್ಲದೇ ಇತರೆ ನಿರ್ದೇಶಕರೊಂದಿಗೆ ಕೆಲಸ ಮಾಡಿದ ಅನುಭವ, ರಂಗಾಯಣಕ್ಕೆ ಅತಿಥಿ ನಿರ್ದೇಶಕರಾಗಿ ಬಂದ ಕನ್ಹಯ್ಯಲಾಲ್, ಫ್ರಿಜ್ ಬೆನವಿಟ್ಜ್ ಮುಂತಾದವರೊಂದಿಗೆ ಕೆಲಸ ಮಾಡಿದ ಅನುಭವ.

ರಂಗಾಯಣ ಧಾರವಾಡ ಘಟಕದ ಮುಖ್ಯಸ್ಥರಾಗಿ ಜುಲೈ 2007 ರಿಂದ ಏಪ್ರಿಲ್ 2009ರ ವರೆಗೆ ಸೇವೆ. ನಂತರ ವಯೋನಿವೃತ್ತಿ. ಪ್ರಸ್ತುತ ಮೈಸೂರು ವಿಶ್ವವಿದ್ಯಾನಿಲಯದ ಗುಬ್ಬಿ ವೀರಣ್ಣ ಪೀಠದ ರಂಗತಜ್ಞರಾಗಿ

ಸೇವೆ. ರಾಜ್ಯಾದ್ಯಂತ ರಂಗಸಂಸ್ಥೆಗಳಿಗೆ ಮಾರ್ಗದರ್ಶಕರಾಗಿ, ತರಬೇತುದಾರರಾಗಿ ಹಾಗೂ ರಂಗಶಿಕ್ಷಣದಲ್ಲಿ ಸೇವೆ.

| ನಟನೆ: | ನಾಟಕ | ನಿರ್ದೇಶನ |
|---|---|---|
| | ಸಂಗ್ಯಾಬಾಳ್ಯ | ಚಂದ್ರಶೇಖರ ಕಂಬಾರ |
| | ದಂಗೆಯ ಮುಂಚಿನ ದಿನಗಳು | ಪ್ರಸನ್ನ |
| | ತಾಯಿ | ಪ್ರಸನ್ನ |
| | ಕುಬಿ ಮತ್ತು ಇಯಾಲ | ಪ್ರಸನ್ನ |
| | ಸತ್ತವರ ನೆರಳು | ಬಿ.ವಿ. ಕಾರಂತ |
| | ಪಂಚಮ | ಸಿ.ಜಿ. ಕೃಷ್ಣಸ್ವಾಮಿ |
| | ಎಲ್ಲರಂಥವನಲ್ಲ ನನಗಂಡ | ಎನ್.ಎಸ್. ವೆಂಕಟರಾಂ |
| | ಕತ್ತಲೆದಾರಿ ದೂರ | ಟಿ.ಎನ್. ನರಸಿಂಹನ್ |
| | ಗೌರಿ | ಎಸ್. ಆನಂದ |
| | *ಅಲ್ಲದೆ ರಂಗಾಯಣದಲ್ಲಿ* | |
| | ಕೃಷ್ಣೇಗೌಡನ ಆನೆ | ಅರ್. ನಾಗೇಶ್ |

ಮತ್ತು ಅನೇಕ ಬೀದಿ ನಾಟಕಗಳು ಹಾಗೂ ಜಾಥಾ ನಾಟಕಗಳು ನಿರ್ದೇಶನ

**(ನಾಟಕಗಳು):** ಕೊಂದುಕೂಗಿತ್ತು ನೋಡಾ, ಮೆರವಣಿಗೆ, ವಾರೀಚನ ಬಂಧುಗಳು ದೊಡ್ಡಪ್ಪ, ಕತ್ತಲೆದಾರಿ ದೂರ ಚಿಕ್ಕದೇವಭೂಪ, ರಂಗಾಪುರದ ರಾಮಾಯಣ ಹಾವ ತುಳಿದೇನ ಮಾನಿನಿ, ಚೋರ ಚರಣದಾಸ ಅಂದು–ಇಂದು– ಎಂದೆಂದೂ! ಹೊಸ ಬಾಳಿನೆಡೆಗೆ, ಪಂಚಮ ಕದಡಿದ ನೀರು, ದೇವಲೋಕದಲ್ಲಿ ಮೀಟಿಂಗಂತೆ ಬೆಳೆದವರು, ಬಸವಜ್ಯೋತಿ, ದಿವ್ಯಚೇತನ ಕೋಪಣಾಚಲದ ಗವಿಸಿದ್ಧೇಶ್ವರರು, ಚಾಳೀಶ, ಮೃಚ್ಛಕಟಿಕ ರೋಡ್ ಟು ಮೆಕ್ಕ, ಗಟ್ಟಿಗಿತ್ತಿ, ಪಾದುಕ ಕಿರೀಟಿ ಅಲ್ಲದೆ *ರಂಗಾಯಣದಲ್ಲಿ* ಪ್ರತಿಶೋಧ, ಅಶ್ವಮೇಧ, ಅಲೆಗಳಲ್ಲಿ ರಾಜಹಂಸಗಳು, ಸಿರಿಸಂಪಿಗೆ ತುಟ್ಟಿಯುಬ್ಬಿಸಿ ಶಿಳ್ಳೆಹಾಕು, ಆ ಅಜ್ಜ ಈ ಮೊಮ್ಮಗ ಬೀಚಿ ಬುಲೆಟ್ಸ್, ದಿ ರೋಡ್ ಟು ಮೆಕ್ಕ ಕುದುರೆ ಬಂತು ಕುದುರೆ ಸಾಕ್ಷರತೆ ಆಂದೋಲನದಲ್ಲಿ ಮಾನವೀಯ ಹಕ್ಕುಗಳ ಪ್ರತಿಪಾದಿತ ಅನೇಕ ಬೀದಿ ನಾಟಕಗಳು

**ರಂಗತರಬೇತಿ ಕಾರ್ಯಾಗಾರದ ನಿರ್ದೇಶನ:**

1976 ರಲ್ಲಿ ಕ್ಯಾಲಿಕಟ್ ವಿಶ್ವವಿದ್ಯಾನಿಲಯದಲ್ಲಿ (ಪೆರವನ್ನಾಮುಳಿ)

1987, 1988 ಜವಹರ ಬಾಲಭವನ, ಬೆಂಗಳೂರು

1989, 1991 ಜವಹರ ಬಾಲಭವನ, ಮೈಸೂರು

ಅಮರ ಕಲಾಸಂಘ ಮೈಸೂರು, ಗೆಳೆಯರ ಬಳಗ, ಬೆಂಗಳೂರು. ವಿರಂಚಿ ಕಲಾಬಳಗ ಕೊಪ್ಪಳ, ಜೆ.ಎಸ್.ಎಸ್.ಕಲಾಮಂಟಪ, ಮೈಸೂರು.

ಕರ್ನಾಟಕ ನಾಟಕ ಅಕಾಡೆಮಿ ಸಹಯೋಗದೊಂದಿಗೆ

1979 ನೀನಾಸಂ ಹೆಗ್ಗೋಡು

1981 ಸೃಜನ ವೇದಿಕೆ, ಬಾಗಲಕೋಟೆ

1982 ಸ್ನೇಹರಂಗ, ಇಳಕಲ್

1983 ಗುರುಪ್ರಸಾದ ನಾಟ್ಯ ಸಂಘ, ಕಡಪಟ್ಟಿ ಕ್ಯಾಂಪ್, ಹುಬ್ಬಳ್ಳಿ

1985 ರಂಗಭೂಮಿ, ಉಡುಪಿ. ಸಮುದಾಯ, ಕೆ.ಜಿ.ಎಫ್.

1986 ಮಾಧ್ಯಮ, ಹಗರಿ ಬೊಮ್ಮನಹಳ್ಳಿ, ಹೊಸಪೇಟೆ

1987 ಕಲಾಸಂಗಮ, ಬಾಗಲಕೋಟೆ

1988 ಗೆಳೆಯರ ಬಳಗ, ಸಿಂಧಗಿ. ನಾವು, ಹೊಸಪೇಟೆ.

ಅಲ್ಲದೆ ರಾಜ್ಯಾದ್ಯಂತ ಕಾಲೇಜು ವಿದ್ಯಾರ್ಥಿಗಳಿಗೆ, ಸಾಕ್ಷರತಾ ಆಂದೋಲನಕ್ಕಾಗಿ ಮಂಡ್ಯ, ಮೈಸೂರು, ಶಿವಮೊಗ್ಗ, ರಾಯಚೂರು, ಗುಲ್ಬರ್ಗ, ಬೀದರ್ ಜಿಲ್ಲೆಗಳಲ್ಲಿ

**ವಿನ್ಯಾಸ :** ಸ್ವಂತ ನಿರ್ದೇಶನದ ಎಲ್ಲ ನಾಟಕಗಳಿಗೆ ರಂಗ, ಬೆಳಕು, ವಸ್ತ್ರ ವಿನ್ಯಾಸ. ಬೆಂಗಳೂರಿಗೆ ಬಂದ ಲಂಡನ್ನಿನ ನ್ಯೂ ಶೇಕ್ಸ್‌ಪಿಯರ್‌ನ ಕಂಪನಿಗೆ ಸ್ಥಳೀಯ ರಂಗ ನಿರ್ವಾಹಕನಾಗಿ ಕೆಲಸ ನಿರ್ವಹಣೆ.

ನ್ಯೂಯಾರ್ಕಿನಲ್ಲಿ ಪ್ರದರ್ಶನ ಕಂಡ ರಂಗಾಯಣದ ಹಿಪೋಲಿಟಸ್ ನಾಟಕಕ್ಕೆ ತಾಂತ್ರಿಕ ನಿರ್ದೇಶಕನಾಗಿ ಕೆಲಸ ನಿರ್ವಹಣೆ. ರಂಗಾಯಣದ ಬಹುತೇಕ ನಾಟಕಗಳಿಗೆ ಬೆಳಕು ವಿನ್ಯಾಸ.

**ಚಲನಚಿತ್ರ:** ನಟನಾಗಿ–ಗ್ರಹಣ (ರಾಷ್ಟ್ರೀಯ ಪುರಸ್ಕಾರ ಪಡೆದ ಚಲನಚಿತ್ರ), ಬೆಳ್ಳಿನಾಗ. ನಿರ್ದೇಶಕನಾಗಿ–ಆದರ್ಶ ಫಿಲಂ ಇನ್‌ಸ್ಟಿಟ್ಯೂಟ್‌ನ ವಿದ್ಯಾರ್ಥಿಗಳಿಗಾಗಿ ಹಲವು ಅಧ್ಯಯನ ಚಿತ್ರಗಳು.

**ದೂರದರ್ಶನ (ನಿರ್ದೇಶನ):** ಹೈದರಾಬಾದ್ ಕೇಂದ್ರಕ್ಕೆ ಕತ್ತಲೆದಾರಿ ದೂರ, ಹುತ್ತವ ಬಡಿದರೆ, ಬೆಂಗಳೂರು ಕೇಂದ್ರಕ್ಕೆ ಸುಂದೋಪಸುಂದ, ಅಶ್ವಮೇಧ, ಅರಹಂತ.

**ಲೇಖಕರಾಗಿ:** ಡಿ.ಎಸ್.ಇ.ಆರ್.ಟಿ. ಸಂಸ್ಥೆಯಿಂದ ಹೊರತಂದ ನಾಟಕದ ಪಠ್ಯಪುಸ್ತಕಕ್ಕೆ ಲೇಖನ, ಹಲವು ಪತ್ರಿಕೆಗಳಿಗೆ ರಂಗಲೇಖನಗಳು.

**ಅನುವಾದಕನಾಗಿ:** ಬಾದಲ್ ಸರ್ಕಾರ್ ಅವರ 'ಜುಲೂಸ್' ಮನ್ನು ಭಂಡಾರಿ ಅವರ 'ಮಹಾಭೋಜ' ಪ್ರಶಸ್ತಿ ಹಾಗೂ

**ಸನ್ಮಾನ:** ಕರ್ನಾಟಕ ನಾಟಕ ಅಕಾಡೆಮಿ – 1996

ಹಂಸ ಪ್ರಶಸ್ತಿ – 2003

ಖ್ಯಾತ ಸಾಹಿತಿಗಳಾದ ಶ್ರೀ ಶಿವರಾಮ ಕಾರಂತ ಅವರಿಂದ ಸನ್ಮಾನ – 1985

(ಉಡುಪಿ ರಂಗಭೂಮಿ ತಂಡಕ್ಕೆ ತರಬೇತಿ ನೀಡಿದಾಗ)

ಹುಟ್ಟೂರಾದ ಮುಂಡರಗಿಯಲ್ಲಿ ಸಾಹಿತಿ-ಕಲಾವಿದರಿಂದ ಸನ್ಮಾನ – 1992

(ನ್ಯೂಯಾರ್ಕಿನಲ್ಲಿ ಹಿಪೋಲಿಟಸ್ ನಾಟಕಕ್ಕೆ ತಾಂತ್ರಿಕ ನಿರ್ದೇಶಕನಾಗಿ ಕೆಲಸ ಮಾಡಿ ಮರಳಿದಾಗ)

ಸಮುದಾಯ 25ನೇ ವರ್ಷಾಚರಣೆಯಲ್ಲಿ ಶ್ರೀ ಎಂ.ಪಿ. ಪ್ರಕಾಶ್ ಅವರಿಂದ ಸನ್ಮಾನ – 1996

ಬೆಂಗಳೂರಿನ ರಂಗನಿರಂತರದಿಂದ ಸನ್ಮಾನ – 1996

ಮೈಸೂರಿನ ರಂಗಕಲಾವಿದರಿಂದ ಸನ್ಮಾನ – 1996

ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಕನ್ನಡ ಕಲಾಬಳಗದಿಂದ ಸನ್ಮಾನ– 1997

ಗದಗ ಜಿಲ್ಲಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಮುಂಡರಗಿಯಲ್ಲಿ ಸತ್ಕಾರ–2000

ಸಾಂದರ್ಭಿಕವಾಗಿ ರಂಗತರಬೇತಿ ಸಮಾರೋಪ ಹಾಗೂ ಹತ್ತಾರು ಪ್ರಯೋಗಗಳ ಸಂದರ್ಭದಲ್ಲಿ ಸತ್ಕಾರ.

ಸಾಣೆಹಳ್ಳಿಯ ಶ್ರೀ ಶಿವಕುಮಾರ ಕಲಾಸಂಘ ನೀಡುವ ಪ್ರತಿಷ್ಠಿತ ಶ್ರೀ ಶಿವಕುಮಾರ ಪ್ರಶಸ್ತಿ – 2006.

**ಕಲಾ ಶೈಕ್ಷಣಿಕ ಸಂಸ್ಥೆಗಳಲ್ಲಿ:** ಅಧ್ಯಾಪಕನಾಗಿ–1980–81 ನೀನಾಸಂ ರಂಗಶಿಕ್ಷಣ ಸಂಸ್ಥೆ, ಹೆಗ್ಗೋಡು

ಪ್ರಾಂಶುಪಾಲನಾಗಿ–1981–82 ನೀನಾಸಂ ರಂಗಶಿಕ್ಷಣ ಸಂಸ್ಥೆ, ಹೆಗ್ಗೋಡು

1984–89 ಆದರ್ಶ ಫಿಲಂ ಇನ್‌ಸ್ಟಿಟ್ಯೂಟ್, ಬೆಂಗಳೂರು.

1989 ರಿಂದ ಪ್ರಶಿಕ್ಷಕ (ನೇಪಥ್ಯ) ಹುದ್ದೆ, ರಂಗಾಯಣ ಮೈಸೂರು.

2007 ರಿಂದ 2009 ಮುಖ್ಯಸ್ಥರು, ರಂಗಾಯಣ, ಧಾರವಾಡ


07-02-2012 ರಿಂದ 06-02-2012ರವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಶ್ರೀ ಗುಬ್ಬಿ ವೀರಣ್ಣ ಪೀಠದಲ್ಲಿ ರಂಗತಜ್ಞರಾಗಿ ಸೇವೆ. 2009ರಲ್ಲಿ ರಂಗಾಯಣ ಧಾರವಾಡ ಘಟಕದ ಮುಖ್ಯಸ್ಥರಾಗಿ ನಿವೃತ್ತಿಯಾದ ನಂತರ ಪ್ರಸ್ತುತ ರಾಜ್ಯಾದ್ಯಂತ ರಂಗ ಸಂಸ್ಥೆಗಳಿಗೆ ಮಾರ್ಗದರ್ಶಕರಾಗಿ, ತರಬೇತುದಾರರಾಗಿ ಹಾಗೂ ರಂಗಶಿಕ್ಷಣದಲ್ಲಿ ಸೇವೆ.


ಸಧ್ಯ ಶ್ರೀ ಹಂಸಲೇಖರವರ ದೇಶಿ ಪ್ರದರ್ಶನ ಕಲೆಗಳ ಸಂಸ್ಥೆಯಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಹಾಗೂ ರಂಗಾಯಣದ ಭಾರತೀಯ ರಂಗಶಿಕ್ಷಣ ಕೇಂದ್ರದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ.

50 ವರ್ಷಗಳಿಂದ ಕೆಲಸ ಮಾಡುತ್ತಾ ಬಂದಿರುವ ಮೈಸೂರಿನ ಜೆ.ಎಸ್.ಎಸ್. ಕಲಾಮಂಟಪಕ್ಕೆ ಹೊಸ ಆಯಾಮ ನೀಡುವ ನಿಟ್ಟಿನಲ್ಲಿ ಕಾರ್ಯನಿರ್ವಹಣೆ.

* * * *

# ಛಾಯಾಂಕಣ





ಬಾಳ ರಂಗ ಸಂಗಾತಿ – ಶೀಲಾಸ್ವಾಮಿ



ಬಾಳಕುಡಿಗಳಾದ ಸಮತಾ, ಸಂಘರ್ಷ



ಹೋಮಿಯೋಪತಿ ಪ್ರಮಾಣ ಪತ್ರ ಪಡೆದ ಕ್ಷಣ




ಕೋ. ಲ. ಕಾರಂತರ ಸಂದರ್ಶನ – ಸಿ. ಆರ್. ಭಟ್ಟರೊಂದಿಗೆ



ರಾಮಕೃಷ್ಣ ಹೆಗಡೆಯವರೊಂದಿಗೆ – ಸಮುದಾಯ ಪ್ರಧಾನ ಕಾರ್ಯದರ್ಶಿಯಾಗಿದ್ದಾಗ



ರಂಗಕಾರ್ಯಾಗಾರ – 'ರಂಗಭೂಮಿ, ಉಡುಪಿ'



ಶಿವರಾಮಕಾರಂತರಿಂದ ಸನ್ಮಾನ – 'ರಂಗಭೂಮಿ, ಉಡುಪಿ'



ನೀನಾಸಂ ರಂಗಶಿಕ್ಷಣದ ಮೊದಲ ತಂಡದ ವಿದ್ಯಾರ್ಥಿಗಳೊಂದಿಗೆ
ಏಣಗಿ ನಟರಾಜ್, ಕೆ. ಜಿ. ಕೃಷ್ಣಮೂರ್ತಿ, ಮಹಾಬಲೇಶ್, ಮೋಹನ ಚಂದ್ರ,
ವಿಶ್ವಣ್ಣ, ಶರತ್ ಮುಂತಾದವರು



ಸಿ.ಜಿ.ಕೆ. ನಿರ್ದೇಶಿಸಿದ ಮೊದಲ ನಾಟಕ 'ಪಂಚಮ' ಮತ್ತು 'ಯಾರು ನೀನು
ಗೆಳೆಯ ಯಾರು' ತಂಡ, ತುಮಕೂರು
ಸಿ, ಜಿ. ಕೆ., ಲೋಹಿತಾಶ್ವ, ಗುಂಡಣ್ಣ, ಬಿ. ಆರ್. ರವೀಶ್, ಸನತ್ ಕುಮಾರ್,
ಅನಂತರಾಮ, ನಾಯಕ್, ಮುಂತಾದವರು



ಗೆಳೆಯ ಆರ್. ನಾಗೇಶರೊಂದಿಗೆ, ಶೀಲ ಮತ್ತು ಸಮತ




1978ರಲ್ಲಿ ಬಾದಲ್ ಸರ್ಕಾರ್‌ರ ರಂಗತರಬೇತಿ ಕಾರ್ಯಾಗಾರ
ಸುರೇಶ್ ಶೆಟ್ಟಿ, ವಾಲ್ಟರ್ ಡಿಸೋಜ, ಗುಡಿಹಳ್ಳಿ ನಾಗರಾಜ, ಟಿ.ವಿ.ಎಂ.,
ಆರ್. ಪ್ರಕಾಶ್, ಗುಂಡಣ್ಣ, ಶೀಲಾಸ್ವಾಮಿ, ಬಾಯರಿ, ಜನ್ನಿ, ಚಂದ್ರಶೇಖರ
ಬಾಳೆ, ಅಚಾರ್ಯ ಮುಂತಾದವರು



ಕಾರಂತರೊಂದಿಗೆ ರಂಗಾಯಣದ ಕಲಾವಿದರು, ಸಿಬ್ಬಂದಿ – ಅಮೇರಿಕ ಪ್ರವಾಸಕ್ಕೆ ಮುಂಚೆ



ರಂಗಾಯಣದಲ್ಲಿ ಕಾರಂತರೊಂದಿಗೆ



ರಂಗಾಯಣದಲ್ಲಿ ಪ್ರಸನ್ನ ಹಾಗು ಜಿ. ಎಚ್. ನಾಯಕರೊಂದಿಗೆ



ಜೆ. ಹೆಚ್. ಪಟೇಲ್ ಮತ್ತು ಎಂ. ಪಿ. ಪ್ರಕಾಶರೊಂದಿಗೆ



ಸೃಜನ ವೇದಿಕೆ ಬಾಗಲಕೋಟೆ- ದೊಡ್ಡಪ್ಪ ನಾಟಕದ ದೃಶ್ಯ



ರಂಗಾಯಣದಲ್ಲಿ ಸಚಿವೆ ರಾಣಿ ಸತೀಶ್ ಹಾಗೂ ರಂಗಕರ್ಮಿಗಳಾದ ಎ. ಎಸ್. ಮೂರ್ತಿ, ಅಬ್ದುಲ್ಲ, ಆನಂದ ಗಾಣಿಗ, ಪ್ರಸನ್ನ ಮತ್ತು ನಾಗೇಶ್



ಜಿ. ಕೆ. ಗೋವಿಂದರಾವ್ ಅವರೊಂದಿಗೆ



ರಂಗಾಯಣಕ್ಕಾಗಿ ನಿರ್ದೇಶಿಸಿದ ಯಶಸ್ವಿ ನಾಟಕ 'ಜೀಚಿ ಬುಲೆಟ್ಸ್' ತಾಲೀಮಿನಲ್ಲಿ



ಬಾಗಲಕೋಟೆಯಲ್ಲಿ
ದೊಡ್ಡಪ್ಪ ನಾಟಕದ ದೃಶ್ಯ



ಗದಗ್ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ
ಸಚಿವ ಎಸ್. ಎಸ್. ಪಾಟೀಲರಿಂದ
ಸನ್ಮಾನ




ಮೈಸೂರಿನ ಜೆ. ಎಸ್. ಎಸ್. ಕಲಾಮಂಟಪಕ್ಕಾಗಿ ನಿರ್ದೇಶಿಸಿದ 'ದಿವ್ಯಚೇತನ' ನಾಟಕ



ಹುಲಸೋಗಿಯ ದೊಡ್ಡಾಟಗಳ ಅಡ್ಡಾಟಕ್ಕಾಗಿ ನಿರ್ದೇಶಿಸಿದ 'ಏಳು ಕೊಳ್ಳದ ಎಲ್ಲಮ್ಮ' ದೊಡ್ಡಾಟ



ರಂಗಾಯಣದ ಕೃಷ್ಣೇಗೌಡರ ಆನೆ ನಾಟಕದಲ್ಲಿ ನಟನಾಗಿ



ಕಲಾವಿದ ಶ್ರೀ ಟಿ. ಬಿ. ಸೊಲಬಕ್ಕನವರೊಂದಿಗೆ ದೊಡ್ಡಾಟದ ತರಬೇತಿ ಸಂದರ್ಭದಲ್ಲಿ




ಪ್ರತಿಷ್ಠಿತ ಶಿವಕುಮಾರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ
ಸಿರಿಗೆರೆ ಮಹಾಸ್ವಾಮಿಗಳಾದ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು,
ಶ್ರೀ ಶ್ರೀ ಪಂಡಿತಾರಾಧ್ಯ ಸ್ವಾಮಿಗಳು,
ಮುಖ್ಯ ಮಂತ್ರಿಗಳಾದ ಯಡಿಯೂರಪ್ಪನವರು, ಆದಿಚುಂಚನಗಿರಿ
ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಗಳು
ಹಾಗೂ ಕೃಷಿ ತಜ್ಞ ಪಾಳೇಕರ್ ಅವರೊಂದಿಗೆ



ರಂಗಾಯಣದಿಂದ ನಿವೃತ್ತರಾದಾಗ ಬೀಳ್ಕೊಡುಗೆ ಸಂದರ್ಭದಲ್ಲಿ
ಶ್ರೀ ಬಸವಲಿಂಗಯ್ಯ, ಕಾ. ತ. ಚಿಕ್ಕಣ್ಣ, ಶೀಲಸ್ವಾಮಿ ಹಾಗೂ ತಾರ ಸರಸ್ವತಿ